ವಾರ್ಷಿಕ ಚಂದಾ ರೂ.25/-

# ಮಾರ್ಚ್ ಜನಪದ

ಸಂಪುಟ-06 • ಸಂಚಿಕೆ-01 • ಅಕ್ಟೋಬರ್ 2022



Downloaded From:www.kpscvaani.com



ಸೆಪ್ಟೆಂಬರ್ 5 ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ ಶಿಕ್ಷಕರ ದಿನಾಚರಣೆಯ ಕಾರ್ಯಕ್ರಮದಲ್ಲಿ ಡಾ. ರಾಧಾಕೃಷ್ಣ ಮತ್ತು ಸಾವಿತ್ರಿ ಬಾಯಿ ಫುಲೆ ಅವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಅವರು ಪುಷ್ಪ ನಮನ ಸಲ್ಲಿಸಿದ ಸಂದರ್ಭ. ಚಿತ್ರದಲ್ಲಿ ವಿಧಾನಪರಿಷತ್ ಸದಸ್ಯರಾದ ಪುಟ್ಟಣ್ಣ ಅವರು ಇದ್ದಾರೆ.



ಸೆಪ್ಟೆಂಬರ್ 18 ರಂದು ಬೆಂಗಳೂರಿಗೆ ಆಗಮಿಸಿದ್ದ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಯಜನ್ ಅವರಿಗೆ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶ್ರೀಗಂಧದ ಹಾರ ಹಾಕಿ ಸ್ವಾಗತಿಸಿದ ಸಂದರ್ಭ.

Downloaded From:www.kpscvaani.com




ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-06 • ಸಂಚಿಕೆ-01 • ಅಕ್ಟೋಬರ್ 2022


**06** ಮಂಗಳೂರಿನಲ್ಲಿ ಸಾವಿರಾರು ಕೋಟಿ ಮೊತ್ತದ ಯೋಜನೆಗಳ ಲೋಕಾರ್ಪಣೆ
• ಹೆಚ್.ಜಿ. ರವಿರಾಜ್



**10** ಪ್ರವಾಹ ಪರಿಸ್ಥಿತಿ ನಿರ್ವಹಣೆಗೆ ತುರ್ತು ಕ್ರಮವಹಿಸಿದ ಸರ್ಕಾರ
• ಬಿ.ಜಿ.ಪೂರ್ಣಿಮ

**14** ಪುನರಾರಂಭಗೊಂಡ ಮಂಡ್ಯದ ಮೈಷುಗರ್ ಸಕ್ಕರೆ ಕಾರ್ಖಾನೆ
• ಯಗಟಿ ಮೋಹನ್

**16** ಐದು ರೂಪಾಯಿ ಡಾಕ್ಟರ್ ಎಸ್. ಸಿ. ಶಂಕರೇಗೌಡ
• ಡಿ. ಪಿ. ಮುರಳೀಧರ್



**19** ಆರೋಗ್ಯ ಕರ್ನಾಟಕಕ್ಕೆ ಅಭಿಯಾನ



**21** ನಾಲ್ಕು ಶತಮಾನ ಕಂಡಿರುವ ಮೈಸೂರು ಜಂಬೂಸವಾರಿ
• ಅಂಶಿ ಪ್ರಸನ್ನಕುಮಾರ್

**24** ಡಿ.ದೇವರಾಜ ಅರಸು ಪ್ರಶಸ್ತಿಗೆ ಭಾಜನರಾದ ಡಾ.ಅಣ್ಣಯ್ಯ ಕುಲಾಲ್

**26** ನಾಗಾವಿಯಲ್ಲಿ ಸಬರಮತಿ ಆಶ್ರಮ ಹೋಲುವ ತದ್ರೂಪ ಆಶ್ರಮ
• ಪಿ.ವಿ.ರಿಷಿಕೇಶ್

**29** ಗಾಂಧಿ ಎಂಬ ಆಲದ ಮರ
• ರವಿ.ಬ.ಹಾದಿಮನಿ

**33** ಪಟಾಕಿ ಹಚ್ಚುವ ವೇಳೆ ಇರಲಿ ಕಣ್ಣಿನ ಬಗ್ಗೆ ಎಚ್ಚರ
• ಉಮೇಶ್ ಕೊಲಿಗೆರೆ

**36** ರಾಯಚೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಮೇಳೈಸಿದ ಸಿರಿಧಾನ್ಯ ಮೇಳ
• ರಮೇಶ್ ಜಾಲಹಳ್ಳಿ

**38** ಅನ್ನದಾತರ ಆರ್ಥಿಕತೆಗೆ ಬಲ ನೀಡುತ್ತಿರುವ ಎರೆಹುಳು ತೊಟ್ಟಿ
• ಶ್ರೀನಿವಾಸ್ ಚಿತ್ರಗಾರ್

**40** ಯುವ ಪೀಳಿಗೆಯ ಯಶಸ್ಸಿನ ಮೆಟ್ಟಿಲು ಜಿಟಿಟಿಸಿ
• ನಾಗೇಶ

**42** ಅರಣ್ಯ ಪ್ರದೇಶ ವಾಸಿಗರ ಸಂಚಾರಕ್ಕೆ ಜನವನ ಸೇತುವೆ ಸೇವೆ
• ಚಾರ್ವಿಕಾ ಸಾನ್ವಿ

**44** ರೂಫ್ ಗಾರ್ಡನ್‌ಗೆ ಆಕರ್ಷಿತರಾಗುತ್ತಿರುವ ನಗರ ವಾಸಿಗರು
• ಎಸ್. ಭುವನೇಶ್ವರಿ

**47** ಐತಿಹಾಸಿಕ ಬೀದರ ಕೋಟೆ ಮೇಲೆ ಆಕರ್ಷಕ ಏರ್ ಶೋ
• ಜಿ. ಸುರೇಶ್

**50** ಪದಬಂಧ-35

**ಪ್ರಧಾನ ಸಂಪಾದಕರು**
ಡಾ॥ ಪಿ. ಎಸ್. ಹರ್ಷ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
ಡಿ.ಪಿ. ಮುರಳೀಧರ್
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

**ಉಪ ಸಂಪಾದಕರು**
ಬಿ. ಜಿ. ಪೂರ್ಣಿಮ

**ಪ್ರಕಾಶಕರು**
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು-50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ಸೆಪ್ಟೆಂಬರ್ ಮಾಹೆಯ ವಾರ್ತಾ ಜನಪದ ಮುಖ ಪುಟ ಅತ್ಯಾಕರ್ಷಕವಾಗಿದೆ. ಹರ್ ಘರ್ ತಿರಂಗಾ ಆಚರಣೆಯ ನಿಮಿತ್ತ ಹಾಕಲಾಗಿರುವ ಈ ಛಾಯಾ ಚಿತ್ರವು ದೇಶಾಭಿಮಾನವನ್ನು ಬಿಂಬಿಸುತ್ತದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರೇ ಹೇಳುವಂತೆ 'ಜನಪ್ರಿಯರಾಗುವುದು ಸುಲಭ. ಆದರೆ ಜನೋಪಯೋಗಿಯೂ ಆಗಬೇಕು ಎಂಬುದನ್ನು ಅವರು ಅಕ್ಷರಶಃ ಮಾಡಿ ತೋರಿಸುತ್ತಿದ್ದಾರೆ.

ಪತ್ರಿಕೆಯಲ್ಲಿ ಪ್ರಕಟವಾಗಿರುವ 'ಘೋಷಿತ ಯೋಜನೆಗಳ ಜಾರಿಯತ್ತ ಸರ್ಕಾರದ ದಿಟ್ಟ ಹೆಜ್ಜೆ' ಲೇಖನ ಓದಿದರೆ ಮುಖ್ಯಮಂತ್ರಿಗಳು ಒಂದು ವರ್ಷದ ಹಿಂದೆ ಪ್ರಕಟಿಸಿದ್ದ ಯೋಜನೆಗಳ ಜಾರಿಗೆ ಅವರು ಏನೆಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬುದು ತಿಳಿಯುತ್ತದೆ. 750 ಗ್ರಾಮ ಪಂಚಾಯತಿಗಳ ಸಂಕಲ್ಪಕ್ಕೆ ಹಾಕಿಕೊಂಡಿರುವ 9000 ಕಾಮಗಾರಿಗಳಲ್ಲಿ 6499 ಕಾಮಗಾರಿಗಳನ್ನು ಈ ಒಂದು ವರ್ಷದಲ್ಲಿ ಪೂರ್ಣಗೊಳಿಸಲಾಗಿದೆ ಎಂದರೆ ಸರ್ಕಾರ ಎಷ್ಟು ಕ್ರಿಯಾಶೀಲವಾಗಿದೆ ಎಂಬುದು ತಿಳಿಯುತ್ತದೆ.

**–ಗುರು ಪ್ರಿಯಾ, ಹಾಸನ**

* * *

ರೈತ ವಿದ್ಯಾನಿಧಿ ಯೋಜನೆಯಡಿ ನೇಕಾರರು, ಮೀನುಗಾರರು ಹಾಗೂ ಟ್ಯಾಕ್ಸಿ ಚಾಲಕರ ಮಕ್ಕಳಿಗೂ ವಿದ್ಯಾರ್ಥಿ ವೇತನ ನೀಡಲು ಸರ್ಕಾರ ಮುಂದಾಗಿದೆ ಎಂಬ ವಿಷಯವನ್ನು ತಮ್ಮ ಪತ್ರಿಕೆಯಿಂದ ತಿಳಿದು ತುಂಬಾ ಸಂತಸವಾಯಿತು. ಇಂತಹ ಉತ್ತಮ ಯೋಜನೆಗಳು ಆಗುತ್ತಿರುವುದನ್ನು ನೋಡಿದರೆ ಸರ್ಕಾರದ ಆಶಯವಾದ 'ಸರ್ವರ ವಿಕಾಸಕ್ಕಾಗಿ ಸಮೃದ್ಧ ಕರ್ನಾಟಕ' ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತಿದೆ.

**–ಹೆಚ್. ಆರ್. ರೂಪ, ರಾಮನಗರ**


* * *

ರಾಜ್ಯ ಸರ್ಕಾರವು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಧ ಆಚರಣೆಗಾಗಿ ಹಮ್ಮಿಕೊಂಡಿರುವ 'ಅಮೃತ ಭಾರತಿಗೆ ಕನ್ನಡದಾರತಿ' ಅಭಿಯಾನಕ್ಕೆ ಪ್ರಧಾನಮಂತ್ರಿ ಅವರು ತಮ್ಮ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಪ್ರಶಂಸಿಸಿರುವುದು ಹೆಮ್ಮೆಯ ವಿಚಾರ. ರಾಜ್ಯದಲ್ಲಿ ಹರ್ ಘರ್ ತಿರಂಗಾ ಕಾರ್ಯಕ್ರಮವನ್ನು ಕೂಡ ಸರ್ಕಾರವು ಯಶಸ್ವಿಯಾಗಿ ಆಚರಿಸಿದೆ. ಹಾಗಾಗಿ ಈ ಕಾರ್ಯಕ್ರಮದಲ್ಲಿ ಕೈಜೋಡಿಸಿದ್ದ ಎಲ್ಲರಿಗೂ ನನ್ನ ಅನಂತ ಅಭಿನಂದನೆಗಳು.

**–ಎನ್. ಭಾಗ್ಯ, ಹುಲಿಯೂರುದುರ್ಗ**

* * *

ತಮ್ಮ ಪತ್ರಿಕೆಯಲ್ಲಿ ಶಿಕ್ಷಕರ ದಿನಾಚರಣೆ ನಿಮಿತ್ತ ಬಾಗಲಕೋಟೆ ಜಿಲ್ಲೆಯ ಹುನಗುಂದ ಪಟ್ಟಣದ ನಿವೃತ್ತ ಶಿಕ್ಷಕರಾದ ಶ್ಯಾಮಣ್ಣ ಮೇಷ್ಟ್ರು ಅವರ ಶೈಕ್ಷಣಿಕ ಸೇವೆಯ ಕುರಿತು ಪ್ರಕಟವಾಗಿದ್ದ ಲೇಖನ ನಿಜವಾಗಿಯೂ ಎಲ್ಲಾ ನಿವೃತ್ತ ಶಿಕ್ಷಕರಿಗೆ ದಾರಿ ದೀಪವಾಗಲಿದೆ. ಅವರು ಮಕ್ಕಳ ಕಲಿಕೆಗೆಂದು ತಮ್ಮ ಮಾಸಿಕ ನಿವೃತ್ತಿ ವೇತನದ ಅರ್ಧ ಭಾಗವನ್ನು ಬೊಂಬೆ ಮತ್ತು ವಿಜ್ಞಾನದ ಸಲಕರಣೆಗಳನ್ನು ಖರೀದಿಸಲು ವ್ಯಯಿಸುವುದು ಹಾಗೂ 12 ಲಕ್ಷ ರೂ ಮೊತ್ತದ ಬೊಂಬೆಗಳು ಇವರ ಸಂಗ್ರಹದಲ್ಲಿದೆ ಎಂಬುದನ್ನು ತಿಳಿದು ಆಶ್ಚರ್ಯವಾಯಿತು.




ಅವರು ವಿಜ್ಞಾನವನ್ನು ಪ್ರಾತ್ಯಕ್ಷಿಕೆಗಳ ಮೂಲಕ ಆಟವಾಡಿಸುತ್ತಾ ಮಕ್ಕಳಿಗೆ ಹೇಳಿಕೊಡುವುದರಿಂದ ಮಕ್ಕಳು ಬೇಗನೆ ಗ್ರಹಿಸಿಕೊಳ್ಳಲು ಸಾಧ್ಯವಾಗುತ್ತದೆ. ಇವರಂತೆ ಮಾಡಲು ಸಾಧ್ಯವಿಲ್ಲದಿದ್ದರೂ ತಮ್ಮ ಜ್ಞಾನವನ್ನು ಬಡಮಕ್ಕಳ ಜ್ಞಾನ ಹೆಚ್ಚಿಸಲು ತಮ್ಮ ಅಮೂಲ್ಯ ಸಮಯವನ್ನು ಮುಡುಪಾಗಿಟ್ಟರೆ ಸಾಕು. ಖಂಡಿತವಾಗಿ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಕಾಣಬಹುದು.

**–ಶರತ್ ಗೌಡ, ಕಿರುಗಾವಲು**

* * *

ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿರುವ ಲೇಖನದಿಂದಾಗಿ ನನಗೆ ಭಾರತದ ಸ್ವಾತಂತ್ರ್ಯ ಹೋರಾಟಕ್ಕಾಗಿ ಹೋರಾಡಿದ ಉಮಾಬಾಯಿ ಕುಂದಾಪುರ ಅವರ ಕುರಿತು ತಿಳಿದುಕೊಳ್ಳಲು ಸಾಧ್ಯವಾಯಿತು. ಆ ಕಾಲದಲ್ಲೇ ಅವರು ಸ್ವಾತಂತ್ರ್ಯ ಹೋರಾಟಕ್ಕೆ ಮಹಿಳೆಯರನ್ನು ಒಟ್ಟುಗೂಡಿಸಿದ್ದು ಸಾಧನೆಯೇ ಸರಿ. ಅವರು ಸ್ವಾತಂತ್ರ್ಯ ಹೋರಾಟಕ್ಕಾಗಿ ನೀಡುವ ಉನ್ನತ ಪುರಸ್ಕಾರವಾದ 'ತಾಮ್ರ ಪತ್ರ'ವನ್ನು ನಿರಾಕರಿಸುವ ಜೊತೆಗೆ ಸರ್ಕಾರ ನೀಡುವ ಪಿಂಚಣಿಯನ್ನು ಸಹ ಪಡೆದುಕೊಳ್ಳದೆ ಕೊನೆಯವರೆಗೂ ಗಾಂಧಿವಾದಿಯಾಗಿಯೇ ಉಳಿದಿದ್ದರು ಎಂಬುದನ್ನು ಕೇಳಿ ತುಂಬಾ ಹೆಮ್ಮೆ ಎನಿಸಿತು.

**–ಕೃಷ್ಣವೇಣಿ, ಮುಳಬಾಗಿಲು**

ಮೈಸೂರು ನಗರಕ್ಕೆ ವಿದ್ಯುತ್ ದೀಪ ಬಂದು ಒಂದು ಶತಮಾನ ಕಳೆದಿರುವ ಇತಿಹಾಸವನ್ನು ಪರಿಚಯಿಸಿದ್ದು ಜ್ಞಾನಾರ್ಜನೆಗೆ ಉಪಯುಕ್ತ ಮಾಹಿತಿ ಎನಿಸಿತು. ಮೈಸೂರಿನವಳೇ ಆದ ನನಗೆ ಮೈಸೂರಿಗೆ ವಿದ್ಯುತ್ ದೀಪ ಬಂದ ಇತಿಹಾಸ ತಿಳಿಯುವಂತಾಯಿತು.

**–ಮಂಜುಳ ಸಿ, ಮೈಸೂರು**

'ವಾರ್ತಾ ಜನಪದ' ಮಾಸಿಕ ಈಗ www.kanaja.inನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ https://sevasindhu.karnataka.gov.in ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ-ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ-ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೇ,

ಕೇವಲ ಎರಡು ತಿಂಗಳ ಅವಧಿಯ ನಡುವೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರಾಜ್ಯಕ್ಕೆ ಮತ್ತೊಮ್ಮೆ ಆಗಮಿಸಿದ್ದರು. ಅವರು ಸೆಪ್ಟೆಂಬರ್ 2 ರಂದು ಮಂಗಳೂರಿನ ಗೋಲ್ಡ್ ಫಿಂಚ್ ಮೈದಾನದಲ್ಲಿ ಮೂರು ಸಾವಿರದ ಎಂಟುನೂರು ಕೋಟಿ ರೂ ವೆಚ್ಚದ ವಿವಿಧ ಯೋಜನೆಗಳ ಲೋಕಾರ್ಪಣೆ ಮತ್ತು ಶಿಲಾನ್ಯಾಸ ನೆರವೇರಿಸಿದರು.

ಲೋಕಾರ್ಪಣೆಗೊಂಡ ಮೂರು ಯೋಜನೆಗಳಿಂದ ಸಾವಿರಾರು ಜನರಿಗೆ ಉದ್ಯೋಗ ದೊರಕಲಿದೆ. ಶಿಲಾನ್ಯಾಸ ನೆರವೇರಿಸಲಾದ ನಾಲ್ಕು ಯೋಜನೆಗಳಿಂದ ಮುಂದಿನ ದಿನಗಳಲ್ಲಿ ಖಾದ್ಯ ತೈಲದ ಆಮದು ವೆಚ್ಚ ತಗ್ಗಲಿದೆಯಲ್ಲದೆ, ಉದ್ಯೋಗ ಸೃಜನೆಗೂ ಸಹಕಾರಿಯಾಗಲಿದೆ. ಭೂಮಿ ಪೂಜೆ ನೆರವೇರಿಸಲಾದ ಕುಳಾಯಿಯಲ್ಲಿನ ಇಪಿಸಿ ಮಾದರಿಯ ಮೀನುಗಾರಿಕೆ ಬಂದರು ಅಭಿವೃದ್ಧಿಯಿಂದ ಮೀನುಗಾರರ ಉತ್ಪನ್ನಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆ ಒದಗಲಿದೆ.

ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ಮಾಹೆಯಲ್ಲಿ ಮಳೆ ಪ್ರವಾಹದಿಂದ ಆದ ಹಾನಿಯ ಕುರಿತಂತೆ ಅಧ್ಯಯನಕ್ಕೆ ಆಗಮಿಸಿದ್ದ ಕೇಂದ್ರ ತಂಡಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅತ್ಯಂತ ನಿಖರವಾಗಿ ಹಾಗೂ ಪಾರದರ್ಶಕವಾಗಿ ಹಾನಿಯ ಅಂದಾಜುಪಟ್ಟಿಯನ್ನು ಸಿದ್ಧಪಡಿಸಿ ಪ್ರಸ್ತಾವನೆ ಸಲ್ಲಿಸಿದ್ದಾರೆ. ಕೇಂದ್ರ ಮಾರ್ಗಸೂಚಿಯಂತೆ ನ್ಯಾಯಯುತ ಪರಿಹಾರ ಒದಗಿಸುವಂತೆ ಕೂಡ ಅವರು ತಂಡಕ್ಕೆ ಮನವಿ ಮಾಡಿದ್ದಾರೆ.

ಬೆಂಗಳೂರಿನಲ್ಲಿ 90 ವರ್ಷದಿಂದ ಆಗದಿರುವ ದಾಖಲೆಯ ಮಳೆ ಕಳೆದ ಎರಡು ತಿಂಗಳಿನಲ್ಲಿ ಆಗಿರುವುದೇ ಮಳೆ ಹಾನಿ ಸಮಸ್ಯೆಗೆ ಕಾರಣವಾಗಿದೆ. ಆದರೂ ಮಳೆ ಹಾನಿ ಪರಿಸ್ಥಿತಿಯನ್ನು ಸರ್ಕಾರ ಅತ್ಯಂತ ಯಶಸ್ವಿಯಾಗಿ ನಿಭಾಯಿಸಿದೆಯಲ್ಲದೆ ಮಳೆ ಹಾನಿಯಿಂದಾದ ನಷ್ಟದ ಪ್ರಮಾಣವನ್ನು ಆಧರಿಸಿ ಪರಿಹಾರವನ್ನು ಪಾರದರ್ಶಕವಾಗಿ ಸಂತ್ರಸ್ತರ ಖಾತೆಗೆ ನೇರವಾಗಿ ಜಮಾ ಮಾಡಲಾಗುತ್ತಿದೆ. ಹಾಗೆಯೇ ಪ್ರವಾಹದಿಂದಾದ ಬೆಳೆ ಹಾನಿಗೂ ಸರ್ಕಾರ ಹೆಚ್ಚುವರಿಯಾಗಿ ಪರಿಹಾರವನ್ನು ನೀಡುತ್ತಿದೆ.

ಕೇಂದ್ರ ಸಚಿವರಾದ ನಿತಿನ್ ಗಡ್ಕರಿ ಅವರ ನೇತೃತ್ವದಲ್ಲಿ ರಾಷ್ಟ್ರ ರಸ್ತೆ ಸಾರಿಗೆ ವ್ಯವಸ್ಥೆಯ ಬಗ್ಗೆ ಮೂರು ದಿನಗಳ ಕಾಲ ಬೆಂಗಳೂರಿನಲ್ಲಿ ಜರುಗಿದ ಸಮಾವೇಶದಲ್ಲಿ ಮುಖ್ಯಮಂತ್ರಿ ಅವರು ರಾಜ್ಯದ ಬೇಡಿಕೆಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ್ದಾರೆ. ಬೆಂಗಳೂರು ಹಾಗೂ ಬೆಂಗಳೂರು ಸುತ್ತಮುತ್ತಲಿನ ಸಂಚಾರ ದಟ್ಟಣೆಯ ನಿರ್ವಹಣೆಗಾಗಿ ಪ್ರತ್ಯೇಕವಾದ ಪ್ರಾಧಿಕಾರವನ್ನು ರಚನೆ ಮಾಡಲು ಮುಖ್ಯಮಂತ್ರಿ ಅವರು ತೀರ್ಮಾನಿಸಿದ್ದಾರೆ.

ರಾಜ್ಯದಲ್ಲಿ ನಾಲ್ಕು ಲಕ್ಷ ಎಕರೆ ಬಂಜರು ಭೂಮಿಯನ್ನು ಅರಣ್ಯೀಕರಣಗೊಳಿಸಲು ಈಗಾಗಲೇ ಸರ್ಕಾರವು ಕ್ರಿಯಾ ಯೋಜನೆಯನ್ನು ಸಿದ್ಧ ಪಡಿಸಿದೆ. ಇದರಿಂದ ರಾಜ್ಯದ ಅರಣ್ಯ ಪ್ರದೇಶ ಶೇಕಡ 21 ರಿಂದ 30 ಕ್ಕೆ ಏರಿಕೆಯಾಗಲಿದೆ. ಅರಣ್ಯ ಸಂರಕ್ಷಣೆ ಕಾರ್ಯದಲ್ಲಿ ತೊಡಗಿದ ವೇಳೆ ಮರಣ ಹೊಂದಿ ಹುತಾತ್ಮರಾದ ಸಿಬ್ಬಂದಿಯವರ ಕುಟುಂಬಕ್ಕೆ ಭದ್ರತೆಯನ್ನು ಒದಗಿಸುವ ನಿಟ್ಟಿನಲ್ಲಿ ನೀಡಲಾಗುವ ಪರಿಹಾರ ಮೊತ್ತವನ್ನು ಸರ್ಕಾರವು 30 ಲಕ್ಷ ರೂ ನಿಂದ 50 ಲಕ್ಷ ರೂಪಾಯಿಗೆ ಏರಿಕೆ ಮಾಡಿದೆ.

ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ರೂಪಿಸಬೇಕಾದ ಕಾರ್ಯಕ್ರಮ ಮತ್ತು ಯೋಜನೆಗಳ ಕುರಿತು ಮುಖ್ಯಮಂತ್ರಿಗಳು ತುಂಬಾ ಆಸಕ್ತಿ ವಹಿಸಿದ್ದಾರೆ. ಹಾಗಾಗಿಯೇ ಅವರು ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಮೀಸಲಿಟ್ಟಿದ್ದ ಮೂರು ಸಾವಿರ ಕೋಟಿ ರೂ ಅನುದಾನವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಿದ್ದಾರೆ. ಸಂಪೂರ್ಣ ಅನುದಾನ ಬಿಡುಗಡೆ ಮಾಡಿರುವುದು ರಾಜ್ಯ ಸರ್ಕಾರದ ಇತಿಹಾಸದಲ್ಲಿ ಇದೇ ಮೊದಲು. ಅಲ್ಲದೆ ಮುಂದಿನ ವರ್ಷದಿಂದ ಐದು ಸಾವಿರ ಕೋಟಿ ರೂ ಅನುದಾನ ಒದಗಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಕಳೆದೆರಡು ವರ್ಷಗಳಿಂದ ಕೋವಿಡ್–19 ನಿಂದ ದಸರಾ ಹಬ್ಬ ಕಳೆಗುಂದಿತ್ತು. ಆದರೆ ಈ ಬಾರಿ ಸರ್ಕಾರದಿಂದ ಮೈಸೂರು ದಸರಾ ಹಬ್ಬವನ್ನು ಅದ್ದೂರಿಯಿಂದ ಆಚರಿಸಲಾಗುತ್ತಿದ್ದು, ಘನತೆವೆತ್ತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಐತಿಹಾಸಿಕ ದಸರಾ ಹಬ್ಬವನ್ನು ಉದ್ಘಾಟಿಸಿದ್ದಾರೆ. ಪರಿಸರ ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಎಲ್ಲರೂ ದೀಪಾವಳಿಯಲ್ಲಿ ಪಟಾಕಿ ಸಿಡಿಸದೆ ದೀಪ ಬೆಳಗುವ ಮೂಲಕ ಹಬ್ಬವನ್ನು ಆಚರಿಸಿ ಎಂದು ಕೋರುತ್ತೇನೆ.

**ಎಲ್ಲರಿಗೂ ಗಾಂಧಿ ಜಯಂತಿ, ದಸರಾ ಹಾಗೂ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.**

**ಡಾ॥ ಪಿ. ಎಸ್. ಹರ್ಷ, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From:www.kpscvaani.com



# ಮಂಗಳೂರಿನಲ್ಲಿ ಸಾವಿರಾರು ಕೋಟಿ ಮೊತ್ತದ ಯೋಜನೆಗಳ ಲೋಕಾರ್ಪಣೆ

**ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳೂರಿನಲ್ಲಿ ೩,೮೦೦ ಕೋಟಿ ರೂ ಮೊತ್ತದ ವಿವಿಧ ಯೋಜನೆಗಳ ಲೋಕಾರ್ಪಣೆ ಮತ್ತು ವಿವಿಧ ಕಾಮಗಾರಿಗಳ ಶಿಲಾನ್ಯಾಸ ನೆರವೇರಿಸಿದ್ದಾರೆ.**

ಹೆಚ್. ವಿ. ರವಿರಾಜ್

ಸೆಪ್ಟೆಂಬರ್ 2ರಂದು ಮಂಗಳೂರಿಗೆ ಆಗಮಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಅವರು ನವ ಮಂಗಳೂರು ಬಂದರು ಪ್ರಾಧಿಕಾರ (ಎನ್.ಎಂ.ಪಿ.ಎ) ಹಾಗೂ ಮಂಗಳೂರು ರಿಫೈನರಿ ಹಾಗೂ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಎಂ.ಆರ್.ಪಿ.ಎಲ್) ವತಿಯಿಂದ ಸುಮಾರು 3,800 ಕೋಟಿ ರೂ. ಮೊತ್ತದ ವಿವಿಧ ಯೋಜನೆಗಳ ಲೋಕಾರ್ಪಣೆ, ಶಿಲಾನ್ಯಾಸ ಹಾಗೂ ಭೂಮಿ ಪೂಜೆ ನೆರವೇರಿಸಿದುದು ದಕ್ಷಿಣಕನ್ನಡ ಜಿಲ್ಲೆಗೆ ಐತಿಹಾಸಿಕ ಸಂದರ್ಭವೆನ್ನಬಹುದು.

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಗೋಲ್ಡ್ ಫಿಂಚ್ ಮೈದಾನದಲ್ಲಿ ಈ ಎಲ್ಲಾ ಕಾರ್ಯಕ್ರಮ ಉದ್ಘಾಟಿಸಿದ ನಂತರ ರಾಜ್ಯ ಮತ್ತು ಕೇಂದ್ರದ ಡಬಲ್ ಇಂಜಿನ್ ಸರ್ಕಾರದ ಕಾರ್ಯಕ್ರಮಗಳನ್ನು ವಿಶ್ಲೇಷಿಸಿ ಈ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಹಿಂದೆ ಶಕ್ತಿ, ಶ್ರಮ ಇರುವುದನ್ನು ವಿವರವಾಗಿ ತಮ್ಮ ಭಾಷಣದಲ್ಲಿ ಅವರು ಪ್ರಸ್ತಾಪಿಸಿದರು.

ರೈತರ ಮತ್ತು ಮೀನುಗಾರರ ಉತ್ಪನ್ನಗಳಿಗೆ ಅಂತಾರಾಷ್ಟ್ರೀಯ ಗುಣಮಟ್ಟದ ವಿದೇಶಿ ಮಾರುಕಟ್ಟೆ ಒದಗಿಸಲು ಸಾಧ್ಯವಿದೆ. ಮೇಕ್ ಇನ್ ಇಂಡಿಯಾ ಕಲ್ಪನೆ



Downloaded From:www.kpscvaani.com

ವಿಸ್ತರಿಸಿದರೆ ಮಾತ್ರ ವಿಕಸಿತ ಭಾರತ ನಿರ್ಮಾಣ ಸಾಧ್ಯ. ಗ್ರೀನ್ ಗ್ರೋತ್, ಗ್ರೀನ್ ಜಾಬ್ ಪರಿಕಲ್ಪನೆಯಲ್ಲಿ ಸರ್ಕಾರ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದೆ. ಭಾರತ್ ಮಾಲಾ ಯೋಜನೆ ಮೂಲಕ ರಸ್ತೆ ಮತ್ತು ಸಾಗರ್ ಮಾಲಾ ಮೂಲಕ ಬಂದರುಗಳ ಅಭಿವೃದ್ಧಿಯಿಂದ ರಫ್ತು ಹೆಚ್ಚಳ, ಸಂಸ್ಕರಣಾಗಾರಗಳ ಅಭಿವೃದ್ಧಿಯಿಂದ ಕರ್ನಾಟಕಕ್ಕೆ ಹೆಚ್ಚು ಬಲ ಬಂದಿದೆ. ರೈಲ್ವೆ ಬಜೆಟ್‌ನಲ್ಲಿ ನಾಲ್ಕು ಪಟ್ಟು ಕರ್ನಾಟಕಕ್ಕೆ ಸಂದಾಯವಾಗಿದೆ, ರೈಲ್ವೆ ಲೇನ್‌ಗಳಿಗೆ ವಿದ್ಯುತ್ ಒದಗಿಸಲು ಗಮನ ಹರಿಸಲಾಗಿದ್ದು ಇದು ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿದೆ ಎಂದರು.

ನವ ಮಂಗಳೂರು ಬಂದರು ಪ್ರಾಧಿಕಾರದಿಂದ 281 ಕೋಟಿ ರೂ. ವೆಚ್ಚದಲ್ಲಿ ಕಂಟೇನರ್‌ಗಳು ಹಾಗೂ ಇತರೆ ಸರಕು ನಿರ್ವಹಣೆಗೆ ಅಳವಡಿಸಲಾಗಿರುವ ಬರ್ತ್ ಸಂಖ್ಯೆ 14ರ ಯಾಂತ್ರೀಕರಣವನ್ನು ಲೋಕಾರ್ಪಣೆ ಮಾಡಲಾಯಿತು. ಈ ಯೋಜನೆ ಮೂಲಕ ಸುಮಾರು 2,200 ಜನರಿಗೆ ಉದ್ಯೋಗಾವಕಾಶ ದೊರಕುವುದಲ್ಲದೆ, ಈ ಯೋಜನೆ ಮೂಲಕ ಸಾಮರ್ಥ್ಯ ಹೆಚ್ಚಳ ಹಾಗೂ ಕಾರ್ಯನಿರ್ವಹಣಾ ಸಮಯದಲ್ಲಿ ಶೇ.35 ಉಳಿತಾಯವನ್ನು ಸಾಧಿಸಬಹುದಾಗಿದೆ.

ಮಂಗಳೂರು ರಿಫೈನರಿ ಹಾಗೂ ಪೆಟ್ರೋ ಕೆಮಿಕಲ್ಸ್ ಲಿಮಿಟೆಡ್‌ನಿಂದ ಬಿಎಸ್ VI ಉನ್ನತೀಕರಣ ಯೋಜನೆಯಡಿ 1,829 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣವಾಗಿರುವ ಇಂಧನಗಳ ಉತ್ಪಾದನೆ, ಪರಿಸರ ಸಂರಕ್ಷಣೆ, ಮಾಲಿನ್ಯ ನಿಯಂತ್ರಣ ಘಟಕ ಹಾಗೂ 677 ಕೋಟಿ ರೂ.ಗಳ ವೆಚ್ಚದಲ್ಲಿ ಸಿದ್ಧವಾಗಿರುವ 30 ಎಂಎಲ್‌ಡಿ ಲವಣ ನೀರು ಶುದ್ಧೀಕರಣ ಘಟಕವನ್ನು ಮೋದಿ ಅವರು ಲೋಕಾರ್ಪಣೆ ಮಾಡಿದರು.




ಶಿಲಾನ್ಯಾಸ ಮಾಡಲಾದ ಐನೂರು ಕೋಟಿ ರೂ. ವೆಚ್ಚದಲ್ಲಿ ಎನ್.ಎಂ.ಪಿ.ಎಯಲ್ಲಿ ಸಮಗ್ರ ಎಲ್.ಪಿ.ಜಿ ಹಾಗೂ ಬೃಹತ್ ಪಿ.ಓ.ಎಲ್ ಸೌಲಭ್ಯ ಸ್ಥಾಪನೆಯಿಂದ 2,200 ಜನರಿಗೆ ಉದ್ಯೋಗಾವಕಾಶ ಹಾಗೂ 100 ಕೋಟಿರೂ. ವೆಚ್ಚದಲ್ಲಿ ಎನ್.ಎಂ.ಪಿ.ಎಯಲ್ಲಿ ಶೇಖರಣಾ ಟ್ಯಾಂಕ್‌ಗಳು ಹಾಗೂ ಖಾದ್ಯತೈಲ ಸಂಸ್ಕರಣಾಗಾರ ನಿರ್ಮಾಣದಿಂದ ಕನಿಷ್ಠ 700 ಜನರಿಗೆ ಉದ್ಯೋಗಾವಕಾಶ ದೊರಕುವುದಲ್ಲದೆ, ಖಾದ್ಯ ತೈಲದ ಮತ್ತು ಎಲ್‌ಪಿಜಿಯ ಒಟ್ಟಾರೆ ಆಮದು ವೆಚ್ಚ ಇಳಿಕೆ ಆಗುವುದು. ಹಾಗೇಯೇ ಪಿಎಂ ಉಜ್ವಲ ಯೋಜನೆಗೆ ನೇರ ಬೆಂಬಲ ಸಿಗಲಿದೆ.







Downloaded From:www.kpscvaani.com







ನೂರು ಕೋಟಿ ರೂ.ಗಳ ವೆಚ್ಚದಲ್ಲಿ ಎನ್.ಎಂ.ಪಿ.ಎಯಲ್ಲಿ ಬಿಟುಮೆನ್ ಶೇಖರಣಾ ಟ್ಯಾಂಕ್ ಘಟಕಗಳ ಸ್ಥಾಪನೆಗೂ ಶಿಲಾನ್ಯಾಸ ನೆರವೇರಿಸಲಾಯಿತು. ಇದರಿಂದ ಅಂದಾಜು 275 ಜನರಿಗೆ ಉದ್ಯೋಗಾವಕಾಶ ದೊರಕಲಿದೆ.

ಬಹು ನಿರೀಕ್ಷಿತ ಮೀನುಗಾರಿಕಾ ಬಂದರನ್ನು ಇಪಿಸಿ ಮಾದರಿಯಲ್ಲಿ 196.51 ಕೋಟಿ ರೂ.ಗಳಲ್ಲಿ ಕುಳಾಯಿಯಲ್ಲಿ ನಿರ್ಮಾಣ ಮಾಡಲು ಮೋದಿಯವರು ಶಂಕುಸ್ಥಾಪನೆ ನೆರವೇರಿಸಿದರು. ಇದರಿಂದ ಅಂದಾಜು 8,500 ಜನರಿಗೆ ಉದ್ಯೋಗವಕಾಶ, ಕರಾವಳಿ ಮೀನುಗಾರಿಕಾ ಸಮುದಾಯದವರಿಗೆ ಸುಮಾರು 192 ಕೋಟಿ ರೂ.ವಾರ್ಷಿಕ ಆದಾಯ ಹಾಗೂ ಇನ್ನಿತರ ಹಲವು ಸೌಲಭ್ಯಗಳು ಮುಂದಿನ ದಿನಗಳಲ್ಲಿ ಪ್ರಾಪ್ತವಾಗಲಿವೆ.

ಇದೇ ಸಂದರ್ಭದಲ್ಲಿ ಪ್ರಧಾನಿಯವರು ಮೀನುಗಾರರಾದ ದಿನಕರ ಕೋಟ್ಯಾನ್, ಶ್ರೀನಿವಾಸ್ ಪುತ್ರನ್ ಮತ್ತು ಮನೋಜ್ ಬೆಂಗ್ರೆ ಅವರಿಗೆ ಕಿಸಾನ್ ಕ್ರೆಡಿಟ್‌ಕಾರ್ಡ್‌ಗಳನ್ನು ಸಾಂಕೇತಿಕವಾಗಿ ಹಸ್ತಾಂತರಿಸಿದರು. ಹಾಗೆಯೇ ಮತ್ಸ್ಯಸಂಪದ ಯೋಜನೆಯಡಿ ವಾಣಿ ಜಿ.ಸಾಲ್ಯಾನ್, ರೇಖಾ ಶಿವನಗರ ಹಾಗೂ ಸುಜಿತ್ ಸುವರ್ಣ ಅವರಿಗೆ ಚೆಕ್ ವಿತರಿಸಿದರು.

ಪ್ರಧಾನಿ ನರೇಂದ್ರ ಮೋದಿಯವರು ಮಂಗಳೂರಿಗೆ ಆಗಮಿಸಿದ ಸಂದರ್ಭದಲ್ಲಿ 3000 ಪೊಲೀಸರ ಬಿಗಿ ಬಂದೋಬಸ್ತನ್ನು ನೇಮಿಸಲಾಗಿತ್ತು. ಈ ಸಂದರ್ಭದಲ್ಲಿ ಹಾಜರಿದ್ದ ಸುಮಾರು 2 ಲಕ್ಷಕ್ಕೂ ಹೆಚ್ಚಿನ ಜನರಿಗೆ ಯಾವುದೇ ರೀತಿಯ ತೊಂದರೆಗಳಾಗದಂತೆ ಕ್ರಮಕೈಗೊಂಡಿದ್ದು ವಿಶೇಷವಾಗಿತ್ತು.

ಪ್ರಧಾನಿಗಳ ಅಭೂತಪೂರ್ವ ಭೇಟಿಗೆ ಜನರು ದಕ್ಷಿಣಕನ್ನಡ, ಉಡುಪಿ, ಕಾಸರಗೋಡು ಹಾಗೂ ನೆರೆಯ ಕೊಡಗು ಮತ್ತು ಚಿಕ್ಕಮಗಳೂರು ಕ್ಷೇತ್ರದಿಂದಲೂ ತಂಡೋಪ ತಂಡವಾಗಿ ಆಗಮಿಸಿದ್ದು ಒಂದು ಇತಿಹಾಸ. ಈ ಎಲ್ಲಾ ನಾಗರೀಕರಿಗೆ ಸುಭದ್ರತೆ ಮತ್ತು ಆಹಾರ ಪೂರೈಕೆಯ ವಿಷಯದಲ್ಲೂ ಸ್ಥಳೀಯ ಆಡಳಿತ ಸಮಗ್ರವಾದ ಹೊಣೆಗಾರಿಕೆಯನ್ನು ನಿರ್ವಹಿಸಿತ್ತು. ಪ್ರಧಾನಿಗಳಿಗೆ ಮಂಗಳೂರು ಮಲ್ಲಿಗೆಯ ಹಾರ ಮತ್ತು ತುಳುನಾಡಿನ ಸೃಷ್ಟಿಕರ್ತ ಪರಶುರಾಮ ವಿಗ್ರಹ ಹಾಗೂ ಉಡುಪಿಯ ಶ್ರೀಕೃಷ್ಣನ ವಿಗ್ರಹವನ್ನು ಕೊಡುಗೆಯಾಗಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಬೆಂಗಳೂರಿನ ಖ್ಯಾತ ಹಿನ್ನಲೆ ಗಾಯಕ ಅಜಯ್ ವಾರಿಯರ್ ತಂಡದವರು ನಿರಂತರವಾಗಿ ದೇಶಭಕ್ತಿಗೀತೆಗಳನ್ನು ಹಾಡಿ, ಜನರನ್ನು ಪುಳಕಿತರನ್ನಾಗಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಧಾನಿ





Downloaded From:www.kpscvaani.com



ಮೋದಿಯವರು ರಾಜ್ಯಕ್ಕೆ ನೀಡಿರುವ ಕೊಡುಗೆಯನ್ನು ಸ್ಮರಿಸಿದರು. ನವ ಮಂಗಳೂರು ಬಂದರು ಪ್ರಾಧಿಕಾರದಲ್ಲಿ 3800 ಕೋಟಿ ರೂ. ಮೊತ್ತದ ಅಭಿವೃದ್ಧಿ ಕಾರ್ಯಗಳಿಂದಾಗಿ ಕರಾವಳಿಯ ಅಭಿವೃದ್ಧಿಗೆ ವೇಗ ದೊರಕಲಿದೆ. ಬಂದರಿನ ವಹಿವಾಟು ಸಾಮರ್ಥ್ಯ ನಾಲ್ಕು ಪಟ್ಟು ಹೆಚ್ಚಾಗಲಿದ್ದು, ದೇಶದ ಆರ್ಥಿಕತೆಗೆ ಬಲ ತುಂಬಲಿದೆ. ಇದರಿಂದ ಮುಂದಿನ ದಿನಗಳಲ್ಲಿ ಕರಾವಳಿ ಮಾತ್ರವಲ್ಲದೆ ರಾಜ್ಯದ ಅಭಿವೃದ್ಧಿ ಸಾಧ್ಯವಾಗಲಿದೆ. ನವಭಾರತದ ನಿರ್ಮಾಣದಲ್ಲಿ ನಮ್ಮ ಕರ್ನಾಟಕ ಮಹತ್ವದ ಪಾತ್ರ ವಹಿಸಲಿದೆ ಎಂದರು. ಹಾಗೆಯೇ ನಮ್ಮ ರಾಜ್ಯವನ್ನು ವಿವಿಧ ಕ್ಷೇತ್ರಗಳಲ್ಲಿ ಮೇಲ್ದರ್ಜೆಗೆ ಏರಿಸಿದ ಹಿನ್ನಲೆಯಲ್ಲಿ ಪ್ರಧಾನಮಂತ್ರಿಗಳಿಗೆ ಕೃತಜ್ಞತೆಯನ್ನು ಸಲ್ಲಿಸಿದರು.

ಈ ಅಭೂತ ಪೂರ್ವವಾದ ಕಾರ್ಯಕ್ರಮಕ್ಕೆ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕೇಂದ್ರ ಸಂಸದೀಯ ವ್ಯವಹಾರ ಮತ್ತು ಕಲ್ಲಿದ್ದಲು ಸಚಿವ ಪ್ರಹ್ಲಾದ್ ಜೋಶಿ, ಕೇಂದ್ರ ಕೃಷಿ ಖಾತೆಯ ರಾಜ್ಯ ಸಚಿವರಾದ ಶೋಭಾಕರಂದ್ಲಾಜೆ, ಕೇಂದ್ರದ ಬಂದರು ಜಲಸಾರಿಗೆ ಹಾಗೂ ಆಯುಷ್ ಸಚಿವರಾದ ಸರ್ಬಾನಂದ ಸೋನೋವಾಲ್, ಇಂಧನ ಮತ್ತು ನೈಸರ್ಗಿಕ ಅನಿಲ ಸಚಿವರಾದ ಹರ್ದೀಪ್ ಸಿಂಗ್ ಪುರಿ, ಬಂದರು ಹಾಗೂ ಹಡಗು ಮತ್ತು ಜಲಸಾರಿಗೆ ಸಚಿವರಾದ ಶ್ರೀಪಾದ್ ಎಸ್. ನಾಯಕ್, ಕೇಂದ್ರದ ಸಚಿವ ಶಾಂತನು ಠಾಕೂರ್, ರಾಜ್ಯದ ಸಮಾಜಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ ಮೊದಲಾದವರು ಉಪಸ್ಥಿತರಿದ್ದರು.




ಸಂಸದರಾದ ನಳಿನ್ ಕುಮಾರ್ ಕಟೀಲ್ ಮತ್ತು ಇಂಧನ, ಕನ್ನಡ ಮತ್ತು ಸಂಸ್ಕೃತಿ ಹಾಗೂ ದಕ್ಷಿಣಕನ್ನಡ ಜಿಲ್ಲಾ ಉಸ್ತುವಾರಿ ಸಚಿವರಾದ ವಿ.ಸುನಿಲ್ ಕುಮಾರ್ ಅವರು ಮೋದಿ ಅವರ ಕಾರ್ಯಕ್ರಮ ಯಶಸ್ವಿಗೊಳಿಸುವಲ್ಲಿ ಹಗಲಿರುಳು ಶ್ರಮಿಸಿದರು.

**ಮಂಗಳೂರಿಗೂ ಮುನ್ನ ಕೊಚ್ಚಿಯಲ್ಲಿ:**

ಪ್ರಧಾನಿ ಮೋದಿಯವರು ಮಂಗಳೂರಿಗೆ ಆಗಮಿಸುವ ಮುನ್ನ ಕೇರಳದ ಕೊಚ್ಚಿಯಲ್ಲಿ ಸ್ವದೇಶಿ ಯುದ್ಧನೌಕೆ ಲೋಕಾರ್ಪಣೆ ಮಾಡಿದರು. ಐ.ಎನ್.ಎಸ್ ವಿಕ್ರಾಂತ್ ಹೆಸರಿನ ಯುದ್ಧನೌಕೆಯು 260ಮೀ ಉದ್ದ, 62ಮೀ ಅಗಲವಾಗಿದ್ದು 40 ಸಾವಿರ ಟನ್ ಸಾಮರ್ಥ್ಯ ಹೊಂದಿದೆ. ಇದರ ಮೇಲೆ 30 ವಿಮಾನಗಳನ್ನು ಇಳಿಸುವ ಸೌಲಭ್ಯವೂ ಇದ್ದು, ನೌಕೆಯಲ್ಲಿ 2,200 ಕೊಠಡಿಗಳಿದ್ದು 1600 ಸಿಬ್ಬಂದಿಗಳ ವಾಸಕ್ಕೆ ಅವಕಾಶವಿದೆ. ಜೊತೆಗೆ ಇದು ಗಂಟೆಗೆ 51ಕಿ.ಮೀ ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿರುವುದು ಇದರ ವಿಶೇಷ.


Downloaded From:www.kpscvaani.com



# ಪ್ರವಾಹ ಪರಿಸ್ಥಿತಿ ನಿರ್ವಹಣೆಗೆ ತುರ್ತು ಕ್ರಮವಹಿಸಿದ ಸರ್ಕಾರ

ಬಿ.ಜಿ.ಪೂರ್ಣಿಮ

ರಾಜ್ಯದಲ್ಲಿ ಸಂಭವಿಸುತ್ತಿರುವ ಪ್ರವಾಹ ಪರಿಸ್ಥಿತಿ ನಿರ್ವಹಣೆ ಮಾಡುವುದು ಮತ್ತು ಪ್ರವಾಹದಿಂದ ಬಾಧಿತರಾದವರಿಗೆ ಸಹಾಯ ಮಾಡುವ ವಿಚಾರವನ್ನು ಮುಖ್ಯಮಂತ್ರಿ ಬಸವರಾಜ ಎಸ್. ಬೊಮ್ಮಾಯಿ ಅವರು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದಾರೆ.

ಹಾಗಾಗಿ ಮುಖ್ಯಮಂತ್ರಿಗಳು ಅಧಿಕ ಮಳೆಯಿಂದ ಅತಿವೃಷ್ಟಿ ಮತ್ತು ಪ್ರವಾಹ ಉಂಟಾದ ಜಿಲ್ಲೆಗಳಿಗೆ ಖುದ್ದು  ಭೇಟಿ ನೀಡಿ ಪರಿಶೀಲಿಸಿದರಲ್ಲದೆ, ಸ್ಥಳೀಯ ಜನರೊಂದಿಗೆ ನೆರವಿನ ವಿಚಾರವಾಗಿ ಮಾತುಕತೆಯನ್ನು ನಡೆಸಿದರು. ಪ್ರವಾಹ ಹೆಚ್ಚುವುದಕ್ಕೂ ಮುಂಚಿತವಾಗಿಯೇ ಪ್ರವಾಹಕ್ಕೊಳಗಾಗುವ ಸಾಧ್ಯತೆ ಇರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ಸಭೆಗಳನ್ನು ನಡೆಸಿ, ಪ್ರವಾಹ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸುವಂತೆ ಮತ್ತು ಎಲ್ಲಾ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಪರಿಹಾರ ಒದಗಿಸುವಂತೆ ಅವರು ಸೂಚನೆ ನೀಡಿದರು.

ಅತಿವೃಷ್ಟಿ ಮತ್ತು ಪ್ರವಾಹದಿಂದ ಹಾನಿಗೀಡಾದ ಮನೆಗಳ ದುರಸ್ಥಿಗೆ ಎನ್‌ಡಿಆರ್‌ಎಫ್ ನಿಯಮಾವಳಿಯ ಪ್ರಕಾರ ತಲಾ 10 ಸಾವಿರ ರೂ ಪರಿಹಾರವನ್ನು ತುರ್ತಾಗಿ ವಿತರಿಸುವಂತೆ ಮತ್ತು ಪರಿಹಾರ ಕಾರ್ಯಗಳು ತ್ವರಿತವಾಗಿ ನಡೆಸಲು ಅನುಕೂಲವಾಗುವಂತೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಟಾಸ್ಕ್ ಫೋರ್ಸ್ ರಚಿಸಿ ಜವಾಬ್ದಾರಿ ನೀಡಲು ತಿಳಿಸಿದರು. ಇನ್ನು ಬೆಳೆ ನಷ್ಟದ ಬಗ್ಗೆ ಶೀಘ್ರವಾಗಿ ಸಮೀಕ್ಷೆ



Downloaded From:www.kpscvaani.com

ನಡೆಸಿ ಸಂತ್ರಸ್ತ ರೈತರಿಗೆ ತಿಂಗಳೊಳಗೆ ನಷ್ಟಕ್ಕೆ ಪರಿಹಾರ ಒದಗಿಸುವಂತೆ ಕೂಡ ಅವರು ಸೂಚಿಸಿದರು.

ಎಲ್ಲಾ ಅಣೆಕಟ್ಟೆಗಳ ಒಳಹರಿವಿನ ಮೇಲೆ ನಿಗಾವಹಿಸುವ ಜೊತೆಗೆ ಹೊರ ಹರಿವಿಗೆ ಮುನ್ನ ನದಿಪಾತ್ರದ ಗ್ರಾಮಗಳ ನಿವಾಸಿಗಳಿಗೆ ಎಚ್ಚರಿಕೆ ನೀಡಬೇಕು. ಅಗತ್ಯವಿರುವ ಕಡೆಗಳಲ್ಲಿ ಜನರ ಸ್ಥಳಾಂತರಕ್ಕೆ ಕ್ರಮವಹಿಸುವಂತೆ ಅವರು ಅಧಿಕಾರಿಗಳಿಗೆ ತಿಳಿಸಿದರು. ಅದರಂತೆ ಪ್ರವಾಹ ಎದುರಿಸಲು ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿತು. ಮುಖ್ಯಮಂತ್ರಿ ಅವರ ಆದೇಶದ ಮೇರೆಗೆ ಪ್ರವಾಹ ಭೀತಿಯಿಂದ ಸಂಬಂಧಿಕರ ಮನೆಗಳಿಗೆ ತೆರಳಿದ್ದ ಸಂತ್ರಸ್ತರಿಗೆ ಅವರು ಇರುವಲ್ಲಿಯೇ ಪಡಿತರ ಕಿಟ್ ಅನ್ನು ವಿತರಿಸಲಾಯಿತು.

ಇನ್ನು ರಾಜ್ಯ ಸರ್ಕಾರವು ಅತ್ಯಂತ ನಿಖರವಾಗಿ ಹಾಗೂ ಪಾರದರ್ಶಕವಾಗಿ ಮಳೆಹಾನಿಯ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಅಲ್ಲದೆ ಜುಲೈ-ಆಗಸ್ಟ್ ತಿಂಗಳಲ್ಲಿ ಸಂಭವಿಸಿದ ಮಳೆಹಾನಿ ಪರಿಸ್ಥಿತಿ ಅಧ್ಯಯನಕ್ಕೆ ರಾಜ್ಯಕ್ಕೆ ಆಗಮಿಸಿದ್ದ ಕೇಂದ್ರ ಗೃಹ ಸಚಿವಾಲಯದ ಜಂಟಿ ಕಾರ್ಯದರ್ಶಿ ಆಶಿಶ್ ಕುಮಾರ್ ನೇತೃತ್ವದ ಕೇಂದ್ರ ಅಧ್ಯಯನ ತಂಡದೊಂದಿಗೆ ಮುಖ್ಯಮಂತ್ರಿ ಸಭೆ ನಡೆಸಿದರು. ಸಭೆಯಲ್ಲಿ ರಾಜ್ಯದಾದ್ಯಂತ ಮಳೆಹಾನಿಯಿಂದಾಗಿರುವ ನಷ್ಟವನ್ನು ಅವರಿಗೆ ಮನವರಿಕೆ ಮಾಡಿಕೊಡುವ ಜೊತೆಗೆ ಕೇಂದ್ರ ಮಾರ್ಗಸೂಚಿಯಂತೆ ನ್ಯಾಯಯುತವಾಗಿ ಪರಿಹಾರ ಒದಗಿಸುವಂತೆ ಅವರು ಕೇಂದ್ರ ತಂಡಕ್ಕೆ ಮನವಿ ಮಾಡಿದ್ದಾರೆ.


ಬೆಂಗಳೂರಿನ ಮಹದೇವಪುರಕ್ಕೆ ಭೇಟಿ ನೀಡದ ಸಂದರ್ಭ

**ಮಳೆ ಹಾನಿಯ ನಿರ್ವಹಣೆ ಹಾಗೂ ಮೂಲಸೌಲಭ್ಯಗಳ ನಿರ್ವಹಣೆಗಾಗಿ ಈಗಾಗಲೇ ರಾಜ್ಯ ಸರ್ಕಾರವು 300 ಕೋಟಿ ರೂಗಳನ್ನು ಬಿಡುಗಡೆ ಮಾಡಿದೆ.**

ಇದೇ ಮೊದಲ ಬಾರಿಗೆ, ಭಾರಿ ಸಂಖ್ಯೆಯಲ್ಲಿ ಮೀನುಗಾರಿಕಾ ದೋಣಿಗಳಿಗೆ, ಅಂಗಡಿ ಮುಂಗಟ್ಟುಗಳಿಗೆ ಸಂಭವಿಸಿದ ಹಾನಿ ಹಾಗೂ ರಾಮನಗರದ ರೇಷ್ಮೆ ರೀಲಿಂಗ್ ಘಟಕ ಹಾಗೂ ಟ್ವಿಸ್ಟಿಂಗ್ ಘಟಕಗಳಿಗೆ ಸಂಭವಿಸಿದ ಹಾನಿಯ ಕುರಿತು ಸಹ ಕೇಂದ್ರ ತಂಡದ ಗಮನಕ್ಕೆ ತಂದರಲ್ಲದೆ, ಕಡಲಕೊರೆತದಿಂದಾಗಿ ರಾಜ್ಯದ ಸಂಪೂರ್ಣ ಕರಾವಳಿ ಪ್ರದೇಶದ ರಕ್ಷಣೆಗೆ ಕೇಂದ್ರದ ನೆರವಿನ ಅಗತ್ಯವಿದೆ ಎಂಬುದನ್ನು ಅವರು ಪ್ರತಿಪಾದಿಸಿದ್ದಾರೆ.

ರಾಜ್ಯದ ಎಲ್ಲಾ ಕೆರೆಗಳು ತುಂಬಿ ಹರಿಯುತ್ತಿರುವುದನ್ನು ರಾಜ್ಯಕ್ಕೆ ಆಗಮಿಸಿದ್ದ ಕೇಂದ್ರ ಅಧ್ಯಯನ ತಂಡಕ್ಕೆ ತೋರಿಸಲಾಗಿದೆ. ಜುಲೈ ನಿಂದ ಸೆಪ್ಟೆಂಬರ್ ಮೊದಲ ವಾರದವರೆಗೆ ರಾಜ್ಯದಲ್ಲಿ ಬಿದ್ದಿರುವ ಮಳೆಯ ಪ್ರವಾಹದಿಂದ ಬೆಳೆ ಮತ್ತು ಮನೆಗಳಿಗೆ ಆಗಿರುವ ಹಾನಿ, ಮೂಲಸೌಕರ್ಯಕ್ಕೆ ಆಗಿರುವ ಹಾನಿ, ಜನಜಾನುವಾರುಗಳಿಗೆ ಆಗಿರುವ ಪ್ರಾಣ ಹಾನಿ ಕುರಿತು ವಿವರಗಳನ್ನು ನೀಡಲಾಗಿದೆ. ಎನ್.ಡಿ.ಆರ್.ಎಫ್ ನಿಯಮಗಳಲ್ಲಿ ಪರಿಹಾರ ಒದಗಿಸಲು ಅವಕಾಶವಿಲ್ಲದ ಕೆಲವು ನಷ್ಟಗಳಿಗೆ ಪರಿಹಾರ ನೀಡುವುದನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಭೂ ಕುಸಿತಕ್ಕೆ ವಿಶೇಷವಾದ ಪರಿಹಾರ ನೀಡಬೇಕೆಂದು ಅಧ್ಯಯನ ತಂಡಕ್ಕೆ


ಜಿಲ್ಲಾಧಿಕಾರಿಗಳೊಂದಿಗೆ ವೀಡಿಯೋ ಸಂವಾದ


Downloaded From:www.kpscvaani.com



ಉಡುಪಿ ಜಿಲ್ಲೆಗೆ ಭೇಟಿ ನೀಡಿದ ಸಂದರ್ಭ

**ಮಳೆ, ಪ್ರವಾಹದ ವಿಷಯದಲ್ಲಿ ರಾಜಕೀಯವಾಗುತ್ತಿರುವುದು ದುರ್ದೈವದ ಸಂಗತಿ. ಮಳೆ ತಂದಿರುವ ಸಂಕಷ್ಟದ ಸಂದರ್ಭದಲ್ಲಿ ಎಲ್ಲರೂ ಯುದ್ಧೋಪಾದಿಯಲ್ಲಿ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಮಳೆ ಯಾವ ಪಕ್ಷವನ್ನೂ ನೋಡಿ ಬರುವುದಿಲ್ಲ. ಇಡೀ ರಾಜ್ಯದಲ್ಲಿ ಎಲ್ಲ ಕೆರೆಗಳು ತುಂಬಿದ್ದು, ದಾಖಲೆಯ ಮಳೆಯಾಗಿದೆ. ಚಿಕ್ಕಬಳ್ಳಾಪುರ ಹಾಗೂ ದೊಡ್ಡಬಳ್ಳಾಪುರದಲ್ಲಿ ಹೆಚ್ಚು ಮಳೆಯಾಗಿದೆ. ಬೆಂಗಳೂರಿನಲ್ಲಿ ಕೆರೆಗಳೆಲ್ಲಾ ತುಂಬಿ ಹರಿಯುತ್ತಿದೆ. ಈ ಸವಾಲನ್ನು ಒಗ್ಗಟ್ಟಾಗಿ ಎದುರಿಸಬೇಕಾಗಿದೆ. ರಾಜಕೀಯ ಮಾಡುವುದು ಸಣ್ಣ ಪ್ರವೃತ್ತಿಯಾಗುತ್ತದೆ.**

**ಬಸವರಾಜ ಎಸ್ ಬೊಮ್ಮಾಯಿ**
ಮುಖ್ಯಮಂತ್ರಿಗಳು

ಮನವಿ ಸಲ್ಲಿಸಲಾಗಿದೆ. ಇನ್ನು ಇದೇ ಮೊದಲ ಬಾರಿಗೆ ಎಲ್ಲಾ ಕೆರೆಗಳು ತುಂಬಿರುವ ಹಿನ್ನೆಲೆಯಲ್ಲಿ ವಿಶೇಷ ಅನುದಾನ ನೀಡುವಂತೆ ಕೂಡ ಸರ್ಕಾರದ ವತಿಯಿಂದ ಕೋರಿಕೆ ಸಲ್ಲಿಸಲಾಗಿದೆ.

ಬೆಂಗಳೂರು ನಗರದ ಕೆಲವು ವಲಯಗಳಲ್ಲಿ ಮಳೆಯ ನೀರು ನಿಂತು ಸಂಚಾರಕ್ಕೆ ಅಡ್ಡಿ ಆದ ಸಂದರ್ಭದಲ್ಲಿಯೂ ಮುಖ್ಯಮಂತ್ರಿ ಬೊಮ್ಮಾಯಿ ಅವರು ರಾತ್ರೋ ರಾತ್ರಿ ಖುದ್ದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದರು. ಸತತವಾಗಿ ಮೂರ್‍ನಾಲ್ಕು ದಿನಗಳಿಂದ ಸುರಿದ ಮಳೆ ನೀರನ್ನು ತೆರವು ಮಾಡಲು ಹಗಲು-ರಾತ್ರಿ ಸಮರೋಪಾದಿಯಲ್ಲಿ ಕೆಲಸ ಮಾಡುತ್ತಿದ್ದ ಬಿಬಿಎಂಪಿ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಹುರುದುಂಬಿಸಿದರು.

ಪರಿಸರ ವಿಕೋಪದಿಂದ ಆಗುವ ಅವಘಡಗಳಿಗೆ ಸರ್ಕಾರವನ್ನು ದೂಷಿಸುವುದು ಸರಿಯಲ್ಲ. ಈ ಬಾರಿ ದಾಖಲೆಯ ಪ್ರಮಾಣದಲ್ಲಿ ಮಳೆಯಾಗಿರುವುದರಿಂದ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. 90 ವರ್ಷ ಆಗದಿರುವ ಮಳೆ ಬೆಂಗಳೂರಿನಲ್ಲಿ ಈ ವರ್ಷ ಆಗಿದೆ. ಬೆಂಗಳೂರಿನ ಕೆಲವು ಪ್ರದೇಶಗಳಲ್ಲಿ ಮಾತ್ರ ಆದ ಮಳೆ ನೀರಿನ ಸಮಸ್ಯೆಯನ್ನು ಮಾಧ್ಯಮಗಳು ಇಡೀ ಬೆಂಗಳೂರೇ ಮುಳುಗಿ ಹೋಯಿತು ಎಂಬಂತೆ ಬಿಂಬಿಸಿದವು. ಮಾಧ್ಯಮಗಳು ಇಂತಹ ಸಮಯದಲ್ಲಿ ತುಂಬಾ ಸೂಕ್ಷ್ಮವಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಹೇಗೆ ಕಾರ್ಯಾಚರಣೆ ಮಾಡಬೇಕು?, ಶಾಶ್ವತ ಪರಿಹಾರಕ್ಕೆ ಏನು ಮಾಡಬಹುದು ಎಂಬ ಸಲಹೆ ಸೂಚನೆ ನೀಡುವ ಸುದ್ದಿಗಳಿಗೆ ಮಾಧ್ಯಮಗಳು ಹೆಚ್ಚಿನ ಒತ್ತು ನೀಡಬೇಕು.

ಸತತವಾಗಿ ಮಳೆಯಾದ್ದರಿಂದ ಎಲ್ಲಾ ಕೆರೆಗಳು ತುಂಬಿದ್ದು, ಕೆಲವು ಕೋಡಿ ಹರಿದಿದೆ. ಕೆಲವು ಕೆರೆಗಳು ಬಿರುಕು ಬಿಟ್ಟಿದ್ದವು. ಹಾಗಾಗಿ ಬೆಂಗಳೂರಿನ ಎರಡು ವಲಯಗಳು


Downloaded From:www.kpscvaani.com

ಜಲಾವೃತಗೊಂಡವು. ಅದರಲ್ಲೂ ಮಹದೇವಪುರ ವಲಯದಲ್ಲಿ 69 ಕೆರೆಗಳಿದ್ದು, ಎಲ್ಲವೂ ಕೋಡಿ ಹರಿದಿತ್ತು. ಅಲ್ಲದೆ ಎಲ್ಲಾ ಕಟ್ಟಡಗಳು ಕೆಳ ಮಟ್ಟದಲ್ಲಿದ್ದು, ಒತ್ತುವರಿ ಕೂಡ ಆಗಿದ್ದರಿಂದ ಇಲ್ಲಿ ಸಮಸ್ಯೆಯಾಗಿತ್ತು. ಆದರೆ ವಿರೋಧಪಕ್ಷದವರು ಇಡೀ ಬೆಂಗಳೂರು ಜಲಾವೃತವಾಗಿದೆ ಎಂದು ಬಿಂಬಿಸಿದರು. ಈ ಬಾರಿಯ ಅನಿರೀಕ್ಷಿತ ಮಳೆಯಿಂದಾಗಿ ಬೆಂಗಳೂರಿನಲ್ಲಿರುವ 164 ಕೆರೆಗಳೂ ತುಂಬಿವೆ. ಮಳೆ ನೀರು ಸರಾಗವಾಗಿ ಹರಿದು ಹೋಗಲು ಆಗದಂತೆ ರಾಜಕಾಲುವೆ, ಚರಂಡಿಗಳನ್ನು ಒತ್ತುವರಿ ಮಾಡಿಕೊಂಡಿರುವುದೇ ಕಾರಣ ಎಂಬ ಅಂಶವು ಕಂಡುಬಂದ ಹಿನ್ನೆಲೆಯಲ್ಲಿ ರಾಜಕಾಲುವೆ, ಚರಂಡಿಗಳನ್ನು ಒತ್ತುವರಿ ಮಾಡಿಕೊಂಡಿರುವವರು ಯಾರೇ ಆದರೂ ನಿರ್ದಾಕ್ಷಿಣ್ಯವಾಗಿ ತೆರವು ಮಾಡಲು ಸರ್ಕಾರವು ಈಗಾಗಲೇ ಸೂಚನೆ ನೀಡಿದೆ. ಈ ಕಾರ್ಯಾಚರಣೆಗಾಗಿ ಎರಡು ಎಸ್ ಡಿ ಆರ್ ಎಫ್ ತಂಡವನ್ನು ನಿಯೋಜಿಸಲಾಗಿದ್ದು, ಬಿಬಿಎಂಪಿ, ಜಲಮಂಡಳಿ, ಬಿಡಿಎ ಸಿಬ್ಬಂದಿಗಳು ಹಗಲು ರಾತ್ರಿ ಕೆಲಸ ಮಾಡುತ್ತಿದ್ದಾರೆ.

ಬರೀ ಸಮಸ್ಯೆಯನ್ನು ತೋರಿಸಿ ಮಾತನಾಡುತ್ತಿದ್ದ ವಿರೋಧ ಪಕ್ಷದವರು, ಮಾಧ್ಯಮದವರು, ಗಣ್ಯರಿಗೆ ಮುಖ್ಯಮಂತ್ರಿ ಅವರು ಜನರ ಕಷ್ಟ ಕಡಿಮೆ ಮಾಡಲು ಯಾವ ರೀತಿಯ ಸುಧಾರಣೆ ತರಬಹುದು ಎಂಬ ಸಲಹೆ ಸೂಚನೆಗಳನ್ನು ನೀಡುವಂತೆ ತಿಳಿಸಿದರು. ಪ್ರಕೃತಿ ವಿಕೋಪದ ಸಂದರ್ಭವನ್ನು ಎಲ್ಲರೂ ಒಟ್ಟಾಗಿ ಎದುರಿಸಬೇಕು. ಆದಾಗ್ಯೂ ಕೂಡ ಮುಖ್ಯಮಂತ್ರಿ ಅವರು ಪರಿಸ್ಥಿತಿಯನ್ನು ಬಹಳ ಎಚ್ಚರಿಕೆಯಿಂದ ನಿಭಾಯಿಸಿದರು. ಇನ್ನು ಐಟಿ ಬಿಟಿ ಸಚಿವರಾದ ಡಾ. ಸಿ.ಎನ್. ಅಶ್ವಥನಾರಾಯಣ ಅವರು ಮಳೆಹಾನಿ ಸಮಸ್ಯೆಯಿಂದ ಐಟಿ ಕಂಪನಿಗಳಿಗಾಗುವ ತೊಂದರೆಯನ್ನು ತಪ್ಪಿಸಲು ಸರ್ಕಾರದಿಂದ ಯಾವೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದರ ಕುರಿತು ಐಟಿ ಕಂಪನಿಗಳವರೊಂದಿಗೆ ಚರ್ಚೆ ನಡೆಸಿದರು.

ಮಳೆ ಹಾನಿ ಪ್ರದೇಶಗಳಾದ ಮಹದೇವಪುರ ಹಾಗೂ ಬೊಮ್ಮನಹಳ್ಳಿ ವಲಯಗಳ ಕೆಲವು ಪ್ರಮುಖ ಸ್ಥಳಗಳಿಗೆ ಭೇಟಿ ನೀಡಿದ ಬೊಮ್ಮಾಯಿ ಅವರು ಪರಿಹಾರ ಕಾರ್ಯ ಮತ್ತು ಒತ್ತುವರಿ ತೆರವು ಕಾರ್ಯಾಚರಣೆಯನ್ನು ಪರಿಶೀಲಿಸಿದರು. ಮುಖ್ಯಮಂತ್ರಿ ಅವರ ಸೂಚನೆಯಂತೆ ಸತತ ಮಳೆಯಿಂದ ತುಂಬಿರುವ ಕೆರೆ ನೀರನ್ನು ತೆಗೆಸುವ ಕೆಲಸದ ಜೊತೆಗೆ ಕೋಡಿ ಹರಿಯು ಸಮಸ್ಯೆಯನ್ನು ಬಗೆಹರಿಸಲು ಒಂದಕ್ಕೊಂದು ಹೊಂದಿಕೊಂಡಿರುವ ಕೆರೆಗಳಿಗೆ ಸ್ಲೂಯಿಸ್ ಗೇಟ್‌ಗಳನ್ನು ಅವಳಡಿಸಲಾಯಿತು.



ರಾಮನಗರ ಜಿಲ್ಲೆಗೆ ಭೇಟಿ ನೀಡಿದ ಸಂದರ್ಭ

**ಸಮಸ್ಯೆಗಳ ಪರಿಹಾರಕ್ಕೆ ಯಾರಿಂದಲೇ ಉತ್ತಮ ಸಲಹೆಗಳು ಬಂದರೂ, ಅದು ಜನರಿಗೆ ಅನುಕೂಲವಾಗುವಂತಿದ್ದರೆ ಸರ್ಕಾರವು ಖಂಡಿತವಾಗಿಯೂ ಅಂತಹ ಸಲಹೆಗಳನ್ನು ಸ್ವೀಕರಿಸಲಿದೆ. ಅದು ಬಿಟ್ಟು ಪ್ರಕೃತಿ ವಿಕೋಪದ ಸಂದರ್ಭವನ್ನು ಟೀಕೆಗೆ ಬಳಸುವುದು ಸಮಂಜಸವಲ್ಲ.**

ಕೆಲವು ಕಡೆ ರಾಜಕಾಲುವೆ ಮೇಲೆ ಕಟ್ಟಡ, ಮನೆ ಕಟ್ಟಿಕೊಂಡು ಮಳೆ ನೀರು ಹರಿಯಲು ತೊಂದರೆ ಮಾಡಿದ್ದಾರೆ. ಕೆಲವರು ರಜಾ ಕಾಲುವೆಯನ್ನೇ ಮುಚ್ಚಿದ್ದಾರೆ. ಇನ್ನು ಕೆಲವರು ಮಳೆ ನೀರು ಚರಂಡಿಗೆ ಅಡ್ಡೆಯಾಗುವಂತೆ ಮನೆ ನಿರ್ಮಾಣ ಮಾಡಿಕೊಂಡಿರುವುದು ಮಳೆ ನೀರು ಸರಾಗವಾಗಿ ಹರಿದು ಹೋಗಲು ಸಾಧ್ಯವಾಗಿರುವುದಿಲ್ಲ. ಹಾಗಾಗಿ ಯಾವುದೇ ಭೇದಭಾವ ಮಾಡದೇ ಅತಿಕ್ರಮಣವನ್ನು ತೆರವುಗೊಳಿಸುವುದಾಗಿ ಮುಖ್ಯಮಂತ್ರಿ ಅವರು ತಿಳಿಸಿದ್ದಾರೆ.

ಅಲ್ಲದೆ ಬೆಂಗಳೂರಿನಲ್ಲಿ ಯಾವ ಯಾವ ಕಾಲದಲ್ಲಿ ಯಾವ ಸಂದರ್ಭದಲ್ಲಿ ಕೆರೆಗಳನ್ನು ಮುಚ್ಚಲಾಗಿದೆ ಹಾಗೂ ಒತ್ತುವರಿ ಮಾಡಿರುವ ಬಗ್ಗೆ ಸಮಗ್ರ ತನಿಖೆ ನಡೆಸಲಾಗುವುದು ಎಂದು ಮುಖ್ಯಮಂತ್ರಿಗಳು ಅತಿವೃಷ್ಟಿ ಸಮಸ್ಯೆಗಳ ಬಗ್ಗೆ ನಡೆದ ಚರ್ಚೆಯಲ್ಲಿ ವಿಧಾನಸಭೆಗೆ ತಿಳಿಸಿದ್ದಾರೆ.

ಹೀಗೆ ಮಳೆಯಿಂದ ಆಗಿರುವ ಪ್ರವಾಹ ಮತ್ತು ಹಾನಿಗೆ ಸರ್ಕಾರವು ಸಮರೋಪಾದಿಯಲ್ಲಿ ಕಾರ್ಯಾಚರಣೆಯನ್ನು ನಡೆಸಿರುವಾಗ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಸರ್ಕಾರದೊಂದಿಗೆ ಕೈಜೋಡಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗುತ್ತದೆ ಎಂಬುದನ್ನು ಮರೆಯಬಾರದು. ■



Downloaded From:www.kpscvaani.com



## ಪುನರಾರಂಭಗೊಂಡ ಮಂಡ್ಯದ

# ಮೈಷುಗರ್ ಸಕ್ಕರೆ ಕಾರ್ಖಾನೆ



● ಯಗಟಿ ಮೋಹನ್

**ಸಕ್ಕರೆಯ ನಾಡು ಮಂಡ್ಯ ಜಿಲ್ಲೆಯ ಅನ್ನದಾತನ ಕಮರಿದ್ದ ಆಸೆ ನನಸಾಗಿದ್ದು ಕನಸು ಚಿಗುರೊಡೆದಿದೆ.**

ದುಡಿಯುವ ಕೈಗಳಿಗೆ ಇನ್ನು ಮುಂದೆ ಬಿಡುವಿಲ್ಲದ ಕೆಲಸ. ಹೀಗಾಗಿ ಎಲ್ಲೆಲ್ಲೂ ಹಬ್ಬದ ವಾತಾವರಣ, ರೈತರ ಮೊಗದಲ್ಲಿ ಸಂತೋಷ ಅರಳಿದ ಸಮಯ. ಮೈಷುಗರ್ ಸಕ್ಕರೆ ಕಾರ್ಖಾನೆ ಪುನರಾರಂಭವಾಗಿರುವುದೇ ರೈತರ ಸಂತೋಷಕ್ಕೆ ಕಾರಣ.

ಇಷ್ಟೆಲ್ಲ ತಮ್ಮ ಸಂತೋಷಕ್ಕೆ ಕಾರಣವಾಗಿರುವ ಸರ್ಕಾರಕ್ಕೆ ರೈತರು ಈಗ ತುಂಬು ಹೃದಯದ ಧನ್ಯವಾದ ಅರ್ಪಿಸಿದ್ದಾರೆ. ಇಷ್ಟಕ್ಕೂ ಮಂಡ್ಯ ರೈತರ ಸಂತೋಷಕ್ಕೆ ಕಾರಣವಾಗಿರುವುದು ಕರ್ನಾಟಕ ಸರ್ಕಾರದ ಒಂದು ನಿರ್ಧಾರ. ಅದೇ ಮಂಡ್ಯದ ಸರ್ಕಾರಿ ಸ್ವಾಮ್ಯದ ಪ್ರಥಮ ಕಾರ್ಖಾನೆ ಎಂಬ ಹೆಗ್ಗಳಿಕೆ ಪಾತ್ರವಾಗಿರುವ, ಸುಮಾರು ಒಂಬತ್ತು ದಶಕಗಳ ಇತಿಹಾಸ ಇರುವ ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆ (ಮೈಷುಗರ್) ಯನ್ನು ಪುನರಾರಂಭಿಸುವ ಮೂಲಕ ರೈತರ ಬದುಕಿನಲ್ಲಿ ಸರ್ಕಾರ ಹೊಸ ಭರವಸೆ ಹುಟ್ಟಿಸಿದೆ.

ಕಾರ್ಖಾನೆಯಲ್ಲಿ ಈಗ ಸಾಂಕೇತಿಕವಾಗಿ ಕಬ್ಬು ಅರೆಯುವ ಮತ್ತು ಸಕ್ಕರೆ ತಯಾರು ಮಾಡುವ ಕೆಲಸ ಆರಂಭವಾಗಿದೆ. ಮುಂದಿನ ದಿನಗಳಲ್ಲಿ





Downloaded From:www.kpscvaani.com



ಕಾರ್ಖಾನೆ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸಲಿದ್ದು ರೈತರ ಬದುಕಲ್ಲಿ ಹೊಸ ಭರವಸೆ ಹುಟ್ಟಿಸಿದೆ. ಮಂಡ್ಯ ಜಿಲ್ಲೆಯ ಭಾಗದ ಅನ್ನದಾತ ಈಗ ನಿರಾಳವಾಗಿದ್ದಾನೆ. ಮನದಲ್ಲಿ ತುಂಬಿದ್ದ ದುಗುಡವನ್ನು, ಆತಂಕವನ್ನು ಬಗೆ ಹರಿಸಿದ ಸರ್ಕಾರದ ಕ್ರಮದ ಬಗ್ಗೆ ಕೊಟ್ಟ ಭರವಸೆಯನ್ನು ಸರ್ಕಾರ ಉಳಿಸಿಕೊಂಡ ಕಾರಣಕ್ಕೆ ಅವರಲ್ಲಿ ಸಂತೋಷ ಮನೆ ಮಾಡಿದೆ.

ಕಳೆದ ನಾಲ್ಕು ವರ್ಷಗಳ ಹಿಂದೆ ತಾಂತ್ರಿಕ ಕಾರಣಗಳಿಗಾಗಿ ಈ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕೆಲಸವನ್ನು ನಿಲ್ಲಿಸಲಾಗಿತ್ತು. ತೀರಾ ಹಳೆಯದಾದ ಯಂತ್ರೋಪಕರಣಗಳೂ ಸೇರಿದಂತೆ ಕಾಲಕ್ಕೆ ತಕ್ಕಂತೆ ತಾಂತ್ರಿಕ ವ್ಯವಸ್ಥೆ, ಸಲಕರಣೆಗಳ ಬದಲಾವಣೆಯೂ ಅಗತ್ಯವಿದ್ದುದರಿಂದ ಮತ್ತು ಇನ್ನಿತರೆ ಸಮಸ್ಯೆಗಳ ಕಾರಣಕ್ಕೆ ಕಾರ್ಖಾನೆ ನಿಂತು ಹೋಗಿತ್ತು.

ಕಾರ್ಖಾನೆಯ ಪುನರಾರಂಭ ಕುರಿತಂತೆ ಅಲ್ಲೊಂದು ಇಲ್ಲೊಂದು ಅಪಸ್ವರದ ಮಾತುಗಳು ಸಾರ್ವತ್ರಿಕವಾಗಿ ಕೇಳಿ ಬರುತ್ತಿದ್ದರೂ ಅದನ್ನು ಲೆಕ್ಕಿಸದ ಸರ್ಕಾರ ತನ್ನ ಬದ್ಧತೆಯನ್ನು ಪ್ರದರ್ಶಿಸಿ, ರೈತರಿಗೆ ನೀಡಿದ ವಚನದಂತೆ ಕಾರ್ಖಾನೆಯಲ್ಲಿದ್ದ ಸಣ್ಣ ಪುಟ್ಟ ದೋಷಗಳನ್ನು ಸರಿಪಡಿಸಿ ಹೊಸ ಕಾಯಕಲ್ಪ ನೀಡಿ ಪುನರಾರಂಭಿಸುವ ಮೂಲಕ ರೈತರ ಮೊಗದಲ್ಲಿ ಮಂದಹಾಸ ಮಿನುಗುವಂತೆ ಮಾಡಿದೆ.

ಒಂದು ಸರ್ಕಾರ ಜನಪರವಾಗಿ ಹೇಗೆ ಕೆಲಸ ಮಾಡುತ್ತದೆ ಎಂಬುದಕ್ಕೆ ಮಂಡ್ಯ



ಸಕ್ಕರೆ ಕಾರ್ಖಾನೆಯ ಪುನರಾರಂಭ ಒಂದು ಸ್ಪಷ್ಟ ಉದಾಹರಣೆ. ಕಾರ್ಖಾನೆಯನ್ನೇ ನಂಬಿ ಅಸಂಖ್ಯ ರೈತರು, ಕಾರ್ಮಿಕರ ಕುಟುಂಬಗಳಿವೆ. ಆ ಕುಟುಂಬಗಳ ಸಂಕಷ್ಟವನ್ನು ಮನಗಂಡ ಸರ್ಕಾರ ತನ್ನ ಬಜೆಟ್ ನಲ್ಲಿ 50 ಕೋಟಿ ರೂ. ಅನುದಾನ ಘೋಷಿಸಿ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸುವುದಾಗಿ ರೈತರಿಗೆ ವಚನ ನೀಡಿತ್ತು. ಈಗ ಆ ಮಾತನ್ನು ಉಳಿಸಿಕೊಂಡಿದೆ.

ಭಾರತ ಕೃಷಿ ಅವಲಂಬಿತ ದೇಶ. ಕೃಷಿಕರೇ ರಾಷ್ಟ್ರದ ಆರ್ಥಿಕತೆಯ ಬೆನ್ನೆಲುಬು. ಕೃಷಿ ಆಧಾರಿತ ಕೈಗಾರಿಕೆಗಳ ಸ್ಥಾಪನೆ ಮತ್ತು ಅಂತಹ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ ನೀಡುವ ಮೂಲಕ ಸರ್ಕಾರ ದೇಶದ ಆರ್ಥಿಕ ಪ್ರಗತಿಗೆ ತನ್ನದೇ ಆದ ಕೊಡುಗೆ ನೀಡಿದೆ. ಇದು ಜನ ಪರವಾದ ಸರ್ಕಾರದ ಕಾರ್ಯ ನಿರ್ವಹಣೆಗೆ ಒಂದು ಸಾಕ್ಷಿ. ಮಂಡ್ಯ ಜಿಲೆಯಲ್ಲೇ ಒಂದು ಅಂದಾಜಿನ ಪ್ರಕಾರ 30,630 ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯಲಾಗುತ್ತಿದೆ. ಈ ಭಾಗದಲ್ಲಿ ನೀರಾವರಿ ಸೌಲಭ್ಯ ಹೆಚ್ಚಿರುವುದರಿಂದ ರೈತರಿಗೆ ಇದರಿಂದ ಅನುಕೂಲವಾಗಿದೆ.

ಬಹು ಮುಖ್ಯವಾಗಿ ಕಬ್ಬು ರೈತರಿಗೆ ಹೆಚ್ಚು ಆದಾಯ ತರುವ ಬೆಳೆ. ಇದೇ ಕಾರಣಕ್ಕಾಗಿ ಇದನ್ನು ಆರ್ಥಿಕ ಬೆಳೆ ಎಂದೇ ಗುರುತಿಸಲಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬರುವ ಮುನ್ನವೇ ಮಂಡ್ಯ ಜಿಲ್ಲೆಯ ರೈತರ ಹಿತಾಸಕ್ತಿಯನ್ನು ಮನಗಂಡು ಅಂದಿನ ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಆರಂಭಿಸಿದ ಕಾರ್ಖಾನೆ ಒಂದು ಐತಿಹಾಸಿಕ ಸಾರ್ವಜನಿಕ ಸ್ವಾಮ್ಯದ ಕೈಗಾರಿಕೆ ಎಂಬ ಹೆಗ್ಗಳಿಕೆ ಹೊಂದಿದೆ.


ಈಗ ಕಾರ್ಖಾನೆಗೆ ಅಗತ್ಯ ಮೂಲಭೂತ ಸೌಲಭ್ಯ ಒದಗಿಸಲಾಗಿದೆ. ಅಗತ್ಯ ಸಂಖ್ಯೆಯ ಕಾರ್ಮಿಕರಿಗೂ ಈಗ ಉದ್ಯೋಗ ಅವಕಾಶ ಲಭಿಸಿದೆ. ಕಾರ್ಖಾನೆ ಆರಂಭಕ್ಕೆ ಮುನ್ನ ನೆರೆಯ ರಾಜ್ಯಗಳ ಸಕ್ಕರೆ ಕಾರ್ಖಾನೆಗಳಿಗೆ ಇಲ್ಲಿನ ರೈತರು ಬೆಳೆಯುವ ಕಬ್ಬು ಸರಬರಾಜಾಗುತ್ತಿತ್ತು. ಸಾರಿಗೆ ಮತ್ತಿತರೆ ವೆಚ್ಚಗಳನ್ನೊಳಗೊಂಡಂತೆ ಇದು ರೈತರಿಗೆ ಲಾಭದಾಯಕವಾಗೇನೂ ಇರಲಿಲ್ಲ. ಹೀಗಾಗಿ ಸಂಕಷ್ಟಕ್ಕೆ ಕಾರಣವಾಗಿತ್ತು. ಒಂದು ಅಂದಾಜಿನ ಪ್ರಕಾರ ಕಾರ್ಖಾನೆ 8 ಲಕ್ಷ ಟನ್ ಕಬ್ಬು ಅರೆಯುವ ಸಾಮರ್ಥ್ಯ ಹೊಂದಿದೆ. ಸದ್ಯಕ್ಕೆ ಈಗ ವಾರ್ಷಿಕ ನಾಲ್ಕು ಸಾವಿರ ಟನ್ ಕಬ್ಬು ಅರೆಯಲು ನಿರ್ಧರಿಸಲಾಗಿದೆ.

ಕಾರ್ಖಾನೆಯ ಸಾಂಕೇತಿಕ ಪ್ರಾರಂಭೋತ್ಸವದಲ್ಲಿ ಪಾಲ್ಗೊಳ್ಳುವ ಮೂಲಕ ಕರ್ನಾಟಕ ಸರ್ಕಾರದ ಸಚಿವರಾದ ಕೆ. ಗೋಪಾಲಯ್ಯ, ನಾರಾಯಣಗೌಡ, ಲೋಕಸಭಾ ಸದಸ್ಯರಾದ ಸುಮಲತಾ ಅಂಬರೀಷ್ ಸಂಭ್ರಮಕ್ಕೆ ಕಾರಣರಾಗಿದ್ದು ಒಂದು ವಿಶೇಷ. ಮುಂದಿನ ದಿನಗಳು ಮಂಡ್ಯ ರೈತರ ಪಾಲಿಗೆ ಮೈಷುಗರ್ ಕಾರ್ಖಾನೆ ಭಾಗ್ಯೋದಯದ ಬಾಗಿಲು ತೆರೆಯಲಿದೆ. ಒಂದು ಸರ್ಕಾರ ಹೇಗೆ ಅನ್ನದಾತನ ಪರ, ಜನರ ಸಮಸ್ಯೆಗಳ ಧ್ವನಿಯಾಗಿ ಕೆಲಸ ಮಾಡುತ್ತದೆ ಎಂಬುದಕ್ಕೆ ಸಕ್ಕರೆ ಕಾರ್ಖಾನೆ ಪುನರಾರಂಭವಾಗಿರುವುದೇ ಪ್ರತ್ಯಕ್ಷ ಸಾಕ್ಷಿ.

ನಾಲ್ಕು ವರ್ಷಗಳ ಬಳಿಕ ಪುನಶ್ಚೇತನಗೊಂಡಿರುವ ಮೈ ಶುಗರ್ ಕಾರ್ಖಾನೆಯನ್ನು ಮುಂದೆಯೂ ಸರ್ಕಾರಿ ಸ್ವಾಮ್ಯದಲ್ಲೇ ನಡೆಸಲು ಸರ್ಕಾರ ನಿರ್ಧಾರ ಮಾಡಿರುವುದು ಮಂಡ್ಯ ರೈತರಿಗೆ ಸಂತಸವಾಗಿದೆಯಲ್ಲದೆ ಸರ್ಕಾರ ರೈತರ ಪರವಾಗಿದೆ ಎಂಬುದು ಅರಿವಾಗಿದೆ. ■




Downloaded From:www.kpscvaani.com



# ಐದು ರೂಪಾಯಿ ಡಾಕ್ಟರ್

# ಎಸ್.ಸಿ.ಶಂಕರೇಗೌಡ



ಡಿ. ಪಿ. ಮುರಳೀಧರ್

ಇದು ಇಪ್ಪತ್ತೊಂದನೆಯ ಶತಮಾನ ! ಐದು ರೂಪಾಯಿಗೆ ಅರ್ಧ ಲೋಟ ಕಾಫಿ ದೊರೆಯುವುದಿಲ್ಲ. ಐದು ರೂಪಾಯಿಗೆ ಅರ್ಧ ಲೋಟ ಚಹಾ ಲಭಿಸುವುದಿಲ್ಲ. ಅಷ್ಟೇ ಅಲ್ಲ ! ಐದು ರೂಪಾಯಿಗೆ ಅರ್ಧ ಲೀಟರ್ ನೀರೂ ಸಿಗುವುದಿಲ್ಲ. ಇಂತಹ ಸಂದರ್ಭದಲ್ಲಿ ಐದು ರೂಪಾಯಿಗೆ ವೈದ್ಯಕೀಯ ಸಮಾಲೋಚನಾ ಸೇವೆ, ಅದರಲ್ಲೂ ತಜ್ಞ ವೈದ್ಯಕೀಯ ಸಮಾಲೋಚನಾ ಸೇವೆ, ದೊರೆಯುತ್ತದೆ ಎಂದರೆ ನಂಬುವಿರಾ ?

ಹೌದು ! ನಂಬಲೇ ಬೇಕು. ಮಂಡ್ಯದ ತಾರಾ ಕ್ಲಿನಿಕ್‌ನ ಹೆಸರಾಂತ ಚರ್ಮರೋಗ ತಜ್ಞ ಡಾ ಎಸ್. ಸಿ. ಶಂಕರೇಗೌಡ ಅವರೇ ಐದು ರೂಪಾಯಿ ಡಾಕ್ಟರ್ ಎಂಬ ಖ್ಯಾತಿಗೆ ಪಾತ್ರರಾಗಿರುವ ಮಹನೀಯರು.

**ಯಾರು ಈ ಶಂಕರೇಗೌಡರು !**

ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕಿನ ಶಿವಳ್ಳಿ ಎಂಬ ಗ್ರಾಮದಲ್ಲಿ ದೊಡ್ಡಬೋರಮ್ಮ ಮತ್ತು ಚನ್ನೇಗೌಡ ದಂಪತಿಗಳ ಮಗನಾಗಿ 1958 ರ ಸೆಪ್ಟೆಂಬರ್ 6 ರಂದು ಜನಿಸಿದ ಶಂಕರೇಗೌಡ ಅವರು ಶಿವಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ, ಮಂಡ್ಯದಲ್ಲಿ ಪ್ರೌಢ ಶಿಕ್ಷಣ, ಮೈಸೂರಿನ ಯುವರಾಜ ಮಹಾವಿದ್ಯಾಲಯದಲ್ಲಿ ಪದವಿ ಪೂರ್ವ ಶಿಕ್ಷಣ ಹಾಗೂ ಉಡುಪಿ ಜಿಲ್ಲೆಯ ಮಣಿಪಾಲದ ಕಸ್ತೂರಬಾ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ವೈದ್ಯಕೀಯ ಶಿಕ್ಷಣ ಹಾಗೂ ಚರ್ಮರೋಗ ಶಾಸ್ತ್ರದಲ್ಲಿ ಸ್ನಾತಕ ಶಿಕ್ಷಣ ಪಡೆದಿದ್ದಾರೆ.

ತಮ್ಮ ವೈದ್ಯಕೀಯ ಶಿಕ್ಷಣ ಪೂರ್ಣಗೊಂಡ ನಂತರ ಸರ್ಕಾರಿ ವಲಯದಲ್ಲಿ ಅವಕಾಶಗಳಿದ್ದರೂ ಆಕರ್ಷಿತರಾಗದೆ, ಖಾಸಗೀ ವಲಯವನ್ನೇ ಆಯ್ಕೆ ಮಾಡಿಕೊಂಡು, ತಮ್ಮ ತವರು ಜಿಲ್ಲೆಯನ್ನೇ ಕಾರ್ಯ ಕ್ಷೇತ್ರವನ್ನಾಗಿ ರೂಪಿಸಿಕೊಂಡ ಡಾ ಶಂಕರೇಗೌಡ ಅವರು ನಲವತ್ತು ವರ್ಷಗಳ ಹಿಂದೆ ಅಂದರೆ 1982 ರಲ್ಲಿ ಮಂಡ್ಯದ ಸುಭಾಷ್ ನಗರದ ಆದಿಚುಂಚನಗಿರಿ ಕಟ್ಟಡದಲ್ಲಿ ತಾರಾ ಕ್ಲಿನಿಕ್ ಹೆಸರಿನಲ್ಲಿ ಚಿಕಿತ್ಸಾಲಯವನ್ನು ತೆರೆದು ತಮ್ಮ ವೃತ್ತಿಯನ್ನು ಪ್ರಾರಂಭಿಸಿದಾಗ, ವೈದ್ಯಕೀಯ ಸೇವೆ ಎಂಬುದು ಸೇವೆಯೇ ಆಗಿರಬೇಕು ಎಂಬ ಸದುದ್ದೇಶ ಹೊತ್ತು ನಿಗದಿಪಡಿಸಿದ ಸಮಾಲೋಚನಾ ಶುಲ್ಕ ಐದು ರೂಪಾಯಿಗಳು ಮಾತ್ರ. ಮಂಡ್ಯದ ಬಂಡೀಸಿದ್ದೇಗೌಡ ಬಡಾವಣೆಯ ವಾರ್ಡ್ ಸಂಖ್ಯೆ : 5 ರಲ್ಲಿ ತಮ್ಮ ಮನೆಯ ಅಂಗಳದಲ್ಲಿಯೇ ಇದೀಗ ತಾರಾ ಕ್ಲಿನಿಕ್ ಕಾರ್ಯ ನಿರ್ವಹಿಸುತ್ತಿದೆ.



Downloaded From:www.kpscvaani.com

ನಲವತ್ತು ವರ್ಷಗಳ ಹಿಂದೆ ಐವತ್ತು ಪೈಸೆಗೆ ಒಂದು ಕೆ ಜಿ ಅಕ್ಕಿ ದೊರೆಯುತ್ತಿತ್ತು. ಇಂದು ಅಕ್ಕಿಯ ಬೆಲೆ ಒಂದು ಕೆ ಜಿ ಗೆ ಐವತ್ತು ರೂಪಾಯಿಗಳಾಗಿದೆ. ಆದರೂ, ಡಾ ಶಂಕರೇಗೌಡ ಅವರ ಸಮಾಲೋಚನಾ ಶುಲ್ಕದ ಮೊತ್ತ ಬದಲಾಗಿಲ್ಲ. ವೈದ್ಯಕೀಯ ಕ್ಷೇತ್ರದಲ್ಲಿ ತಜ್ಞ ಹಾಗೂ ಪರಿಣಿತ ಸೇವೆ ಒದಗಿಸುತ್ತಿರುವ ಡಾ ಶಂಕರೇಗೌಡ ಅವರ ಸಮಾಲೋಚನಾ ಶುಲ್ಕ ಅಂದಿನಿಂದ ಇಂದಿನವರೆಗೂ ಕೇವಲ ಐದು ರೂಪಾಯಿಗಳು ಎಂಬುದೇ ಅಚ್ಚರಿಯ ವಿಚಾರ. ಆನಂದದ ವಿಷಯ.

**ಸಮಾಲೋಚನಾ ಶುಲ್ಕ ಏಕೆ ಹೆಚ್ಚಿಸಲಿಲ್ಲ ?**

ಬಹುತೇಕ ತಜ್ಞ ವೈದ್ಯರು ಐದು ನೂರು ರೂಪಾಯಿಗಳಿಂದ ಎರಡು ಸಾವಿರ ರೂಪಾಯಿಗಳವರೆಗೂ ಸಮಾಲೋಚನಾ ಶುಲ್ಕಗಳನ್ನು ನಿಗದಿಪಡಿಸಿಕೊಂಡಿದ್ದಾರೆ. ಅಂತೆಯೇ, ಸಮಾಲೋಚನಾ ಶುಲ್ಕಗಳನ್ನು ಪಡೆಯುತ್ತಿದ್ದಾರೆ. ಹೀಗಿರುವಾಗ, ತಾವೇಕೆ ಸಮಾಲೋಚನಾ ಶುಲ್ಕವನ್ನು ಹೆಚ್ಚಿಸಲಿಲ್ಲ ? ಎಂದು ಪ್ರಶ್ನಿಸಿದಾಗ ಡಾ ಶಂಕರೇಗೌಡ ಅವರು ನೀಡಿದ ಉತ್ತರ ಮೂಕವಿಸ್ಮಿತರನ್ನಾಗಿಸುತ್ತದೆ.

ವೈದ್ಯರಾಗಿ ಮೊದಲು ನಾವು ನಮ್ಮ ರೋಗಿಗಳ ಆರೋಗ್ಯ ಸ್ಥಿತಿಯನ್ನು ನೋಡಬೇಕು. ನಂತರ, ಅವರ ಆರ್ಥಿಕ ಸ್ಥಿತಿಯನ್ನೂ ಗಮನಿಸಬೇಕು. ಎಷ್ಟೋ ಮಂದಿ ರೋಗಿಗಳು ವೈದ್ಯರ ಸಮಾಲೋಚನಾ ಶುಲ್ಕ ಪಾವತಿಸಲು ಹಣವಿಲ್ಲದೆ ಚಿಕಿತ್ಸೆಯ ದಿನಾಂಕವನ್ನು ಮುಂದೂಡುತ್ತಾರೆ. ಹಣವಿಲ್ಲದೆ ಮತ್ತೆ ಕೆಲವರು ಚಿಕಿತ್ಸೆಯನ್ನೇ ಪಡೆಯುವುದಿಲ್ಲ. ತಮ್ಮೊಳಗೇ ನೋವನ್ನು ಅನುಭವಿಸುತ್ತಾರೆ. ಆರ್ಥಿಕ ಮುಗ್ಗಟ್ಟಿನ ಕಾರಣದಿಂದಾಗಿ ಯಾರೂ ಚಿಕಿತ್ಸೆಯಿಂದ ವಂಚಿತರಾಗಬಾರದು. ಬಡ ಹಾಗೂ ಕಡು ಬಡ ರೋಗಿಗಳ ನೋವು ನಿವಾರಿಸಿ, ಅವರ ಬಾಳಿಗೆ ಬೆಳಕಾಗಬೇಕೆಂಬುದೇ ನನ್ನ ಗುರಿ ಮತ್ತು ಧ್ಯೇಯ ಎಂದು ಡಾ. ಶಂಕರೇಗೌಡ ಅವರು ಹೇಳುತ್ತಾರೆ.

ಹಾಗಾದರೆ, ಐದು ರೂಪಾಯಿ ಸಮಾಲೋಚನಾ ಶುಲ್ಕ ತಮ್ಮ ಜೀವನೋಪಾಯಕ್ಕೆ ಸಾಕಾಗುವುದೇ ? ಎಂಬ ಪ್ರಶ್ನೆಗೆ, " ನಾನು ಸುಖೀ ಜೀವನಕ್ಕಿಂತಲೂ ಸರಳ ಜೀವನವನ್ನೇ ನಂಬಿದ್ದೇನೆ. ಅಷ್ಟರಲ್ಲಿಯೇ ನೆಮ್ಮದಿ ಕಾಣುತ್ತಿದ್ದೇನೆ " ಎಂಬುದು ಡಾ ಶಂಕರೇಗೌಡ ಅವರ ಸಂತೃಪ್ತ ಭಾವ.

ಸಮಾಲೋಚನಾ ಶುಲ್ಕ ಐದು ರೂಪಾಯಿ ಕೊಡಲು ಮುಜುಗುರಕ್ಕೆ ಒಳಗಾಗಿ, ಕೆಲವು ರೋಗಿಗಳು ಐವತ್ತು ರೂಪಾಯಿ, ಒಂದು ನೂರು ರೂಪಾಯಿ ನೀಡಲು ಮುಂದಾದಾಗ, ಡಾ. ಶಂಕರೇಗೌಡ ಅವರು ಆ ಮೊತ್ತವನ್ನು ಪಡೆಯಲು ತಿರಸ್ಕರಿಸಿ, ಧಿಕ್ಕರಿಸಿದ ನಿದರ್ಶನಗಳೂ ಉಂಟು.

ಡಾ ಶಂಕರೇಗೌಡ ಅವರು ವೈದ್ಯಕೀಯ ವೃತ್ತಿಯೊಂದಿಗೆ ತಮ್ಮ ಗ್ರಾಮದಲ್ಲಿ ಕೃಷಿ ಚಟುವಟಿಕೆಯಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಕಬ್ಬು ಬೆಳೆಯುತ್ತಿದ್ದಾರೆ ಎಂಬುದು ಗಮನಾರ್ಹ. ಗುದ್ದಲಿ ಹಿಡಿದು ತಮ್ಮ ಆರೂವರೆ ಎಕರೆ ಜಮೀನಿನಲ್ಲಿ ಬೆಳೆಯುತ್ತಿರುವ ಕಬ್ಬಿಗೆ ನೀರು ಹಾಯಿಸುವಾಗ ಕೂಡಾ, ಗ್ರಾಮಸ್ಥರು ರೋಗಿಯನ್ನು ಕರೆ ತಂದಾಗ ಅಲ್ಲಿಯೇ ರೋಗಿಯ ನಾಡಿ ಹಿಡಿದು ಪರೀಕ್ಷಿಸಿ, ಸ್ಥಳದಲ್ಲಿಯೇ ಔಷಧಿಯನ್ನು ಬರೆದು ಕೊಡುತ್ತಾರೆ ಎಂಬುದು ಅವರಲ್ಲಿನ ಧೀಮಂತ ವ್ಯಕ್ತಿತ್ವ ಹಾಗೂ ಸೇವಾ ಮನೋಭಾವಕ್ಕೆ ಸಾಕ್ಷಿ.

**ಕಡಿಮೆ ಬೆಲೆ ಔಷಧಿ !**

ಡಾ ಶಂಕರೇಗೌಡ ಅವರು ರೋಗಿಗಳಿಗೆ ಅನಗತ್ಯವಾಗಿ ಔಷಧಿ ಬರೆದು ಕೊಡುವುದಿಲ್ಲ. ದುಬಾರಿ ಬೆಲೆಯ ಔಷಧಿಗಳನ್ನೂ ತೆಗೆದು ಕೊಳ್ಳುವಂತೆ ಸಲಹೆ ಮಾಡುವುದಿಲ್ಲ. ಅಷ್ಟೇ ಅಲ್ಲ ! ಡಾ. ಶಂಕರೇಗೌಡ ಅವರು ಪಡೆಯಲು ಸೂಚಿಸುವ ಔಷಧಿಗಳು ಕಡಿಮೆ ಬೆಲೆಯವು. ತಮ್ಮತ್ತ ಬರುವ ರೋಗಿಗಳು ಕೈಗೆಟುಕುವ ಬೆಲೆಯ ಔಷಧಿಗಳಿಂದಲೇ ಗುಣಮುಖರಾಗಬೇಕು ಎಂಬುದು ಕೂಡಾ ಡಾ ಶಂಕರೇಗೌಡ ಅವರ ಸದಾಶಯ.

**ಜನಪ್ರಿಯತೆ ಗಳಿಸಿದ್ದು ಹೇಗೆ ?**

ಇತ್ತೀಚಿನ ದಿನಗಳಲ್ಲಿ ಕೆಲವು ವೈದ್ಯರು ತಮ್ಮ ಸೇವೆಯ ಕುರಿತು ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಜಾಹೀರಾತು ನೀಡುತ್ತಿದ್ದಾರೆ. ಗರ್ಭಿಣಿಯಾದದ್ದು ಖಚಿತವಾದ ದಿನದಿಂದಲೂ ಹೆರಿಗೆಯಾಗಿ ಮಗು ಹೊರಬರುವವರೆಗೆ ಆಸ್ಪತ್ರೆಗಳಲ್ಲಿ ಪ್ಯಾಕೇಜ್ ಘೋಷಿಸುತ್ತಿದ್ದಾರೆ. ಅಂತಹುದರಲ್ಲಿ ಡಾ ಶಂಕರೇಗೌಡ ಅವರ ಬಳಿ ಪ್ರತಿದಿನವೂ ಕನಿಷ್ಠ 300 ಮಂದಿ ರೋಗಿಗಳು ಬರುತ್ತಾರೆ ಎಂದರೆ ಇದರ ಗುಟ್ಟೇನು ? ಎಂದು ಪರಿಶೀಲಿಸಿದಾಗ, ಗುಣ ಮುಖರಾದ ಒಬ್ಬ ರೋಗಿ, ಅದೇ ಸಮಸ್ಯೆಗೆ ಒಳಗಾದ ಮತ್ತೊಬ್ಬ ರೋಗಿಗೆ ಡಾ ಶಂಕರೇಗೌಡ ಅವರ ಹಸ್ತ ಗುಣದ ಬಗ್ಗೆ ತಿಳಿಸಿ, ಕಳುಹಿಸಿದ ಸಂಗತಿ ಬಹಿರಂಗವಾಗುತ್ತದೆ. ಬಾಯಿಂದ ಬಾಯಿ ಪ್ರಚಾರವೇ ಡಾ ಶಂಕರೇಗೌಡ ಅವರಿಗೆ ಜನಪ್ರಿಯತೆ ತಂದು ಕೊಟ್ಟಿದೆ. ತಂದು ಕೊಡುತ್ತಿದೆ ಕೂಡಾ !

ಮಂಡ್ಯ ಅಥವಾ ಮೈಸೂರು ಮಾತ್ರವಲ್ಲ, ರಾಜ್ಯದ ಯಾವ ಮೂಲೆಯಲ್ಲೇ ಇರುವ ಔಷಧಿ ಅಂಗಡಿಗೆ ತೆರಳಿ, ಡಾ ಶಂಕರೇಗೌಡ ಅವರ ಶೀರ್ಷಿಕಾ ಪತ್ರದಲ್ಲಿ ಬರೆದಿರುವ ಔಷಧಿಗಳ ಪಡೆಯಲು ಹೋದರೆ, ಇವರು ಐದು ರೂಪಾಯಿ ಡಾಕ್ಟರ್ ಅಲ್ಲವಾ ? ಎಂದು ಆತ್ಮೀಯತೆಯಿಂದ ಪ್ರಶ್ನಿಸಿ ಖಚಿತಪಡಸಿ ಕೊಳ್ಳುತ್ತಾರೆ.

ಡಾ ಶಂಕರೇಗೌಡ ಅವರ ಬಳಿ ಚಿಕಿತ್ಸೆ ಪಡೆಯಲು ಮಂಡ್ಯ ಮಾತ್ರವಲ್ಲ, ರಾಜ್ಯದ ಮೂಲೆ ಮೂಲೆಗಳಿಂದಲೂ ಪ್ರತಿ ದಿನವೂ ರೋಗಿಗಳು ಬರುತ್ತಾರೆ. ಪ್ರತಿ ದಿನ ಬೆಳಿಗ್ಗೆ ಸರಿ ಸುಮಾರು ಹತ್ತು ಗಂಟೆಗೆ ಡಾ. ಶಂಕರೇಗೌಡ ಅವರ ತಾರಾ ಕ್ಲಿನಿಕ್ ಪ್ರಾರಂಭವಾದರೆ, ರಾತ್ರಿ ಒಂಭತ್ತು ಗಂಟೆಯವರೆಗೂ ಚಿಕಿತ್ಸಾಲಯ ತೆರೆದಿರುತ್ತದೆ.

ರಾಜ್ಯದಲ್ಲಿ ಕೋವಿಡ್–19 ರ ಸೋಂಕು ವ್ಯಾಪಿಸುತ್ತಿದ್ದ ಸಂದರ್ಭದಲ್ಲಿ ಬಹುತೇಕ ಚಿಕಿತ್ಸಾಲಯಗಳು ತಮ್ಮ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದ್ದು ಎಲ್ಲರಿಗೂ ತಿಳಿದ ವಿಷಯ. ಆದರೆ, ಡಾ ಶಂಕರೇಗೌಡ ಅವರ ತಾರಾ ಕ್ಲಿನಿಕ್ ಪ್ರತಿ ದಿನವೂ 15 ಗಂಟೆಯಿಂದ 18 ಗಂಟೆಗಳವರೆಗೆ ಕಾರ್ಯ ಚಟುವಟಿಕೆಗಳ ಕೇಂದ್ರವಾಗಿ ಕಾರ್ಯ ನಿರ್ವಹಿಸಿ ರೋಗಿಗಳ ನೆರವಿಗೆ ಧಾವಿಸಿತ್ತು ಎಂಬುದನ್ನು ಮಂಡ್ಯದ ಜನರು ಸ್ಮರಿಸುತ್ತಾರೆ.

**ವೈದ್ಯರಿದ್ದಾರೆ ! ವೈದ್ಯಕೀಯ ಸೇವೆ ದೊರೆಯುತ್ತಿಲ್ಲ !**

ನಮ್ಮಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪ್ರತಿಭಾವಂತ ವೈದ್ಯರಿದ್ದಾರೆ. ಆದರೆ, ವೈದ್ಯಕೀಯ ಸೇವೆ ಮಾತ್ರ ಎಲ್ಲರಿಗೂ ದೊರೆಯುತ್ತಿಲ್ಲ. ಇದಕ್ಕೆ ಎರಡು ಕಾರಣಗಳು : ಮೊದಲನೆಯದಾಗಿ, ವೈದ್ಯರಲ್ಲಿ ಸೇವಾ ಮನೋಭಾವದ


Downloaded From:www.kpscvaani.com

ಕೊರತೆ. ಎರಡನೆಯದಾಗಿ, ಗ್ರಾಮೀಣ ಪ್ರದೇಶಕ್ಕೆ ತೆರಳಿ ಸೇವೆ ಸಲ್ಲಿಸಲು ಹಿಂಜರಿಕೆ.

ಬೇರಾವುದೇ ಕ್ಷೇತ್ರದಲ್ಲಿ ವಾಣಿಜ್ಯೀಕರಣವನ್ನು ಅಂಗೀಕರಿಸಬಹುದು. ಆದರೆ, ವೈದ್ಯಕೀಯ ಕ್ಷೇತ್ರ ಮಾತ್ರ ವಾಣಿಜ್ಯೀಕರಣಕ್ಕೆ ಒಳಗೊಳ್ಳಬಾರದು. ಈ ವಿಚಾರ ಸಾಕಾರಗೊಳ್ಳಬೇಕಾದರೆ, ವೈದ್ಯಕೀಯ ಶಿಕ್ಷಣ ಅಧ್ಯಯನಕ್ಕೆ ಪ್ರತಿಭೆ ಆಧರಿಸಿ ಪ್ರವೇಶ ಕಲ್ಪಿಸುವ ಪದ್ಧತಿಗೆ ಮನ್ನಣೆ ದೊರೆಯಬೇಕು. ವಂತಿಗೆ ಪಡೆದು ಸೀಟು ಹಂಚುವ ಪರಿಪಾಠ ಹಾಗೂ ದುಬಾರಿ ಶುಲ್ಕ ವಿಧಿಸಿ ಸೀಟು ವಿತರಿಸುವ ವಿಧಾನ ಕೊನೆಗೊಳ್ಳಬೇಕು ಎಂಬುದು ಡಾ ಶಂಕರೇಗೌಡ ಅವರ ನೇರ ನುಡಿಗಳು.

ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ಪದವಿ ಪಡೆಯುವ ಮುನ್ನ, ಗ್ರಾಮೀಣ ಸೇವೆ ಕಡ್ಡಾಯಗೊಳಿಸಿರುವ ಸರ್ಕಾರದ ನಿಲುವನ್ನು ಡಾ ಶಂಕರೇಗೌಡ ಅವರು ತುಂಬು ಹೃದಯದಿಂದ ಸ್ವಾಗತಿಸಿದ್ದಾರೆ.

ಸರ್ಕಾರದ ಈ ಆದೇಶವನ್ನು ಯಾರೂ ತಪ್ಪಾಗಿ ಗ್ರಹಿಸಬಾರದು. ಗ್ರಾಮೀಣ ಸೇವೆಯಿಂದ ನವ ವೈದ್ಯರಿಗೆ ನೈಜ ಭಾರತದ ಪರಿಚಯವಾಗುತ್ತದೆ. ಅಂತೆಯೇ, ಗ್ರಾಮೀಣ ಜನರಿಗೂ ಯುವ ಪ್ರತಿಭೆಗಳ ಮೂಲಕ ಉತ್ತಮ ವೈದ್ಯಕೀಯ ಸೇವೆ ಲಭಿಸುತ್ತದೆ ಎಂಬುದು ಡಾ ಶಂಕರೇಗೌಡ ಅವರ ಅಭಿಪ್ರಾಯವಾಗಿದೆ.

**ಎಲ್ಲೆಡೆ ಆರೋಗ್ಯ ! ಎಲ್ಲರಿಗೂ ಆರೋಗ್ಯ !**

ವೈದ್ಯಕೀಯ ಸೇವೆ ಮತ್ತು ವೈದ್ಯಕೀಯ ಶಿಕ್ಷಣ ಸರ್ವರ ಸೊತ್ತಾಗಲಿ. ವೈದ್ಯಕೀಯ ಸೇವೆ ಮತ್ತು ಔಷಧಿಗಳು ಎಲ್ಲೆಡೆ ಕೈಗೆಟುಕುವ ಬೆಲೆಗೆ ದೊರೆಯಬೇಕು. ಅಂತೆಯೇ, ವೈದ್ಯಕೀಯ ಶಿಕ್ಷಣ ಪ್ರತಿಭಾವಂತರಿಗೆ ಸುಲಭ ದರದಲ್ಲಿ ಹಾಗೂ ಸುಲಭವಾಗಿ ಲಭಿಸಬೇಕು.

ಆರೋಗ್ಯ ವಿಮೆಯ ಮಹತ್ವ ಹಾಗೂ ವೈದ್ಯಕೀಯ ವಿಮೆಯ ಪ್ರಾಮುಖ್ಯತೆಯನ್ನು ಜನ ಸಾಮಾನ್ಯರು ಸವಿವರವಾಗಿ ಮನಗಾಣಬೇಕು. ಕೇಂದ್ರ ಸರ್ಕಾರದ "ಎಲ್ಲೆಡೆ ಆರೋಗ್ಯ ! ಎಲ್ಲರಿಗೂ ಆರೋಗ್ಯ !" ಎಂಬ ಪರಿಕಲ್ಪನೆಯೇ ರೋಚಕ. ಆಯುಷ್ಮಾನ್ ಭಾರತ್, ಆರೋಗ್ಯ ಕರ್ನಾಟಕ ಸಾರ್ವತ್ರಿಕ ಆರೋಗ್ಯ ಸೇವಾ ಯೋಜನೆಯಲ್ಲಿ ಎಲ್ಲರೂ ನೋಂದಾಯಿಸಿ ಕೊಂಡು, ಈ ಯೋಜನೆಯ ಲಾಭವನ್ನು ಎಲ್ಲರೂ ಪಡೆಯಬೇಕು.

ದಿನ ನಿತ್ಯದ ಬದುಕಿನಲ್ಲಿ ನಾವು ಆರೋಗ್ಯ ಕ್ಷೇತ್ರಕ್ಕೆ ಆದ್ಯತೆ ನೀಡಬೇಕು. ನಾವು ಸೇವಿಸುವ ಆಹಾರದಲ್ಲಿ ಪೌಷ್ಟಿಕತೆಯ ಜೊತೆಗೆ ಕ್ಲುಪ್ತತೆ ಇರಬೇಕು. ಒತ್ತಡದ ಬದುಕು ಆರೋಗ್ಯಕ್ಕೆ ಕೆಡುಕು. ಕಾಯಕದಲ್ಲಿ ಶ್ರದ್ಧೆ ಇರಲಿ. ಆತಂಕ ಬೇಡ. ಅನಗತ್ಯವಾದ ಮಾನಸಿಕ ಒತ್ತಡ ಹಾಗೂ ದೈಹಿಕವಾಗಿ ಬೇಡದ ಅಧಿಕ ಶ್ರಮ ಇವೆರಡರಿಂದಲೂ ನಾವು ಸದಾ ಕಾಲ ದೂರ ಇರಬೇಕು. ದೇಹಕ್ಕೆ ವ್ಯಾಯಾಮ ಮುಖ್ಯ. ಶಿಸ್ತು ಬದ್ಧ ಜೀವನಕ್ಕೆ ಬೆಳಗಿನ ಸಮಯದಲ್ಲಿ ಹಿತವಾದ ವಾಯು ವಿಹಾರ ಪುಷ್ಟಿ ನೀಡಬಲ್ಲದು ಎಂಬುದು ಡಾ ಶಂಕರೇಗೌಡ ಅವರು ಸರ್ವರಿಗೂ ನೀಡ ಬಯಸುವ ಸಲಹೆಗಳು.

ಹಸಿವು ಮುಕ್ತ ಕರ್ನಾಟಕ, ರೋಗ ಮುಕ್ತ ಕರ್ನಾಟಕವಾಗಬೇಕು. ಇದು ಸಾಕಾರವಾಗಬೇಕಾದರೆ ಸರ್ಕಾರಿ ವಲಯದ ವೈದ್ಯರು ಮಾತ್ರವಲ್ಲ, ಖಾಸಗೀ ವಲಯದ ವೈದ್ಯರೂ ಸಮಾಜಕ್ಕೆ ತಮ್ಮ ಕೊಡುಗೆ ಕೊಡಬೇಕು. ಜನಸೇವೆಯೇ ಜನಾರ್ಧನ ಸೇವೆ ಎಂಬ ಮಾತಿದೆ. ವೈದ್ಯೋ ನಾರಾಯಣೋ ಹರಿಃ ಎಂದು ಬಣ್ಣಿಸುತ್ತಾರೆ. ವೈದ್ಯರನ್ನು ದೇವರಿಗೆ ಸರಿಸಮನಾಗಿ ಕಾಣುವ ಸಂಸ್ಕೃತಿ ನಮ್ಮದು. ಸಾಮುದಾಯಿಕ ಹೊಣೆಗಾರಿಕೆಯ ಹೊತ್ತ ವೈದ್ಯರನ್ನು ಸಮಾಜ ಗುರುತಿಸುತ್ತದೆ, ಗೌರವಿಸುತ್ತದೆ ಎಂಬುದು ಡಾ ಶಂಕರೇಗೌಡ ಅವರ ಅನಿಸಿಕೆ.

**ಮಿಡಿದ ಹೃದಯಗಳು !**

ನಾಲ್ಕು ದಶಕಗಳಿಗೂ ಹೆಚ್ಚು ಕಾಲದ ತಮ್ಮ ವೃತ್ತಿ ಜೀವನದಲ್ಲಿ ದ್ವಿ–ಚಕ್ರ ವಾಹನದಲ್ಲಿ ತೆರಳುತ್ತಿದ್ದಾಗ ಒಮ್ಮೆ ಅಪಘಾತಕ್ಕೆ ಒಳಗಾಗಿ ಆಸ್ಪತ್ರೆ ಸೇರಿದ್ದು ಆ ಸಂದರ್ಭದಲ್ಲಿ ರೋಗಿಗಳಿಗೆ ತಮ್ಮ ಸೇವೆಯನ್ನು ಒದಗಿಸಲಾಗಲಿಲ್ಲ ಎಂದು ಡಾ ಶಂಕರೇಗೌಡ ಅವರು ಅಂದಿನ ಅಸಹಾಯಕ ಪರಿಸ್ಥಿತಿಯನ್ನು ತಮ್ಮ ನೆನಪಿನ ಬುತ್ತಿಯಿಂದ ಹೊರ ಹಾಕುತ್ತಾರೆ. ರಕ್ತದೊತ್ತಡ ಅಥವಾ ಮಧುಮೇಹದಂತಹ ಯಾವುದೇ ಸಮಸ್ಯೆಗಳು ತಮಗೆ ಇರಲಿಲ್ಲ.

ತಮ್ಮ ದೇಹದಲ್ಲಿ ಕೊಬ್ಬಿನಾಂಶ ಹೆಚ್ಚಾದ ಹಿನ್ನೆಲೆಯಲ್ಲಿ ಇದೇ ಮೇ 17 ರಂದು ತಮಗೆ ಹೃದಯಾಘಾತವಾದದ್ದು ತಮ್ಮ ಅನುಭವಕ್ಕೆ ಬಂತು. ಪತ್ನಿ ರುಕ್ಮಿಣಿ ಮತ್ತು ಮಗಳು ಉಜ್ವಲಾಗೆ ವಿಷಯ




ತಿಳಿಸಿ, ಬೆಂಗಳೂರಿನ ಖಾಸಗೀ ಆಸ್ಪತ್ರೆಗೆ ದಾಖಲಾಗಿ, ತೆರೆದ ಹೃದಯದ ಶಸ್ತ್ರ ಚಿಕಿತ್ಸೆಗೆ ಒಳಪಟ್ಟಾಗ, ಲಕ್ಷಾಂತರ ಹೃದಯಗಳು ನನಗಾಗಿ ಮಿಡಿದವು. ಆಸ್ಪತ್ರೆಯ ಮುಂದೆ ಜನಸಾಗರವೇ ನೆರೆದಿತ್ತು ಎಂಬ ವಿಷಯವು ಆಸ್ಪತ್ರೆಯಿಂದ ಬಿಡುಗಡೆಯಾದಾಗ ನನ್ನ ಗಮನಕ್ಕೆ ಬಂತು. ನನ್ನಲ್ಲಿ ಎಂದೋ ಚಿಕಿತ್ಸೆ ಪಡೆದವರೂ ನನಗಾಗಿ ಪ್ರಾರ್ಥಿಸಿದ್ದಾರೆ ಎಂಬುದನ್ನು ಒಂದು ಕ್ಷಣ ಸ್ಮರಿಸಿಕೊಂಡರೆ ನನ್ನ ಹೃದಯ ತುಂಬಿ ಬರುತ್ತದೆ.

ನನ್ನ ಆರೋಗ್ಯ ಸಮಸ್ಯೆಯ ಹಿನ್ನೆಲೆಯಲ್ಲಿ ಮೇ 17 ರಿಂದ ಆಗಸ್ಟ್ 1 ರ ವರೆಗೆ ತಾರಾ ಕ್ಲಿನಿಕ್‌ನ ಕಾರ್ಯ ಚಟುವಟಿಕೆಗಳನ್ನು ನಾನು ಅನಿವಾರ್ಯವಾಗಿ ಸ್ಥಗಿತಗೊಳಿಸಬೇಕಾಯಿತು. ನನ್ನ ಉಸಿರು ಇರುವವರೆಗೂ, ದೇವರು ನನಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಉತ್ತಮ ಆರೋಗ್ಯ ಕರುಣಿಸಿರುವವರೆಗೂ, ನಾನು ಜನ ಸೇವೆ ಮಾಡುತ್ತೇನೆ. ಮುಂದಿನ ದಿನಗಳಲ್ಲೂ ನನ್ನ ಸಮಾಲೋಚನಾ ಶುಲ್ಕವನ್ನು ಹೆಚ್ಚಳ ಮಾಡುವ ಚಿಂತನೆ ನನ್ನಲ್ಲಿಲ್ಲ ಎಂಬುದು ಡಾ ಶಂಕರೇಗೌಡ ಅವರ ನುಡಿ ಮುತ್ತುಗಳು.

ಇಂತಹ ವೈದ್ಯರು ನಾಡಿನೆಲ್ಲೆಡೆ ಪಸರಿಸಲಿ. ಇಂತಹ ತಜ್ಞ ವೈದ್ಯರ ಸೇವೆ ಬಡವರಿಗೆ ಮತ್ತು ಕಡು ಬಡವರಿಗೆ ಸದಾ ಕಾಲ ಲಭಿಸಲಿ. ಇಂತಹ ವೈದ್ಯರಿಂದ ಆರೋಗ್ಯವಂತ ಸಮಾಜ ನಿರ್ಮಾಣವಾಗಲಿ ಎಂಬ ಮಾತುಗಳನ್ನು ತಾವೂ ಕೂಡಾ ಒಪ್ಪುವಿರಲ್ಲವೇ ?



Downloaded From:www.kpscvaani.com



# ಆರೋಗ್ಯ ಕರ್ನಾಟಕಕ್ಕೆ ಅಭಿಯಾನ

**ಪ್ರಧಾನಿ ನರೇಂದ್ರಮೋದಿ ಅವರ ಜನ್ಮದಿನಾಚರಣೆ ಅಂಗವಾಗಿ 'ಆರೋಗ್ಯ ಕರ್ನಾಟಕಕ್ಕೆ ಅಭಿಯಾನ' ಎಂಬ ಹೆಸರಿನಲ್ಲಿ ಆರೋಗ್ಯ ಇಲಾಖೆಯು ಹದಿನೈದು ದಿನಗಳ ಕಾಲ ಆರೋಗ್ಯ ತಪಾಸಣಾ ಅಭಿಯಾನವನ್ನು ಹಮ್ಮಿಕೊಂಡಿದೆ.**

ದೇಶ ಅಭಿವೃದ್ಧಿ ಹೊಂದಬೇಕಾದರೆ ಮೊದಲಿಗೆ ದೇಶದ ಜನರು ಆರೋಗ್ಯವಂತರಾಗಿರಬೇಕು. ರಾಜ್ಯ ಸರ್ಕಾರವು ರಾಜ್ಯದ ಜನತೆಯ ಆರೋಗ್ಯ ಕಾಪಾಡುವಲ್ಲಿ ಹಲವು ಪ್ರಮುಖ ಕ್ರಮಗಳನ್ನು ಕೈಗೊಳ್ಳುತ್ತಿದೆ. ಕೋವಿಡ್-19 ಸೋಂಕನ್ನು ಇತರೆ ರಾಜ್ಯಗಳಿಂತ ಯಶಸ್ವಿಯಾಗಿ ನಿಯಂತ್ರಿಸಿತಲ್ಲದೆ, ಲಸಿಕಾ ಅಭಿಯಾನದಲ್ಲೂ ಮುಂಚೂಣಿ ಸ್ಥಾನವನ್ನು ಪಡೆಯಿತು.

ಮೇಲ್ನೋಟಕ್ಕೆ ನಾವು ಚನ್ನಾಗಿಯೇ ಇರುತ್ತೇವೆ. ಆದರೆ ದೇಹದ ಒಳಗೆ ಏನಾದರು ವ್ಯತ್ಯಾಸಗಳಾಗಿದ್ದರೆ ಅದು ನಮಗೆ ತಿಳಿಯದು. ಎಷ್ಟೋ ಬಾರಿ ಕೆಲವು ಮಾರಣಾಂತಿಕ ಕಾಯಿಲೆಗಳು ಉಲ್ಬಣಗೊಳ್ಳುವವರೆಗೂ ರೋಗದ ಲಕ್ಷಣಗಳು ಕಂಡುಬರುವುದಿಲ್ಲ. ಈ  ಹಂತದಲ್ಲಿ ಚಿಕಿತ್ಸೆ ಫಲಕಾರಿಯಾಗುವುದು ಬಹಳ ಕಷ್ಟ. ಹಾಗಾಗಿ ನಿಯಮಿತವಾಗಿ ಆಗಾಗ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಅತ್ಯಂತ ಅವಶ್ಯಕ.

ಆರೋಗ್ಯದಿಂದ ಇರಬೇಕಾದರೆ ಪ್ರತಿಯೊಬ್ಬರೂ ಆಗಾಗ ಆರೋಗ್ಯ ತಪಾಸಣೆ ಮಾಡಿಕೊಳ್ಳಬೇಕು. ರೋಗ ಬಂದಾಗ ಚಿಕಿತ್ಸೆ ಪಡೆಯುವುದಕ್ಕಿಂತ ರೋಗ ಬರದಂತೆ ತಡೆಯುವುದು ಬಹಳ ಮುಖ್ಯ. ಹಾಗಾಗಿ ವರ್ಷಕ್ಕೊಮ್ಮೆಯಾದರೂ ಆರೋಗ್ಯ ತಪಾಸಣೆ ಮಾಡಿಸುವ ಮನೋಭಾವವನ್ನು ಜನರಲ್ಲಿ ಬೆಳೆಸುವ ಗುರಿಯನ್ನು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅವರು ಹೊಂದಿದ್ದಾರೆ.

ಹಾಗಾಗಿ, ಈ ನಿಟ್ಟಿನಲ್ಲಿ ಅವರು ಇದೇ ಸೆಪ್ಟೆಂಬರ್ 17 ರಂದು ಪ್ರಧಾನಿ ನರೇಂದ್ರ ಮೋದಿಯವರ ಜನ್ಮದಿನದ ಅಂಗವಾಗಿ, ಆರೋಗ್ಯ ಮತ್ತು ಕುಟುಂಬ



Downloaded From:www.kpscvaani.com

ಕಲ್ಯಾಣ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ವತಿಯಿಂದ ಗಾಂಧಿ ಜಯಂತಿಯವರೆಗೆ ಜನರಿಗೆ ಆರೋಗ್ಯ ತಪಾಸಣೆ ನಡೆಸುವ ಸಲುವಾಗಿ 'ಆರೋಗ್ಯ ಕರ್ನಾಟಕಕ್ಕೆ ಅಭಿಯಾನ'ಕ್ಕೆ ಚಾಲನೆ ನೀಡಿದ್ದಾರೆ. ಬಿಎಂಸಿಆರ್ಐ ನಲ್ಲಿ ನಡೆದ ಕಾರ್ಯಕ್ರಮದಲ್ಲಿ ರಕ್ತದಾನ ಅಮೃತ ಮಹೋತ್ಸವ, ಪ್ರಧಾನಮಂತ್ರಿ ಟಿಬಿ ಮುಕ್ತ ಭಾರತ ಅಭಿಯಾನದ ಜೊತೆಗೆ, ಆರೋಗ್ಯ ಕರ್ನಾಟಕಕ್ಕೆ ಅಭಿಯಾನಕ್ಕೆ ಸಚಿವರು ಚಾಲನೆ ನೀಡಿದರು.

ಪ್ರಧಾನಿ ನರೇಂದ್ರ ಮೋದಿಯವರ ಜನ್ಮದಿನ, ಮಹಾತ್ಮ ಗಾಂಧೀಜಿ ಜಯಂತಿ, ದೀನ್ ದಯಾಳ್ ಉಪಾಧ್ಯಾಯರ ಜಯಂತಿಯನ್ನು ಪರಿಗಣಿಸಿ, ಸೆಪ್ಟೆಂಬರ್ 17 ರಿಂದ ಅಕ್ಟೋಬರ್ 2 ರವರೆಗೆ 15 ದಿನಗಳ ಕಾಲ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಅರಿವಿನ ಕೊರತೆಯಿಂದಾಗಿ ಜನರಿಗೆ ರೋಗ ಇರುವುದೇ ಗೊತ್ತಾಗುವುದಿಲ್ಲ. ಎಷ್ಟೋ ಜನರಿಗೆ ಮಧುಮೇಹ ಅತಿಯಾದ ನಂತರವೇ  ಆ ರೋಗ ಇದೆ ಎಂದು ತಿಳಿಯುತ್ತದೆ. ಇದರ ಬದಲು ನಿಯಮಿತವಾಗಿ ತಪಾಸಣೆ ಮಾಡಿಸಿದರೆ ಸಮಸ್ಯೆ ಉಂಟಾಗುವುದಿಲ್ಲ ಎಂಬುದು ಸಚಿವ ಡಾ.ಕೆ.ಸುಧಾಕರ್ ಅವರ ಅಭಿಪ್ರಾಯ.

ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಎಲ್ಲ ಬಗೆಯ ತಪಾಸಣೆ ಉಚಿತವಾಗಿದೆ. ಪ್ರತಿ ವರ್ಷವೂ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕೆಂಬ ಭಾವನೆ ಜನರಲ್ಲಿ ಬರಬೇಕು. ಮಧುಮೇಹ, ರಕ್ತದೊತ್ತಡ, ಕ್ಯಾನ್ಸರ್ ಸೇರಿದಂತೆ ಅಸಾಂಕ್ರಾಮಿಕ ಕಾಯಿಲೆಗಳು ಎಷ್ಟು ಜನರಿಗೆ ಇದೆ ಎಂಬುದನ್ನು ಅಭಿಯಾನದಲ್ಲಿ ಪತ್ತೆ ಮಾಡಲು ಉದ್ದೇಶಿಸಲಾಗಿದೆ. ಈ ಮೂಲಕ ಜನರ ಜೀವನ ವಿಧಾನದಲ್ಲಿ ಬದಲಾವಣೆ ತಂದು ಅವರ ಆರೋಗ್ಯ ವೃದ್ಧಿಗೆ ಶ್ರಮಿಸಬೇಕೆಂಬುದು ಸಚಿವರು ಮತ್ತು ಸರ್ಕಾರದ ಉದ್ದೇಶ.

ರೋಗಿಗಳು ಬರುತ್ತಾರೆ, ಅವರಿಗೆ ಚಿಕಿತ್ಸೆ ನೀಡಬೇಕು ಎಂಬುದು  ಆರೋಗ್ಯ ಇಲಾಖೆಯ ಧ್ಯೇಯವಲ್ಲ. ಜನರು ರೋಗಿಗಳಾಗಿ ಆಸ್ಪತ್ರೆಗೆ ಬರುವಂತಹ ಸ್ಥಿತಿಯೇ ಬರಬಾರದು ಎಂಬುದು ಆರೋಗ್ಯ ಇಲಾಖೆಯ ಧ್ಯೇಯ. ಹಾಗಾಗಿ ಜನರಿಗೆ ರೋಗ ಬರುವುದನ್ನೇ ತಡೆಗಟ್ಟುವುದಕ್ಕೆ ಆರೋಗ್ಯ ಇಲಾಖೆಯು ಪಣತೊಟ್ಟಿದೆ. ಇದಕ್ಕಾಗಿ ಆಶಾ ಕಾರ್ಯಕರ್ತೆಯರು, ವೈದ್ಯರು ಈ ಅಭಿಯಾನದಲ್ಲಿ ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದಾರೆ. 15–20 ಲಕ್ಷ ಮಕ್ಕಳಿಗೆ ಕಣ್ಣಿನ ಪರೀಕ್ಷೆ ಮಾಡಿ, ಅಗತ್ಯವಿದ್ದರೆ ಕನ್ನಡಕ ನೀಡಲು ಆರೋಗ್ಯ ಇಲಾಖೆಯು ಮುಂದಾಗಿದೆ. ಹಾಗೆಯೇ ಅನೀಮಿಯಾದಿಂದ ಬಳಲುವವರಿಗೆ ಸೂಕ್ತ ಚಿಕಿತ್ಸೆ ನೀಡಲು ಕ್ರಮವಹಿಸಲಾಗುತ್ತಿದೆ.

ಅನ್ನದಾನ ಮಹಾದಾನವಾದರೆ, ರಕ್ತದಾನವು ಶ್ರೇಷ್ಠದಾನವಾಗಿದೆ. ಅದೇ ರೀತಿ ಅಂಗಾಂಗಗಳ ದಾನ ಸರ್ವಶ್ರೇಷ್ಠ ದಾನವಾಗಿದೆ. ರಕ್ತದಾನ ಮಾಡುವುದರಿಂದ ದೇಹ ದುರ್ಬಲಗೊಳ್ಳುತ್ತದೆ ಎಂಬ ತಪ್ಪು ಭಾವನೆ ಇತ್ತು. ಆದರೆ ರಕ್ತ ನೀಡುವುದರಿಂದ ಅನೇಕ ರೋಗಗಳಿಂದ ದೂರವಿರಲು ಸಾಧ್ಯವಿದೆ. ರಕ್ತದೊತ್ತಡ, ಬೊಜ್ಜು, ಹೃದಯ ಸಂಬಂಧಿ ರೋಗಗಳ ಸಾಧ್ಯತೆ ರಕ್ತದಾನದಿಂದಲೇ ಕಡಿಮೆಯಾಗುತ್ತದೆ. ವರ್ಷಕ್ಕೆ ದೇಶದಲ್ಲಿ 1.28 ಲಕ್ಷ ಯುನಿಟ್ ಹಾಗೂ ರಾಜ್ಯದಲ್ಲಿ 6.80 ಲಕ್ಷ ಯುನಿಟ್ ರಕ್ತ ಬೇಕಿದೆ. ಪ್ರತಿಯೊಬ್ಬರೂ ವರ್ಷದಲ್ಲಿ ಒಂದು ಬಾರಿ ರಕ್ತದಾನ ಮಾಡಿದರೆ ರಕ್ತದ ಕೊರತೆಯೇ ಇರುವುದಿಲ್ಲ. ಭಾರತ ಯುವಜನರ ದೇಶವಾಗಿದ್ದು, ಈ ರೀತಿಯ ಪರೋಪಕಾರದ ಕೆಲಸದಲ್ಲಿ ತೊಡಗಬೇಕು. ವರ್ಷಕ್ಕೆ ಒಬ್ಬ ಪುರುಷ 3 ಬಾರಿ ಹಾಗೂ ಮಹಿಳೆ 4 ಬಾರಿ ರಕ್ತದಾನ ಮಾಡಬಹುದು. ಆದರೆ ವರ್ಷಕ್ಕೆ ಒಮ್ಮೆಯಾದರೂ ರಕ್ತದಾನ ಮಾಡಿದರೆ ರೋಗಿಗಳಿಗೆ ಅವಶ್ಯಕತೆ ಇರುವ ರಕ್ತದ ಕೊರತೆ ನೀಗಿಸಬಹುದಾಗಿದೆ.


ಇದೇ ವೇಳೆ ಕ್ಷಯ ಮುಕ್ತ ಭಾರತ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದ್ದು, 2025 ಕ್ಕೆ ರಾಜ್ಯವನ್ನು ಕ್ಷಯ ಮುಕ್ತ ಮಾಡುವ ಗುರಿಯನ್ನು ಸರ್ಕಾರವು ಹೊಂದಿದೆ. ರಾಜ್ಯದಲ್ಲಿ 36 ಸಾವಿರ ಜನರು ಕ್ಷಯದಿಂದ ಬಳಲುತ್ತಿದ್ದು, 30 ಸಾವಿರ ಜನರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಇವರ ನೆರವಿಗಾಗಿ ಆರೋಗ್ಯ ಇಲಾಖೆಯಿಂದ ಕಾರ್ಯಕ್ರಮವೊಂದನ್ನು ಜಾರಿ ಮಾಡಿಲಾಗಿದ್ದು, ಇದರಡಿ 6 ತಿಂಗಳಿಗಾಗಿ 6 ಸಾವಿರ ರೂ. ನೀಡಿ, ರೋಗಿಗಳಿಗೆ ಪೌಷ್ಟಿಕ ಆಹಾರ ನೀಡಲಾಗುತ್ತಿದೆ.

ರಾಜ್ಯದಲ್ಲಿ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನು ನಿರ್ಮಿಸಿದ್ದು, ಇವುಗಳಲ್ಲಿ ಸುಮಾರು 5 ಸಾವಿರ ಸಮುದಾಯ ಆರೋಗ್ಯ ಅಧಿಕಾರಿಗಳಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲೇ ಈ ಕೇಂದ್ರಗಳಿರುವುದರಿಂದ ಜನರು ಅಲ್ಲಿಗೆ ಹೋಗಿ ತಮ್ಮ ಆರೋಗ್ಯ ತಪಾಸಣೆಯನ್ನು ಮಾಡಿಸಿಕೊಳ್ಳುತ್ತಿದ್ದಾರೆ. ಕೋವಿಡ್–19 ಮೂರನೇ ಡೋಸ್ ಅನ್ನು ಕೂಡ ಈ ಅಭಿಯಾನದಲ್ಲಿ ನೀಡಲಾಗುತ್ತಿದೆ. ಆರೋಗ್ಯ ಇಲಾಖೆ ಹಮ್ಮಿ ಕೊಂಡಿರುವ ಉಚಿತ ಆರೋಗ್ಯ ತಪಾಸಣೆ ಅಭಿಯಾನ ಅತ್ಯಂತ ಯಶಸ್ವಿಯಾಗಿ ಜರುಗುತ್ತಿದ್ದು,  ಒಟ್ಟಿನಲ್ಲಿ ಸರ್ಕಾರದ ಈ ಅಭಿಯಾನಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ದೊರಕಿದೆ. ■






Downloaded From:www.kpscvaani.com



ಜಂಬೂಸವಾರಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು

# ನಾಲ್ಕು ಶತಮಾನ ಕಂಡಿರುವ ಮೈಸೂರು ಜಂಬೂಸವಾರಿ

**ವಿಶ್ವವಿಖ್ಯಾತ ಮೈಸೂರು ದಸರಾ ಜಂಬೂಸವಾರಿಗೆ ನಾಲ್ಕು ನೂರು ವರ್ಷಗಳಿಗೂ ಹೆಚ್ಚು ಇತಿಹಾಸ ಇರುವುದು ಅತ್ಯಂತ ರೋಚಕ ಸಂಗತಿ.**

ಅಂಶಿ ಪ್ರಸನ್ನಕುಮಾರ್

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ 'ಜಂಬೂಸವಾರಿ' ಅರ್ಥಾತ್ ಆನೆಗಳ ಮೆರವಣಿಗೆ. ಇದು ನವರಾತ್ರಿಯ ಕೊನೆಯ ದಿನವಾದ ವಿಜಯದಶಮಿಯಂದು ನಡೆಯುತ್ತದೆ. ದಸರೆಗೆ 412 ವರ್ಷಗಳ ಸುದೀರ್ಘ ಇತಿಹಾಸವಿದೆ. ಆದರೆ ಮೆರವಣಿಗೆಯಲ್ಲಿ ಆಗಿರುವ ಒಂದೇ ಒಂದು ಬದಲಾವಣೆ ಎಂದರೇ ಚಿನ್ನದ ಅಂಬಾರಿಯಲ್ಲಿ ರಾಜರ ಬದಲು ನಾಡದೇವತೆ ಚಾಮುಂಡೇಶ್ವರಿ ದೇವಿಯ ವಿಗ್ರಹ ಇರಿಸಿದ್ದು.

ಅಶ್ವಯುಜ ಶುಕ್ಲ ಪಾಡ್ಯಮಿಯಿಂದ ಅಶ್ವಯುಜ ಶುಕ್ಲ ನವಮಿವರೆಗೆ ಶರನ್ನವರಾತ್ರಿ ಆಚರಿಸಲಾಗುತ್ತದೆ. ಹತ್ತನೆಯ ದಿನ ವಿಜಯದಶಮಿ ನಡೆಯುತ್ತದೆ. ಶಿಷ್ಟರನ್ನು ರಕ್ಷಿಸುವುದು, ದುಷ್ಟರನ್ನು ಶಿಕ್ಷಿಸುವುದು ದಸರೆ ಆಚರಣೆಯ ಉದ್ದೇಶ.



Downloaded From:www.kpscvaani.com



ಜಂಬೂಸವಾರಿಯಲ್ಲಿ ಜಯಚಾಮರಾಜ ಒಡೆಯರ್ ಅವರು

## ಆನೆ ಅಂಬಾರಿ

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಆನೆಗಳದ್ದೇ ಕಾರುಬಾರು! ಆನೆಗಳಿಲ್ಲದೇ 'ವಿಜಯದಶಮಿ' ಮೆರವಣಿಗೆಯನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅರಮನೆಯ ಪೂರ್ವ ಭಾಗದ ದ್ವಾರಕ್ಕೆ 'ಜಯಮಾರ್ತಾಂಡ' ಎಂಬ ಹೆಸರಿದೆ. ಕಾಡಿನಿಂದ ನಾಡಿಗೆ ಬರುವ ಆನೆಗಳನ್ನು ಅರಮನೆಗೆ ಸಾಂಪ್ರದಾಯಿಕವಾಗಿ ಸ್ವಾಗತಿಸುವುದು ಇದೇ ದ್ವಾರದ ಮೂಲಕ. 'ಜಯಮಾರ್ತಾಂಡ' ಕೂಡ ದಸರೆಯಲ್ಲಿ 'ಚಿನ್ನದ ಅಂಬಾರಿ' ಹೊತ್ತು ಸಾಗುತ್ತಿದ್ದ ಆನೆಯ ಹೆಸರು. ಇದಾದ ನಂತರ 'ಐರಾವತ', 'ಬಿಳಿಗಿರಿ ರಂಗ', 'ದ್ರೋಣ', 'ಬಲರಾಮ', 'ಅರ್ಜುನ' ಮೊದಲಾದ ಆನೆಗಳು 750 ಕೆ.ಜಿ. ತೂಕದ ಚಿನ್ನದ ಅಂಬಾರಿ ಹೊತ್ತು ಸಾಗಿವೆ.

ಮೊದಲೆಲ್ಲಾ ಆನೆಗೆ ಶಕ್ತಿ ಇರುವವರೆಗೂ ಅಂಬಾರಿ ಹೊರಿಸಲಾಗುತ್ತಿತ್ತು. ಹೀಗಾಗಿ 'ದ್ರೋಣ' ಸತತ 18 ಬಾರಿ, 'ಬಲರಾಮ' ಸತತ 14 ಬಾರಿ, 'ಅರ್ಜುನ' ಸತತ 8 ಬಾರಿ ಅಂಬಾರಿ ಹೊರಲು ಸಾಧ್ಯವಾಯಿತು. ಆದರೆ ಸುಪ್ರೀಂಕೋರ್ಟಿನ ತೀರ್ಪಿನ ಪ್ರಕಾರ 60 ವರ್ಷ ದಾಟಿದ ಆನೆಗಳ ಮೇಲೆ ಅಂಬಾರಿ ಹೊರಿಸುವಂತಿಲ್ಲ. ಇದರಿಂದ 'ಅರ್ಜುನ' ನಂತರ 'ಅಭಿಮನ್ಯು' ಕಳೆದ ಎರಡು ವರ್ಷಗಳಿಂದ 'ಅಂಬಾರಿ ಆನೆ'ಯಾಗಿ ಕೆಲಸ ಮಾಡುತ್ತಿದೆ. ಕಳೆದೆರಡು ಬಾರಿಯೂ ಕೋವಿಡ್–19 ಕಾರಣದಿಂದ ಅರಮನೆ ಆವರಣಕ್ಕೆ 'ಜಂಬೂಸವಾರಿ' ಸೀಮಿತವಾಗಿತ್ತು. ಈ ಬಾರಿ ಬನ್ನಿಮಂಟಪದವರೆಗೆ ಅಂದರೆ 5 ಕಿ.ಮೀ. ಸಾಗಬೇಕಾಗಿದೆ.

ಅಂಬಾರಿ ಆನೆ ಅಭಿಮನ್ಯು ಜೊತೆಗೆ ಮಾಜಿ ಅಂಬಾರಿ ಆನೆ ಅರ್ಜುನ, ಗೋಪಾಲಸ್ವಾಮಿ, ಧನಂಜಯ, ಭೀಮ, ಮಹೇಂದ್ರ, ಕಾವೇರಿ, ಚೈತ್ರಾ, ಗೋಪಿ, ಸುಗ್ರೀವ, ಶ್ರೀರಾಮ, ಪಾರ್ಥಸಾರಥಿ ಮತ್ತು ವಿಜಯ ಆನೆಗಳು ಅರಮನೆ ಆವರಣದಲ್ಲಿ ಬೀಡು ಬಿಟ್ಟು ಜಂಬೂಸವಾರಿಗೆ ಸಜ್ಜಾಗುತ್ತಿವೆ.

ದಸರೆಗೆ ಬಂದಿದ್ದ 'ಲಕ್ಷ್ಮೀ' ಎಂಬ ಆನೆ ಗಂಡು ಮರಿಗೆ ಜನ್ಮ ನೀಡಿದೆ. ಹೀಗಾಗಿ ಅದು ಮೆರವಣಿಗೆಯಲ್ಲಿ ಹೋಗುತ್ತಿಲ್ಲ. ಮೂರು ತಿಂಗಳು ಅರಮನೆಯಲ್ಲಿಯೇ ಇದ್ದು, ನಂತರ ಕಾಡಿನ ಶಿಬಿರಕ್ಕೆ ತೆರಳಲಿದೆ. ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರ ಆಶಯದಂತೆ ಈ ಮರಿಗೆ 'ಶ್ರೀ ದತ್ತಾತ್ರೇಯ' ಎಂದು ನಾಮಕರಣ ಮಾಡಲಾಗಿದೆ.

ಹದಿನೈದು ವರ್ಷಗಳ ಹಿಂದೆ 'ಸರಳ' ಎಂಬ ಆನೆಯು ದಸರೆಗೆ ಬಂದಾಗ ಹೆಣ್ಣು ಮರಿಗೆ ಜನ್ಮ ನೀಡಿತ್ತು. ಅದಕ್ಕೆ 'ಚಾಮುಂಡಿ' ಎಂದು ನಾಮಕರಣ ಮಾಡಲಾಗಿತ್ತು.

ಕ್ರಿ.ಶ. 1610 ರಲ್ಲಿ ರಾಜ ಒಡೆಯರ್ ಅವರು ಮೈಸೂರು ಸಂಸ್ಥಾನದ ಮೊದಲ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಲ್ಲಿ ದಸರಾ ಆಚರಣೆಯನ್ನು ಆರಂಭಿಸಿದರು. ನಂತರ ಮೈಸೂರಿಗೆ ಸ್ಥಳಾಂತರಗೊಂಡಿತು. ದಸರಾ ಮಹೋತ್ಸವವನ್ನು ಮೈಸೂರಿಗೆ ಮುಕುಟಪ್ರಾಯದಂತಿರುವ ಚಾಮುಂಡಿಬೆಟ್ಟದ ಶ್ರೀಚಾಮುಂಡೇಶ್ವರಿ ದೇವಿಗೆ ಅಗ್ರಪೂಜೆ ಸಲ್ಲಿಸುವುದರೊಂದಿಗೆ ಆರಂಭಿಸಲಾಗುತ್ತದೆ.

ವಿಜಯದಶಮಿಯಂದು ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಮೆರವಣಿಗೆ, ನಂತರ ಬನ್ನಿಮಂಟಪದಲ್ಲಿ ಆಕರ್ಷಕ ಪಂಜಿನ ಕವಾಯತಿನೊಂದಿಗೆ ಅಂತ್ಯಗೊಳಿಸಲಾಗುತ್ತದೆ.
'ನವ ಮೈಸೂರಿನ ನಿರ್ಮಾತೃ', ರಾಷ್ಟ್ರಪಿತ ಮಹಾತ್ಮಗಾಂಧೀಜಿ ಅವರಿಂದಲೇ 'ರಾಜರ್ಷಿ' ಎಂದು ಕರೆಸಿಕೊಂಡ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲಕ್ಕೆ ಮೈಸೂರು ದಸರಾ ವಿಶ್ವ ಮನ್ನಣೆ ಗಳಿಸಿತು. ಈಗಿರುವ ಭವ್ಯ ಅರಮನೆಯು ಅವರ ಕಾಲದಲ್ಲಿಯೇ ನಿರ್ಮಾಣವಾಯಿತು. ಆ ಮೂಲಕ ಸಾಂಸ್ಕೃತಿಕ ನಗರಿಯ ಹಿರಿಮೆ–ಗರಿಮೆ ಹೆಚ್ಚಲು ಕಾರಣವಾಯಿತು.
ದಸರಾ ಎಂದರೇ ಸಾಂಸ್ಕೃತಿಕ ವೈಭವದ ಸಂಭ್ರಮ, ಪರಂಪರೆಯ ದರ್ಶನ, ಸಂಪ್ರದಾಯಕ್ಕೆ ಕನ್ನಡಿ, ಸಕಲ ಕಲೆಗಳ ಪ್ರದರ್ಶನಕ್ಕೆ ವೇದಿಕೆ. ಪ್ರವಾಸೋದ್ಯಮಕ್ಕೆ ಪ್ರೇರಣೆ, ಅಧರ್ಮದ ವಿರುದ್ಧ ಧರ್ಮಕ್ಕೆ ಸಂದ ಜಯದ ಮೆಲಕು ಮತ್ತು ರಾಜರ ಆಡಳಿತದ ಸ್ಮರಣೆ.

ಮೈಸೂರನ್ನು ಆಳಿದ ಯದುವಂಶಸ್ಥರದ ಪೈಕಿ ಜಯಚಾಮರಾಜ ಒಡೆಯರ್ ಕೊನೆಯವರು. 1947 ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ರಾಜತ್ವವನ್ನು ಬಿಟ್ಟುಕೊಟ್ಟು ಪ್ರಜಾಪ್ರಭುತ್ವ ಬೆಂಬಲಿಸಿ, ರಾಜಪ್ರಮುಖರಾದರು. ಭಾಷಾವಾರು ಪ್ರಾಂತ್ಯಗಳ ರಚನೆಯಾದಾಗ 1956 ರಲ್ಲಿ ರಾಜ್ಯದ ಮೊದಲ ರಾಜ್ಯಪಾಲರಾದರು. ಆದರೂ ದಸರೆ ಆಚರಣೆ ರಾಜಮಹಾರಾಜರ ಕಾಲದಲ್ಲಿ ಇದ್ದಂತೆ ಸಾಂಪ್ರದಾಯ ಬದ್ಧವಾಗಿ ನಡೆದುಕೊಂಡು ಬರುತ್ತಿತ್ತು. ವಿಜಯದಶಮಿಯ ದಿನ ಆರಂಭದಲ್ಲಿ ನಂದಿ ಧ್ವಜ ಪೂಜೆ, ಒಂಟೆಗಳು, ನೌಫತ್ ಮತ್ತು ನಿಶಾನೆ ಆನೆಗಳು, ತುಪಾಕಿ ಗುಂಡಿನ ಗಾಡಿಗಳು, ಅಶ್ವಗಳು, ಗಜರಥ, ಪಂಚಕಳಶ ರಥ, ವಿವಿಧ ಪಡೆಗಳು, ಪಟ್ಟದ ಆನೆ, ಪಟ್ಟದ



Downloaded From:www.kpscvaani.com



ಪಲ್ಲಕ್ಕಿಯಲ್ಲಿ ಜಯಚಾಮರಾಜ ಒಡೆಯರ್, ಪಕ್ಕದಲ್ಲಿ ಶ್ರೀಕಂಠದತ್ತ ಒಡೆಯರ್

ಐತಿಹಾಸಿಕ ಚರಿತ್ರೆ

ಕುದುರೆ, ಬ್ಯಾಂಡ್‌ಗಳು ನಂತರ ಚಿನ್ನದ ಅಂಬಾರಿಯಲ್ಲಿ ಮಹಾರಾಜರಾದ ಜಯಚಾಮರಾಜ ಒಡೆಯರ್ ಅವರು ಕುಳಿತು ಮೆರವಣಿಗೆಯಲ್ಲಿ ಸಾಗುತ್ತಿದ್ದರು.

ಹೀಗಿರುವಾಗ 1971 ರಲ್ಲಿ ಸಂವಿಧಾನದ 26ನೇ ತಿದ್ದುಪಡಿಯ ಪ್ರಕಾರ ರಾಜಧನ ಪದ್ಧತಿ ಹಾಗೂ ರಾಜರಿಗೆ ಇದ್ದ ಹಕ್ಕುಬಾಧ್ಯತೆಗಳು ರದ್ದಾದವು. ಇದರಿಂದ ಜಯಚಾಮರಾಜ ಒಡೆಯರ್ ಅವರು ದಸರಾ ಆಚರಣೆ ನಿಲ್ಲಿಸಿದರು. ಆಗ ಮೈಸೂರಿನ ಗಣ್ಯ ನಾಗರಿಕರು ಸಮಿತಿ ರಚಿಸಿಕೊಂಡು ದಸರಾ ಆಚರಿಸಿದರು. ನಂತರ ಸರ್ಕಾರವೇ ಮುಂದೆ ಬಂದು 'ನಾಡಹಬ್ಬ'ವನ್ನಾಗಿ ದಸರಾವನ್ನು ಆಚರಿಸತೊಡಗಿತು. ಅಂಬಾರಿಯಲ್ಲಿ ರಾಜರ ಬದಲು ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ವಿಗ್ರಹ ಇಡಲು ಆರಂಭಿಸಲಾಯಿತು. ಚಾಮುಂಡೇಶ್ವರಿ ದೇವಿಯೂ ಮೈಸೂರು ರಾಜವಂಶಸ್ಥರ ಕುಲದೇವತೆಯೂ ಹೌದು ಎಂಬುದು ಇಲ್ಲಿ ಗಮನಾರ್ಹ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜಂಬೂಸವಾರಿಯಂದು ನಂದಿ ಧ್ವಜಕ್ಕೆ ಮುಖ್ಯಮಂತ್ರಿಗಳು ಪೂಜೆ ಸಲ್ಲಿಸಿ,



ದಸರಾ ಆಚರಣೆಯಲ್ಲಿ ಭಾಗವಹಿಸಿರುವ ಲಾಲ್ ಬಹದ್ದೂರ್ ಶಾಸ್ತ್ರಿ ಹಾಗೂ ಕಡಿದಾಳು ಮಂಜಪ್ಪ ಅವರು

ಮೆರವಣಿಗೆಗೆ ಚಾಲನೆ ನೀಡುತ್ತಾರೆ. ನಂತರ ಅರಮನೆ ಒಳಾವರಣದಲ್ಲಿ ಚಿನ್ನದ ಅಂಬಾರಿಯಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಿಯ ವಿಗ್ರಹಕ್ಕೆ ಪುಷ್ಪಾರ್ಚನೆ ಮಾಡುತ್ತಾರೆ. ತಲಾ ಒಂದು ಬಾರಿ ಉಪ ರಾಷ್ಟ್ರಪತಿ, ರಾಷ್ಟ್ರಪತಿ, ಐದು ಬಾರಿ ರಾಜ್ಯಪಾಲರು ಕೂಡ ಪುಷ್ಪಾರ್ಚನೆ ಮಾಡಿದ್ದಾರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಜಂಬೂಸವಾರಿಗೆ ಮುಖ್ಯಮಂತ್ರಿ, ಪಂಜಿನ ಕವಾಯತಿಗೆ ರಾಜ್ಯಪಾಲರು ಕಾಯಂ ಅತಿಥಿಗಳು. ಹಾಗೆಯೇ ದಸರಾ ಉದ್ಘಾಟನೆಗೆ ಗಣ್ಯರನ್ನು ಆಹ್ವಾನಿಸುವುದು ಪ್ರಾರಂಭವಾಯಿತು. ಈ ವರ್ಷ ನಮ್ಮ ದೇಶದ ನೂತನ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ದಸರಾ ಉದ್ಘಾಟನೆ ನೆರವೇರಲಿದೆ.

ರಾಜರ ಕಾಲದಂತೆ ಈಗಲೂ ನಂದಿ ಧ್ವಜ, ನೌಫತ್ ಮತ್ತು ನಿಶಾನೆ ಆನೆಗಳು, ಪೊಲೀಸ್ ವಾದ್ಯವೃಂದ, ಫಿರಂಗಿ ಗಾಡಿಗಳು, ಜಾನಪದ ಕಲಾತಂಡಗಳು, ಸ್ತಬ್ಧ ಚಿತ್ರಗಳು ಸಾಗುತ್ತವೆ. ನಂತರ ನಾದಸ್ವರ, ಆನೆಗಾಡಿಯಲ್ಲಿ ಕರ್ನಾಟಕ ವಾದ್ಯ ವೃಂದ, ಮೈಸೂರು ಅರಮನೆ ವತಿಯಿಂದ ಅಡ್ಡ ಪಲ್ಲಕ್ಕಿ, ಪಂಚ ಕಳಶ, ಅರಮನೆಯ ಗೌರವ ನಿಶಾನೆಗಳು, ಪಟ್ಟದ ಆನೆ, ಪಟ್ಟದ ಕುದುರೆ, ಒಂಟೆಗಳು, ಕೆಎಆರ್‌ಪಿ ಅಶ್ವಾರೋಹಿ ದಳದ ಇಂಗ್ಲಿಷ್ ಬ್ಯಾಂಡ್, ಪೊಲೀಸ್ ಅಶ್ವದಳ, ಚಿನ್ನದ ಅಂಬಾರಿಯಲ್ಲಿ ಶ್ರೀಚಾಮುಂಡೇಶ್ವರಿ ದೇವಿಯ ವಿಗ್ರಹ, ಪೊಲೀಸ್ ಅಶ್ವದಳ ಸಾಗುತ್ತವೆ.


ಇನ್ನು 750 ಕೆ.ಜಿ. ತೂಕದ ಚಿನ್ನದ ಅಂಬಾರಿ ಹೊರುವ 'ಗಜರಾಜ'ನ ಅಕ್ಕಪಕ್ಕದಲ್ಲಿ 'ಕುಮ್ಕಿ' ಆನೆಗಳು (ಎರಡು ಹೆಣ್ಣಾನೆಗಳು) ಸಾಗುತ್ತವೆ. ಇದರಿಂದ ಎರಡು ರೀತಿಯ ಉಪಯೋಗ. ಅಂಬಾರಿ ಅತ್ತಇತ್ತ ವಾಲದಂತೆ ತಡೆಯುವುದು ಹಾಗೂ ದಸರೆಗೆ ಲಕ್ಷಾಂತರ ಮಂದಿ ಆಗಮಿಸುವುದರಿಂದ ಅಂಬಾರಿ ಹೊತ್ತ ಗಂಡಾನೆ ಕೆರಳದಂತೆ ಮಾಡಲು ಅಕ್ಕಪಕ್ಕ ಹೆಣ್ಣಾನೆಗಳನ್ನು ಕಳುಹಿಸಲಾಗುತ್ತದೆ. ಇದನ್ನು ಹೊರತುಪಡಿಸಿದರೆ ರಾಜರ ಕಾಲದಿಂದಲೂ ಜಂಬೂಸವಾರಿಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಆದರೆ ಆಯಾ ಕಾಲಕ್ಕೆ, ಅಭಿರುಚಿಗೆ ತಕ್ಕಂತೆ ದಸರೆಯ ಸ್ವರೂಪ ಬದಲಾಗಿದೆ. ಮೊದಲು ದಸರೆ ಎಂದರೇ ನಾಡಿನ ಕಲೆ, ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಸಾಂಸ್ಕೃತಿಕ ಉತ್ಸವವಾಗಿತ್ತು. ಈಗ ಈ ಭಾಗದ ಪ್ರವಾಸೋದ್ಯಮದ 'ಚಿಮ್ಮುಹಲಗೆ'ಯಾಗಿ ಪರಿವರ್ತನೆಯಾಗಿದೆ. ಖಾಸಗಿ ದರ್ಬಾರ್ ಅರಮನೆಯ ಒಳಾವರಣದಲ್ಲಿ ರಾಜವಂಶಸ್ಥರು ನಡೆಸುವ ಖಾಸಗಿ ದರ್ಬಾರ್ ಸಂಪ್ರದಾಯದಂತೆ ನಡೆದುಕೊಂಡು ಬರುತ್ತಿದೆ. ಇದರಲ್ಲಿ ಯಾವುದೇ ಬದಲಾವಣೆಗಳು ಆಗಿಲ್ಲ.

ನವರಾತ್ರಿಯ ಎಲ್ಲ ದಿನವೂ ದರ್ಬಾರ್ ನಡೆಯುತ್ತದೆ. ರಾಜವಂಶಸ್ಥರು ರಾಜಪೋಷಾಕಿನಲ್ಲಿ ಸಿಂಹಾಸನಾರೂಢರಾಗಿ ಖಾಸಗಿ ದರ್ಬಾರ್ ನಡೆಸುತ್ತಾರೆ. ಕಾಳಿ, ಲಕ್ಷ್ಮಿ, ಸರಸ್ವತಿ ಪೂಜೆ ಮೊದಲಾದ ವಿಶೇಷ ಧಾರ್ಮಿಕ ಆಚರಣೆಗಳು ನಡೆಯುತ್ತವೆ. ಆಯುಧಪೂಜೆ ಹಾಗೂ ಕೊನೆಯ ದಿನ ವಜ್ರಮುಷ್ಟಿ ಕಾಳಗ, ವಿಜಯದಶಮಿ ಮೆರವಣಿಗೆ ಕೂಡ ನಡೆಯುತ್ತದೆ. ರಾಜವಂಶಸ್ಥರು ಬೆಳ್ಳಿ ರಥದಲ್ಲಿ ಕುಳಿತು ಸಾಗುತ್ತಾರೆ. ದೇವಸ್ಥಾನಗಳಿಗೆ, ಶಮಿ ವೃಕ್ಷಕ್ಕೆ ಪೂಜೆ ಸಲ್ಲಿಸುತ್ತಾರೆ.

ಖಾಸಗಿ ದರ್ಬಾರ್‌ಗೆ ರಾಜವಂಶಸ್ಥರ ಕುಟುಂಬದವರು, ಬಂಧುಗಳು, ಆಪ್ತರು ಮತ್ತು ರಾಜವಂಶಸ್ಥರ ಕಡೆಯಿಂದ ಪಾಸ್ ಪಡೆದವರಿಗೆ ಮಾತ್ರ ಪ್ರವೇಶ ಇರುತ್ತದೆ. ಇನ್ನು ಅರಮನೆ ಆವರಣದೊಳಗೆ ಮೆರವಣಿಗೆ ವೀಕ್ಷಣೆಗೆ ಜಿಲ್ಲಾಡಳಿತದಿಂದ ಗಣ್ಯರಿಗಷ್ಟೇ ಪಾಸ್ ಅನ್ನು ವಿತರಿಸಲಾಗುತ್ತದೆ. ಇನ್ನು ಜಂಬೂಸವಾರಿ ಅರಮನೆಯಿಂದ ಬನ್ನಿಮಂಟಪದವರೆಗೆ ಸಾಗುವ ರಸ್ತೆಯ ಅಕ್ಕಪಕ್ಕದ ಅಲ್ಲಲ್ಲಿ ಸಾರ್ವಜನಿಕರ ವೀಕ್ಷಣೆಗೆ ಅನುವು ಮಾಡಿಕೊಡಲಾಗುತ್ತದೆ. ■



Downloaded From:www.kpscvaani.com



ಡಿ.ದೇವರಾಜ ಅರಸು ಪ್ರಶಸ್ತಿಗೆ ಭಾಜನರಾದ

# ಡಾ. ಅಣ್ಣಯ್ಯ ಕುಲಾಲ್



**ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸುರವರ ಹೆಸರಿನಲ್ಲಿ ಕರ್ನಾಟಕ ಸರ್ಕಾರವು ಪ್ರತಿಷ್ಠಾಪಿಸಿರುವ ರಾಜ್ಯ ಮಟ್ಟದ ಪ್ರಶಸ್ತಿಗೆ ಮಂಗಳೂರಿನ ಡಾ. ಅಣ್ಣಯ್ಯ ಕುಲಾಲ್ ಅವರು ಭಾಜನರಾಗಿದ್ದಾರೆ.**

ಎರಡು ಬಾರಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸುವ ಜೊತೆಗೆ ತಮ್ಮ ಅಧಿಕಾರದ ಅವಧಿಯಲ್ಲಿ ಹಿಂದುಳಿದ ವರ್ಗದ ಜನರಿಗೆ ಅನೇಕ ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತರುವ ಮೂಲಕ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳ ಹರಿಕಾರ ಎಂದು ಕರೆಸಿಕೊಂಡಿರುವವರೇ ದಿವಂಗತ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು. ಅವರ ಹೆಸರಿನಲ್ಲಿ ರಾಜ್ಯ ಸರ್ಕಾರವು ಪ್ರತಿ ಸಾಲಿನಲ್ಲಿ ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವ ವ್ಯಕ್ತಿ ಅಥವಾ ಸಂಘ ಸಂಸ್ಥೆಗಳಿಗೆ ರಾಜ್ಯ ಮಟ್ಟದ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತದೆ.

ಶ್ರೀಮಂತರು ಮತ್ತು ಬಡವರ ನಡುವಿನ ಅಂತರವನ್ನು ಕಡಿಮೆ ಮಾಡುವ ಸಲುವಾಗಿ ಭೂಸುಧಾರಣೆ (ಭೂಮಿ ಉಳುವವನೇ ಭೂ ಮಾಲೀಕ) ಲೇವಾದೇವಿದಾರರ ಹಿಡಿತದಿಂದ ಬಡವರನ್ನು ದೂರವಿಡಲು ಋರ್ಣ, ಜೀತ ಪದ್ಧತಿಯಿಂದ ಕೂಲಿ ಕಾರ್ಮಿಕರನ್ನು ಮುಕ್ತರನ್ನಾಗಿಸಲು ಜೀತ ಪದ್ಧತಿ ನಿರ್ಮೂಲನೆ ಕಾಯಿದೆಗಳಂತಹ ಹಲವಾರು ಜನಪರ ಕಾಯಿದೆಗಳನ್ನು ಅರಸು ಅವರು ಜಾರಿಗೆ ತಂದರು. ರಾಜ್ಯ ಕಂಡ ಇಂತಹ ಶ್ರೇಷ್ಠ ಸಮಾಜ ಸುಧಾರಕರಾದ ಇವರ ಜನ್ಮ ದಿನಾಚರಣೆಯನ್ನು ಪ್ರತಿ ವರ್ಷ ಸರ್ಕಾರದ ವತಿಯಿಂದ ಆಗಸ್ಟ್ 20 ರಂದು ಆಚರಿಸಲಾಗುತ್ತದೆ.

ಅದೇ ರೀತಿಯಲ್ಲಿ 2022–23 ನೇ ಸಾಲಿನಲ್ಲಿ ಡಿ.ದೇವರಾಜ ಅರಸುರವರ 107 ನೇ ಜನ್ಮ ದಿನಾಚರಣೆಯನ್ನು ಅರಸುರವರ ದೂರ ದೃಷ್ಟಿ ಮತ್ತು


Downloaded From:www.kpscvaani.com



**ಬಡ ಕೃಷಿ ಕುಟುಂಬದಿಂದ ಬಂದಿರುವ ಡಾ.ಅಣ್ಣಯ್ಯ ಕುಲಾಲ್ ಅವರು ಬಿಸಿಎಂ ಹಾಸ್ಟೆಲ್‌ನಲ್ಲಿ ಹದಿನಾರು ವರ್ಷಗಳ ಕಾಲ ಓದಿ ವೈದ್ಯರಾಗಿ ಬೆಳೆದರಲ್ಲದೆ, 25 ವರ್ಷಗಳಿಂದ ಕೂಲಿ ಕಾರ್ಮಿಕರು ಮತ್ತು ಬಡಜನರ ಅನುಕೂಲತೆಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಬೆಳಿಗ್ಗೆ 7 ಗಂಟೆಗೆ ಕ್ಲಿನಿಕ್ ತೆರೆದು ವೈದ್ಯಕೀಯ ಸೇವೆ ನೀಡಿದವರು.**

ಹಿಂದುಳಿದ ವರ್ಗಗಳ ಏಳಿಗೆ ಬಗ್ಗೆ ಅವರಿಗಿದ್ದ ಬದ್ಧತೆಯ ಹಿನ್ನೆಲೆಯಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಹಾಗೂ ವಿಶಿಷ್ಟತೆಯಿಂದ 3 ದಿನಗಳ ಕಾಲ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಆಚರಿಸಲಾಯಿತು. ಹಾಗೆಯೇ ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವ ಮಂಗಳೂರಿನ ಡಾ. ಅಣ್ಣಯ್ಯ ಕುಲಾಲ್ ಅವರಿಗೆ 2022 ನೇ ಸಾಲಿನ ಡಿ.ದೇವರಾಜ ಅರಸು ರಾಜ್ಯ ಮಟ್ಟದ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು.

2022-23 ನೇ ಸಾಲಿನಲ್ಲಿ ಅರ್ಹ ವ್ಯಕ್ತಿ ಅಥವಾ ಸಂಘ-ಸಂಸ್ಥೆಯನ್ನು ಈ ಪ್ರತಿಷ್ಠಿತ ರಾಜ್ಯ ಮಟ್ಟದ ಪ್ರಶಸ್ತಿಗೆ ಆಯ್ಕೆ ಮಾಡಲು ಸರ್ಕಾರವು ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯರಾದ ಹಾಗೂ ಶಿವಮೊಗ್ಗ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿರುವ ಡಾ. ಗುರುಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಿತ್ತು. ಈ ಪ್ರಶಸ್ತಿಗೆ ಭಾಜನರಾಗಿರುವ ಡಾ.ಅಣ್ಣಯ್ಯ ಕುಲಾಲ್ ಅವರ ಕುರಿತು ಹೇಳಬೇಕೆಂದರೆ, ಅವರು ಉಡುಪಿ ಜಿಲ್ಲೆಯ ಕೋಟ ಬಳಿಯ ತೆಕ್ಕಟ್ಟೆಯವರು.

ಬಡ ಕೃಷಿ ಕುಟುಂಬದಲ್ಲಿ ಜೂನ್ 1 ರಂದು ಜನಿಸಿರುವ ಅವರು ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಉಳ್ತೂರು ಮತ್ತು ಕೆದೂರು ಗ್ರಾಮಗಳಲ್ಲಿ ಮುಗಿಸಿ, ಬಿಎಸ್ಸಿ ಪದವಿಯನ್ನು ಕಂದಾಪುರದ ಭಂಡಾರ್ಕರ್ಸ್ ಕಾಲೇಜಿನಲ್ಲಿ, ಎಂ.ಬಿ.ಬಿ.ಎಸ್ ಪದವಿಯನ್ನು ಕಸ್ತೂರಿ ಬಾ ಮೆಡಿಕಲ್ ಕಾಲೇಜಿನಲ್ಲಿ ಹಾಗೂ ಎಂ.ಬಿ.ಎ ಪದವಿಯನ್ನು ಅಲಗಪ್ಪ ವಿಶ್ವವಿದ್ಯಾಲಯದಲ್ಲಿ ಪಡೆದಿದ್ದಾರೆ. ತಮ್ಮ ಪ್ರಾಥಮಿಕ ಮತ್ತು ಪದವಿ ವಿದ್ಯಾರ್ಥಿ ಜೀವನವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯದಲ್ಲಿ ಪಡೆದುಕೊಂಡಿದ್ದಾರೆ. ತಮ್ಮ ಸಮಾಜಮುಖಿ, ಜಾತ್ಯಾತೀತ ಚಿಂತನೆಯಿಂದ ಬಡವರ, ನೊಂದವರ, ನಿರ್ಗತಿಕರಿಗೆ ವೈದ್ಯಕೀಯ ಸೇವೆ ನೀಡುವ ಮೂಲಕ ಕರಾವಳಿ-ಮಲೆನಾಡು ಭಾಗವಲ್ಲದೇ ಇಡೀ ರಾಜ್ಯದಲ್ಲಿಯೇ ಉತ್ತಮ ವೈದ್ಯ ಹಾಗೂ ಸಮಾಜ ವಿಜ್ಞಾನಿ ಎಂದು ಗುರುತಿಸಿರುವ ಕಾರಣ ಅವರಿಗೆ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಶ್ರೀನಿವಾಸ್ ಯೂನಿವರ್ಸಿಟಿ ಹಾಗೂ ಶ್ರೀನಿವಾಸ್ ಮೆಡಿಕಲ್ ಕಾಲೇಜಿನಲ್ಲಿ ವೈದ್ಯರಾಗಿ ಹಾಗೂ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುವ ಇವರು ಪ್ರಸ್ತುತ ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಯಡಿ ರಾಷ್ಟ್ರದ ಖ್ಯಾತ ಸರ್ಕಾರಿ ವೆನ್‌ಲಾಕ್ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಸಂಬಂಧಿತ ಪ್ಯಾಲಿಯೇಟೀವ್ ವಿಭಾಗದಲ್ಲಿ ಬಡವರಿಗೆ ವೈದ್ಯಕೀಯ ಸೇವೆ ಸಲ್ಲಿಸುತ್ತಿದ್ದಾರೆ.

ಆಗಸ್ಟ್ 20 ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಡಾ. ಅಣ್ಣಯ್ಯ ಕುಲಾಲ್ ಅವರಿಗೆ 2022 ನೇ ಸಾಲಿನ ಡಿ ದೇವರಾಜ ಅರಸು ರಾಜ್ಯ ಮಟ್ಟದ ಪ್ರಶಸ್ತಿಯನ್ನು ಹಾಗೂ 5 ಲಕ್ಷ ರೂ ನಗದನ್ನು ನೀಡಿ ಸನ್ಮಾನಿಸಿದರು. ಶ್ರೀಯುತರಿಗೆ ಈ ಪ್ರಶಸ್ತಿಯಲ್ಲದೆ ಡಾ.ಬಿ.ಸಿ.ರಾಯ್ ಜೀವಮಾನ ಸಾಧನೆ ಪ್ರಶಸ್ತಿ, ರಾಷ್ಟ್ರೀಯ ಐಎಂಎ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ಹಾಗೂ ಗೌರವ ಪುರಸ್ಕಾರಗಳು ದೊರಕಿದೆ.


Downloaded From:www.kpscvaani.com

## ನಾಗಾವಿಯಲ್ಲಿ

# ಸಬರಮತಿ ಆಶ್ರಮ

### ಹೋಲುವ ತದ್ರೂಪ ಆಶ್ರಮ



**ಗದಗ ಜಿಲ್ಲೆಯ ನಾಗಾವಿ ಗ್ರಾಮದ ಹೊರವಲಯದ ನೈಸರ್ಗಿಕ ಗುಡ್ಡದ ಮೇಲೆ ಗುಜರಾತಿನ ಅಹಮದಾಬಾದ್‌ನಲ್ಲಿರುವ ಸವರಮತಿ ಆಶ್ರಮವನ್ನೇ ಹೋಲುವಂತಹ ತದ್ರೂಪ ಆಶ್ರಮ ನಿರ್ಮಾಣ ಆಗಿದೆ.**

ಗಾಂಧೀಜಿ ಕನಸು ನನಸಾಗಿಸುವ ಮುಖ್ಯ ಉದ್ದೇಶದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಮಹಾತ್ಮ ಗಾಂಧಿಯವರ ತತ್ವ ಸಿದ್ಧಾಂತ ಆದರ್ಶಗಳನ್ನು ಇಂದಿನ ಪೀಳಿಗೆಗೆ ಪರಿಚಯ ಮಾಡಲು ಮುದ್ರಣ ಕಾಶಿ ಗದಗ ಜಿಲ್ಲೆಯ ನಾಗಾವಿ ಹತ್ತಿರದ ಗುಡ್ಡಗಾಡು ಪ್ರದೇಶದ ನಯನ ಮನೋಹರ ಪ್ರದೇಶದಲ್ಲಿ 72 ಲಕ್ಷ ರೂ ವೆಚ್ಚದಲ್ಲಿ ಸಬರಮತಿ ತದ್ರೂಪಿ ಆಶ್ರಮವನ್ನು ನಿರ್ಮಿಸಿದೆ.

ಗುಜರಾತಿನ ಸಬರಮತಿಯಲ್ಲಿರುವ ಗಾಂಧಿ ಅವರ ಮೂಲ ಆಶ್ರಮ 3800 ಚದರಿ ಅಡಿ ಜಾಗದಲ್ಲಿ ನಿರ್ಮಾಣವಾಗಿದ್ದರೆ, ನಾಗಾವಿಯ ತದ್ರೂಪಿ ಆಶ್ರಮವನ್ನೂ 3800 ಚದರ ಅಡಿ ಜಾಗದಲ್ಲಿ ನಿರ್ಮಿಸಲಾಗಿರುವುದು ವಿಶೇಷ.

ಮಹಾತ್ಮ ಗಾಂಧೀಜಿಯವರ ಜೀವನ, ಅವರು ನಡೆದು ಬಂದ ದಾರಿ ಸೇರಿದಂತೆ ಸ್ವಾತಂತ್ರ್ಯ ಹೋರಾಟ, ಉಪ್ಪಿನ ಸತ್ಯಾಗ್ರಹ, ಸೇರಿದಂತೆ ನೂರಕ್ಕೂ ಹೆಚ್ಚು ಫೋಟೋಗಳನ್ನು ಆಶ್ರಮದಲ್ಲಿ ಹಾಕಲಾಗಿದ್ದು, ಅವರ ಕುರಿತು ತಿಳಿದುಕೊಳ್ಳಲು ಈ ಆಶ್ರಮ ಬಹಳ ಉಪಯೋಗಕಾರಿಯಾಗಿದೆ.

ಇನ್ನು ಮುಂದೆ ರಾಷ್ಟ್ರಪಿತ ಮಹಾತ್ಮಾ ಗಾಂಧಿ ಅವರ ಜೀವನದ ಭಾಗವಾಗಿದ್ದ ಸಬರಮತಿ ಆಶ್ರಮ ನೋಡಲು ಗುಜರಾತ್ ರಾಜ್ಯಕ್ಕೆ ಭೇಟಿ ನೀಡಬೇಕಿಲ್ಲ. ಗಾಂಧಿ ಆಶ್ರಮ ನೋಡಲೇ ಇಲ್ಲ ಎಂಬ ಕೊರಗೂ ಬೇಡ.... ಕಾರಣ ಸಬರಮತಿ ಆಶ್ರಮವನ್ನೇ ಹೋಲುವ ತದ್ರೂಪದ ಆಶ್ರಮ ಕರುನಾಡಿನ

ಪಿ.ವಿ.ರಿಷಿಕೇಶ್





Downloaded From:www.kpscvaani.com



ಗದಗ ಜಿಲ್ಲೆಯ ನಾಗಾವಿ ಗ್ರಾಮದ ಹೊರವಲಯದ ನೈಸರ್ಗಿಕ ಗುಡ್ಡದ ಮೇಲೆ ತಲೆ ಎತ್ತಿ ನಿಂತಿದ್ದು, ಮೂಲ ಆಶ್ರಮವನ್ನೇ ನೋಡಿದ ಅನುಭವ ನೀಡುತ್ತಿದೆ. ಬನ್ನಿ ಕರುನಾಡ ಗಾಂಧಿ ಆಶ್ರಮಕ್ಕೆ ಭೇಟಿ ನೀಡಿ ಕಣ್ತುಂಬಿಕೊಳ್ಳೋಣ.

ಕಣ್ಣು ಹಾಯಿಸಿದಷ್ಟು ಉದ್ದಕ್ಕೂ ಕಾಣಿಸುವ ಕಪ್ಪತಗುಡ್ಡದ (ನಾಗಾವಿ ಗುಡ್ಡ) ಸೊಬಗು, ಬೋಳು ಬೆಟ್ಟದ ಚೆಲುವಿಗೆ ಗರಿ ಸಿಕ್ಕಿಸಿದಂತೆ ಕಾಣಿಸುವ ಪವನ ಶಕ್ತಿ ಯಂತ್ರಗಳು, ಕುರುಚಲು ಗಿಡಗಳ ರಮ್ಯ ಪರಿಸರದ ನಡುವೆ ಧ್ಯಾನಸ್ಥ ಸ್ಥಿತಿಯಲ್ಲಿರುವಂತೆ ಭಾಸವಾಗುವ ಸಬರಮತಿ ಆಶ್ರಮ ಶೈಕ್ಷಣಿಕ ಚಟುವಟಿಕೆಗಳಿಗೆ ಇಂಬು ನೀಡುವ ಜತೆಗೆ ಇನ್ನು ಮುಂದೆ ಪ್ರವಾಸಿ ತಾಣವಾಗಿಯೂ ಗುರುತಿಸಿಕೊಳ್ಳಲಿದೆ.

1920 ನವೆಂಬರ್ 11 ರಂದು ಗಾಂಧೀಜಿ ಗದಗ ನಗರಕ್ಕೆ ಭೇಟಿ ನೀಡಿ ಶತಮಾನ ಕಳೆದಿರುವ ನೆನಪಿನಲ್ಲಿ ಗದಗ್‌ನ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಸಬರಮತಿ ಆಶ್ರಮದ ಪ್ರತಿರೂಪವನ್ನೇ ಸೃಷ್ಟಿಸುವ ಮೂಲಕ ಕನ್ನಡ ನಾಡಿನಲ್ಲೇ ಗಾಂಧೀಜಿ ಅವರ ಸಮಗ್ರ ಜೀವನವನ್ನು ಯುವ ಪೀಳಿಗೆಗೆ ಪರಿಚಯಿಸುವ ಮಹತ್ಕಾರ್ಯ ಮಾಡಿದೆ.

ಗುಜರಾತ್‌ನಲ್ಲಿ ಪ್ಲೇಗ್ ಸಾಂಕ್ರಾಮಿಕದ ಸಂದರ್ಭದಲ್ಲಿ ಮಹಾತ್ಮಾ ಗಾಂಧೀಜಿಯವರು ಕೋಚರಬ್ ಆಶ್ರಮ ತೊರೆಯುವ ತೀರ್ಮಾನ ಮಾಡಿದರು. 1917ರಲ್ಲಿ ಗುಜರಾತ್ ರಾಜ್ಯದ ಅಹಮದಾಬಾದ್‌ನ ಸಾಬರಮತಿ ನದಿ ದಂಡೆಯಲ್ಲಿ ಸಬರಮತಿ ಆಶ್ರಮ ನಿರ್ಮಾಣವಾಯಿತು. ಈ ಆಶ್ರಮ ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿಯವರ ಆಶ್ರಯ ತಾಣವಾಗಿತ್ತು. ಈಗ ಈ ಆಶ್ರಮ ಇತಿಹಾಸದ ಪುಟ ಸೇರಿದ್ದು, ಇಂದು ಅಲ್ಲಿ ವಸ್ತುಸಂಗ್ರಹಾಲಯ ಹಾಗೂ ಗಾಂಧಿ ಸ್ಮಾರಕ ನಿರ್ಮಿಸಲಾಗಿದೆ. ದೇಶ ವಿದೇಶಗಳ ಪ್ರವಾಸಿಗರು ಇಲ್ಲಿಗೆ ಭೇಟಿ ನೀಡುತ್ತಾರೆ. ಸಬರಮತಿಗೆ ಹೋಗಿ ಗಾಂಧಿ ಜೀವನ ದರ್ಶನ ಕಣ್ತುಂಬಿಕೊಳ್ಳಲು ಸಾಧ್ಯವಾಗದವರಿಗೆ ಕರ್ನಾಟಕದಲ್ಲಿ ಈ ದಿವ್ಯ ದರ್ಶನ ಮಾಡಿಸುವ ನಿಟ್ಟಿನಲ್ಲಿ ಗದಗ ವಿಶ್ವವಿದ್ಯಾಲಯ ನಾಗಾವಿಯ ತನ್ನ ಆವರಣದಲ್ಲಿ ಸಬರಮತಿ ಆಶ್ರಮದ ಪ್ರತಿರೂಪವನ್ನು ನಿರ್ಮಿಸುವ ಮೂಲಕ ಗ್ರಾಮ ಸ್ವರಾಜ್ಯದ ಕನಸು ಕಂಡಿದ್ದ ಗಾಂಧೀಜಿಯವರಿಗೆ ಗೌರವ ಅರ್ಪಿಸಿದೆ.

ಈ ಹಿಂದೆ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಎಚ್.ಕೆ. ಪಾಟೀಲ್ ಅವರ ಕನಸಿನ ಕೂಸು ಹಾಗೂ ಹಾಲಿ ಗ್ರಾಮೀಣಾಭಿವೃದ್ಧಿ ಸಚಿವರಾಗಿರುವ ಕೆ.ಎಸ್.ಈಶ್ವರಪ್ಪ ಅವರ ಮುತುವರ್ಜಿಯಿಂದ ಈ ಸಬರಮತಿ ಆಶ್ರಮ ನಿರ್ಮಾಣವಾಗಿದೆ.

ಗದಗ ತಾಲೂಕಿನ ನಾಗಾವಿ ಗ್ರಾಮದ ಗುಡ್ಡದ ಬಳಿ ನಿರ್ವಣಗೊಂಡಿರುವ ಆರ್‌ಡಿಪಿಆರ್‌ಯು ಕಟ್ಟಡದ ಆವರಣದಲ್ಲಿ ಈ ಸಬರಮತಿ ಆಶ್ರಮವನ್ನು ಹೋಲುವ ಕಟ್ಟಡವನ್ನು 72 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದೆ. ಗುಜರಾತಿನ ಸಬರಮತಿಯಲ್ಲಿರುವ ಮೂಲ ಆಶ್ರಮವನ್ನು ಹೋಲುವಂತೆಯೇ ನಾಗಾವಿಯಲ್ಲಿ ತದ್ರೂಪಿ ಆಶ್ರಮವನ್ನು ನಿರ್ಮಿಸಲಾಗಿದೆ. ಪ್ರವೇಶ ಭಾಗದಲ್ಲಿರುವ ಗಾಂಧೀಜಿ ಪ್ರತಿಮೆ, ಪುರಾತನ ಕಾಲದ ಕಂದೀಲು ಮತ್ತು ಆಶ್ರಮದ ಬಾಗಿಲು ಎಲ್ಲವೂ ಸಬರಮತಿ ಆಶ್ರಮದ ಪ್ರತಿರೂಪದಂತಿದೆ.

ಈ ತದ್ರೂಪಿ ಆಶ್ರಮದಲ್ಲಿ ಸಬರಮತಿ ಆಶ್ರಮದಲ್ಲಿರುವಂತೆ ಪ್ರಾರ್ಥನಾ ಮಂದಿರ







Downloaded From:www.kpscvaani.com




ಧ್ಯಾನಮಂದಿರ, ಗ್ರಂಥಾಲಯ, ನಯೀ ತಾಲೀಮ್ ಮಂದಿರ, ಕಸ್ತೂರಬಾ ಮಂದಿರ ಹಾಗೂ ಅಡುಗೆ ಕೊಠಡಿಗಳು ಇವೆ. ಇವೆಲ್ಲವೂ ಗಾಂಧೀಜಿಯವರ ಆದರ್ಶ, ಮೌಲ್ಯಗಳನ್ನು ಎತ್ತಿ ಹಿಡಿದಿವೆ. ಅಲ್ಲದೆ, ಮಹಾತ್ಮ ಗಾಂಧಿ ಅವರ ನೇತೃತ್ವದಲ್ಲಿ ನಡೆದ ವಿಶಿಷ್ಟ ಘಟನೆಗಳು, ಐತಿಹಾಸಿಕ ಸಂಗತಿಗಳನ್ನು ಮೆಲುಕು ಹಾಕುವಂತಹ ಸವಿವರ ಚಿತ್ರಗಳ ಪ್ರದರ್ಶನ ಇಲ್ಲಿದೆ. ಕುಲಪತಿ ಪ್ರೊ. ವಿಷ್ಣುಕಾಂತ ತಟಪಲ್ಲಿ ಅವರು ಈ ತದ್ರೂಪಿ ಆಶ್ರಮವು ಕೇವಲ ಪ್ರತಿಕೃತಿಯ ಕಟ್ಟಡವಲ್ಲ ಬದಲಾಗಿ ಒಂದು ಜೀವಂತ ಆದರ್ಶ ಕೇಂದ್ರ ಎನ್ನುತ್ತಾರೆ.

ವಿಶ್ವವಿದ್ಯಾಲಯದ ರಿಜಿಸ್ಟಾರ್ ಡಾ.ಬಿ.ಎಲ್. ಲಕ್ಕಣ್ಣನವರ್ ಅವರು ಈ ಆಶ್ರಮದಲ್ಲಿ ವಿಶೇಷವಾಗಿ ಗಾಂಧೀಜಿ ಬದುಕಿನ ಪ್ರಮುಖ ಘಟನಾವಳಿ ಆಧಾರಿತ 100 ವಿಶೇಷ ಛಾಯಾಚಿತ್ರಗಳ ಪ್ರದರ್ಶನ, ಗಾಂಧೀಜಿಯವರು ಹೇಳಿದ ಏಳು ಸಾಮಾಜಿಕ ಪಾತಕಗಳು, ಏಕಾದಶ ವ್ರತಗಳು, 18 ರಚನಾತ್ಮಕ ಕಾರ್ಯಕ್ರಮಗಳು, ಗಾಂಧೀಜಿ ಜೀವನ ಕುರಿತಾದ 500ಕ್ಕೂ ಹೆಚ್ಚು ಕೃತಿಗಳಿರುವ ಗ್ರಂಥಾಲಯ, 11 ಮುಖ್ಯ ಮೌಲ್ಯಾಧಾರಿತ ವಿಚಾರಗಳು, ಗಾಂಧೀಜಿ ಅವರ ಭಾಷಣಗಳು, ಭಜನೆ ಸೇರಿದಂತೆ ಗಾಂಧೀಜಿ ಜೀವನ ಆಧಾರಿತ ಆಡಿಯೊ–ವಿಡಿಯೊ ಪ್ರದರ್ಶನದ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದ್ದಾರೆ.

ಕೆಟ್ಟದ್ದನ್ನು ಕೇಳಬೇಡ, ಕೆಟ್ಟದ್ದನ್ನು ನೋಡಬೇಡ, ಕೆಟ್ಟ ಮಾತಾಡಬೇಡ ಎಂಬ ಸಂದೇಶ ಸಾರುವ ಮೂರು ಮರ್ಕಟಗಳ ಪ್ರತಿರೂಪ ಮತ್ತು ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಅವರು ನೂಲು ತೆಗೆಯುತ್ತಿದ್ದ ಚರಕದ ಪ್ರತಿರೂಪವೂ ಇಲ್ಲಿದೆ. ಭಜನೆ ಸೇರಿದಂತೆ ವಿಶ್ವವಿದ್ಯಾಲಯದ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಸುಂದರ ಪರಿಸರದಲ್ಲಿ ನಡೆಯುತ್ತವೆ. ಈ ಆಶ್ರಮ ತಮ್ಮ ಬದುಕಿಗೆ ಸ್ಫೂರ್ತಿಯ ಸೆಲೆಯಾಗಿದೆ ಎನ್ನುತ್ತಾರೆ ಇಲ್ಲಿಯ ವಿದ್ಯಾರ್ಥಿಗಳು.

ಗದಗನಲ್ಲಿ 2016 ರಿಂದ ಆರಂಭವಾದ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯಕ್ಕೆ ರಾಜ್ಯದಿಂದಷ್ಟೇ ಅಲ್ಲ ಹೊರ ರಾಜ್ಯದಿಂದಲೂ ವಿದ್ಯಾರ್ಥಿಗಳು ಆಗಮಿಸಿ ಪ್ರವೇಶ ಪಡೆದು, ಶಿಕ್ಷಣ ಪಡೆಯುತ್ತಿದ್ದಾರೆ. ಗುಜರಾತ್ ನಿಂದ ಬಂದಿರುವ ವಿದ್ಯಾರ್ಥಿ ವಿಮಲ್ ಆಶ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.


ಸಾರ್ವಜನಿಕರ ವೀಕ್ಷಣೆಗೂ ಮುಕ್ತವಾಗಿರುವ ಈ ಆಶ್ರಮಕ್ಕೆ ಸ್ಥಳೀಯರು ಮತ್ತು ಪ್ರವಾಸಿಗರು ಭೇಟಿ ನೀಡಿ ಗಾಂಧೀಜಿ ಅವರ ಚಿಂತನೆಗಳ ಅರಿವು ಪಡೆಯುತ್ತಿದ್ದಾರೆ. ಗದುಗಿಗೆ ಭೇಟಿ ನೀಡುವ ಪ್ರವಾಸಿಗರಿಗೆ ಬೆಳಗ್ಗೆ 10 ರಿಂದ ಮಧ್ಯಾಹ್ನ 1, ಮಧ್ಯಾಹ್ನ 2 ರಿಂದ ಸಂಜೆ 5 ರವರೆಗೆ ಆಶ್ರಮವನ್ನು ವೀಕ್ಷಣೆ ಮಾಡುವ ಅವಕಾಶ ಇದೆ. ಪ್ರತಿ ತಿಂಗಳ 11 ರಂದು ನಡೆಯುವ 'ಗಾಂಧಿ ಚಿಂತನ–ಮಂಥನ' ಕಾರ್ಯಕ್ರಮ ಸಂಜೆ 5 ರಿಂದ 6 ರವರೆಗೆ ನಡೆಯಲಿದೆ.

ಗಾಂಧಿ ಭವನ, ಗಾಂಧಿ ಅಧ್ಯಯನ ಕೇಂದ್ರಗಳು ನಾಡಿನೆಲ್ಲೆಡೆ ಇವೆ. ಆದರೆ ಮುದ್ರಣ ಕಾಶಿ ಗದಗ ಜಿಲ್ಲೆಯಲ್ಲಿ ಸಬರಮತಿ ತದ್ರೂಪಿ ಆಶ್ರಮ ನಿರ್ಮಾಣವಾಗಿರುವುದರಿಂದ ಈ ಭಾಗದ ಜನರಿಗೆ ಸಂತಸ ತಂದಿದೆ. ಒಟ್ಟಿನಲ್ಲಿ ಮಹಾತ್ಮ ಗಾಂಧಿಯವರ ತತ್ವ ಸಿದ್ಧಾಂತ ಆದರ್ಶಗಳನ್ನು ಇಂದಿನ ಪೀಳಿಗೆಗೆ ಪರಿಚಯ ಮಾಡಲು ಈ ಆಶ್ರಮ ಶ್ರಮಿಸಲಿದೆ.

ಎಲ್ಲ ವಯೋಮಾನದವರಿಗೂ ಇಷ್ಟವಾಗುವ ಸ್ಥಳದಲ್ಲಿ ಇದು ರೂಪುಗೊಂಡಿದೆ. ಹಾಗಾಗಿ ಪ್ರವಾಸಿಗರು ಗದಗ ಜಿಲ್ಲೆಯ ಪ್ರವಾಸಕ್ಕೆ ಹೋದ ಸಂದರ್ಭದಲ್ಲಿ ಸಬರಮತಿ ಆಶ್ರಮಕ್ಕೂ ಹೋಗಿಬರಹುದು. ಇಲ್ಲಿಗೆ ಬಂದವರು ಗಾಂಧೀಜಿ ಬಗ್ಗೆ ತಿಳಿದುಕೊಳ್ಳುವ ಜತೆಗೆ ಪ್ರಾಕೃತಿಕ ಸೊಬಗನ್ನೂ ಕಣ್ತುಂಬಿಕೊಳ್ಳಬಹುದು.


Downloaded From:www.kpscvaani.com

# ಗಾಂಧಿ ಎಂಬ ಆಲದ ಮರ



● ರವಿ ಬ ಹಾದಿಮನಿ

**ಅಯ್ಯಾ,**
**ನೀನೇನೂ ದೇವರಲ್ಲ**
**ಆದರೆ ದೇವರನ್ನು ಬಲವಾಗಿ ನಂಬಿದವನು,**
**ದಂತವಿಲ್ಲದಿದ್ದರೂ**
**ಬದುಕಿದ್ದ ಕಾಲದಲ್ಲೆ ದಂತಕಥೆಯಾದವನು.**

ಈ ಪಂಕ್ತಿಗಳು ಮಹಾತ್ಮ ಗಾಂಧಿ ಕುರಿತು ಸಿಪಿಕೆ ಅವರು ತಮ್ಮ ವಂದನೆ ಕವಿತೆಯಲ್ಲಿ ಮನೋಜ್ಞವಾಗಿ ಮೂಡಿಸಿದ್ದಾರೆ. ಗಾಂಧೀಜಿಯವರು ಭಾರತ ದೇಶಕ್ಕಷ್ಟೇ ಅಲ್ಲ, ಇಡೀ ಜಗತ್ತಿಗೆ ಪ್ರೇರಣೆ ನೀಡಬಲ್ಲ ವ್ಯಕ್ತಿಯಾಗಿದ್ದರು. ಗಾಂಧೀಜಿಯವರು ಜನಿಸಿ 150 ವರ್ಷಗಳಾಯಿತು. ಗಾಂಧಿಯ ಚಿಂತನೆಗಳು ಹುಟ್ಟುತ್ತಲೇ ಮತ್ತು ವೃದ್ಧಿಸುತ್ತಲೇ ಇರುವುದನ್ನು ಗಮನಿಸಿದರೆ ಅವರನ್ನು ತಿಳಿದುಕೊಳ್ಳುವುದು ಸುಲಭವಲ್ಲವೆನಿಸುತ್ತದೆ.

ಅಕ್ಟೋಬರ್ 2 1869 ರಂದು ಗುಜರಾತ್ ರಾಜ್ಯದ ಪೋರ್ ಬಂದರ್ ಪಟ್ಟಣದಲ್ಲಿ ಕರಮಚಂದ್ ಮತ್ತು ಪುತಲೀಬಾಯಿ ದಂಪತಿಗಳ ಮಗನಾಗಿ ಜನಿಸಿದರು. ಬಾಲ್ಯದಲ್ಲಿ ಇತರ ಮಕ್ಕಳಂತೆ ಹಠಮಾರಿತನ, ಸುಳ್ಳು ಹೇಳುವುದು ಇನ್ನು ಹಲವಾರು ರೀತಿಯ ತಪ್ಪುಗಳನ್ನೆಸೆದಾಗ ತಂದೆಯಿಂದ ಶಿಕ್ಷೆಯನ್ನೂ ಅನುಭವಿಸಿದ್ದಾರೆ. ಶ್ರವಣಕುಮಾರನ ಕಥೆ, ಸತ್ಯ ಹರಿಶ್ಚಂದ್ರನ ಕಥೆಗಳು ಬಾಲಕ ಗಾಂಧಿಯ ಮನಸ್ಸಿನ ಮೇಲೆ ಬಹಳ ಪ್ರಭಾವ ಬೀರಿದವು. ಜೊತೆಗೆ ತಾಯಿ ಪುತಲೀಬಾಯಿ ಪ್ರಭಾವವು ಅವರ ಬದುಕಿನ ಬದಲಾವಣೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸಿವೆ.

ಸೆಪ್ಟೆಂಬರ್ 04 1888 ರಂದು ಲಂಡನ್‌ನ ಯೂನಿವರ್ಸಿಟಿ ಕಾಲೇಜಿನಲ್ಲಿ ಕಾನೂನು ಅಧ್ಯಯನ ಮಾಡಿ ನ್ಯಾಯವಾದಿಯಾಗಿ ತರಬೇತಿ ಪಡೆಯಲು ಗಾಂಧೀಜಿ ಇಂಗ್ಲೆಂಡ್ ದೇಶದ ಪ್ರಯಾಣಕ್ಕೆ ಅಣಿಯಾದಾಗ, ತಾವು ವಿದೇಶಕ್ಕೆ ಹೋದ ಮೇಲೆ ಮಾಂಸ, ಮದ್ಯ ಹಾಗೂ ಕಾಮದಾಹಗಳಿಂದ ದೂರವಿರುವುದಾಗಿ ಜೈನ ಸನ್ಯಾಸಿ ಬೆಚಾರ್ಜಿಯವರ ಸಮ್ಮುಖದಲ್ಲಿ ತಾಯಿಗೆ ವಚನ ನೀಡಿ, ಕೊಟ್ಟ ಮಾತನ್ನು ಚಾಚೂ ತಪ್ಪದೇ ಪಾಲಿಸಿದರು. ಜೊತೆಗೆ ಇಂಗ್ಲೆಂಡ್‌ನಲ್ಲಿ ಸಸ್ಯಹಾರ ದೊರೆಯದ ಸಂದರ್ಭದಲ್ಲಿ ಸಿಗುವವರೆಗೂ ಉಪವಾಸದಿಂದಲೇ ಇದ್ದು, ತಾಯಿಯ ವಚನಕ್ಕೆ ಚ್ಯುತಿಯಾಗದಂತೆ ಭಾರತಕ್ಕೆ ಮರಳಿದ್ದು ಅವರ ದೃಢ ಮನೋಭಾವವನ್ನು ಅರಿಯಬಹುದು.


Downloaded From:www.kpscvaani.com



ನೆಹರೂ, ವಿನೋಬಾ ಭಾವೆ, ಹರ್ಡೇಕರ್ ಮಂಜಪ್ಪ, ಎಚ್. ನರಸಿಂಹಯ್ಯ ನಮ್ಮ ನಡುವೆ ಇರುವ ಹಿರಿಯ ಚೇತನ ದೊರೆಸ್ವಾಮಿಯಂಥವರು ಹಾಗೂ ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರಿಗೆ ಮತ್ತು ವಿಶ್ವದ ಹಲವು ನಾಯಕರುಗಳಿಗೆ, ಹೋರಾಟಗಾರರಿಗೆ, ಸಮುದಾಯಗಳಿಗೆ ಅಹಿಂಸಾ ಮಾರ್ಗದ ಮೂಲಕ ಹೋರಾಟಕ್ಕೆ ಸ್ಫೂರ್ತಿಯಾಗಿದ್ದ ಗಾಂಧೀಜಿಯವರು, ಯುವಕರಾಗಿದ್ದಾಗ ಅಹಿಂಸಾ ಮಾರ್ಗದ ಕುರಿತು ಪ್ರೀತಿಯೇನು ಇರಲಿಲ್ಲ."ಇಂಗ್ಲೆಂಡಿಗೆ ಹೋಗುವ ಪೂರ್ವದಲ್ಲಿ ನಾನು ಹಿಂಸಾ ಮಾರ್ಗವನ್ನು ಬೆಂಬಲಿಸುತ್ತಿದ್ದೆ. ಟಾಲ್ಸ್ಟಾಯ್ ನನ್ನನ್ನು ಹಿಂಸೆಯ ಹಾದಿಗೆ ಹೋಗದಂತೆ ತಡೆದರು" ಎಂದು ಗಾಂಧೀಜಿಯವರು ಹೇಳುತ್ತಾರೆ. ಟಾಲ್ಸ್ಟಾಯ್‌ರವರ "ಆತ್ಮಶಕ್ತಿ ಮತ್ತು ಪ್ರೀತಿ ಶಕ್ತಿ" ಪರಿಕಲ್ಪನೆಗಳು, ಅಮೆರಿಕಾದ ಚಿಂತಕ ಹೆನ್ರಿ ಡೇವಿಡ್ ಥೋರೋ ಏಕಾಂಗಿ ಪ್ರತಿಭಟನೆಗಳು ಇವರನ್ನು ಪ್ರಭಾವಿಸಿದವು.

ಉಪವಾಸ ಸತ್ಯಾಗ್ರಹಗಳಿಗೆ ತಾಯಿಯಿಂದ ಸ್ಫೂರ್ತಿಗೊಂಡರು. ಅವರೇ ತಮ್ಮ ಕೃತಿಯಲ್ಲಿ "ನನ್ನ ತಾಯಿ ಯಾವ ಸ್ವಾರ್ಥವೂ ಇರದ ಕಾರಣಗಳಿಗೂ ಉಪವಾಸ ಮಾಡುತ್ತಿದ್ದಳು. ನಮ್ಮ ಕುಟುಂಬದಲ್ಲಿ ಯಾರಿಗಾದರೂ ಕಾಯಿಲೆಯಾದರೂ ಉಪವಾಸ ಮಾಡುತ್ತಿದ್ದಳು. ಅವಳಿಂದ ನಾನು ಸ್ಫೂರ್ತಿ ಪಡೆದೆ" ಎಂದು ಹೇಳುತ್ತಾರೆ. ಅವರ ಬದುಕು ಕೇವಲ ಭಾರತೀಯರಿಗಷ್ಟೇ ಅಲ್ಲದೆ ಇಡೀ ಜಗತ್ತಿಗೆ ಪ್ರೇರಣೆಯಾಗಿತ್ತು. ಆಫ್ರಿಕಾದ ನೆಲ್ಸನ್ ಮಂಡೇಲಾ, ಅಮೆರಿಕಾದ ಜೂನಿಯರ್ ಮಾರ್ಟಿನ್ ಲೂಥರ್ ಕಿಂಗ್, ಬರ್ಮಾದ ಆಂಗ್ಸಾನ್ ಸೂಕಿ, ಆಲ್ಬರ್ಟ್ ಐನ್‌ಸ್ಟೀನ್, ವಿಲ್ ಡ್ಯುರಾಂಟ್, ಅಲ್ ಗೋರ್, ಸ್ಟೀವ್ ಜಾಬ್ಸ್, ದಲಾಯಿ ಲಾಮಾ, ಬರಾಕ್ ಒಬಾಮ, ರಿಚರ್ಡ್ ಅಟೆನ್‌ಬರ್ಗ್ ಇದು ಕೇವಲ ಬೆರಳೆಣಿಕೆ ಅಷ್ಟೆ, ಅವರು ಇನ್ನು ಅನೇಕರಿಗೆ ಪ್ರಭಾವಿತರಾಗಿದ್ದಾರೆ.

ಅಂತೆಯೇ ಮಾರ್ಟಿನ್ ಲೂಥರ್ ಕಿಂಗ್ ಅವರು "ಗಾಂಧೀಜಿ ಬ್ರಿಟಿಷರ ರಾಜಕೀಯ-ಆರ್ಥಿಕ ದಬ್ಬಾಳಿಕೆಯನ್ನು ಮುರಿಯಲು ಅಹಿಂಸೆಯನ್ನು ಬಳಸಿದರು. ನಾವೀಗ ಅದೇ ಮಾದರಿಯನ್ನು ಅಮೆರಿಕಾದಲ್ಲಿ ಬಳಸಬೇಕು" ಎಂದು ತಮ್ಮ ಮನೆಯ ಮೇಲೆ ಬಾಂಬ್ ದಾಳಿ ನಡೆದಾಗ, ಬಿಳಿಯರ ಹಿಂಸೆಗಳ ವಿರುದ್ಧ ಪ್ರತಿದಾಳಿ ನಡೆಸಲು ಸಿದ್ಧರಾಗಿದ್ದ ಸಾವಿರಾರು ಕಪ್ಪು ಜನರಿಗೆ ಶಾಂತಿಯ ಸಂದೇಶ ಬೋಧಿಸುವ ಮೂಲಕ ಹಿಂಸೆಗೆ ಪ್ರತಿಹಿಂಸೆಯನ್ನು ತಡೆಗಟ್ಟಿದರು.

ಸತ್ಯ, ಅಹಿಂಸೆ, ಸತ್ಯಾಗ್ರಹಗಳ ಮೂಲಕ ಬ್ರಿಟಿಷರನ್ನು ಮಣಿಸಿ, ದೇಶಕ್ಕೆ ಸ್ವಾತಂತ್ರ್ಯ ನೀಡುವಂತೆ ಮಾಡಿದರು, ಹಾಗಾದರೆ ಗಾಂಧೀಜಿಯೊಬ್ಬರಿಂದಲೇ ಸ್ವಾತಂತ್ರ್ಯ ದೊರೆಯಿತೆಂದು ತಿಳಿಯಬಾರದು. ಇವರಲ್ಲದೆ ಇನ್ನು ಸಾವಿರಾರು ಮಹನೀಯರ ತ್ಯಾಗ ಬಲಿದಾನದ ಮೂಲಕ ದೊರೆತಿರುವುದಂತೂ ಸತ್ಯ. ಗಾಂಧೀಜಿಯ ಪ್ರೇರಣೆಯಿಂದ ಹಲವು ನಾಯಕರು ಅವರ ತತ್ವ ಚಿಂತನೆಗಳನ್ನು ಪಾಲಿಸಿ ಶಾಂತಿಯುತ ಹೋರಾಟ ಮಾಡುವುದರ ಮೂಲಕ ಗಾಂಧಿವಾದಿಗಳಾದರು. ಉಗ್ರವಾದಿಗಳು, ಮಂದಗಾಮಿಗಳ ತ್ಯಾಗ ಬಲಿದಾನವನ್ನು ಕಡೆಗಣಿಸುವಂತಿಲ್ಲ. ಒಂದು ಮನೆಯಲ್ಲಿ ಮಕ್ಕಳಿಗೆ ಒಬ್ಬರು ಬಯ್ಯುವವರಿದ್ದರೆ, ಇನ್ನೊಬ್ಬರು ರಮಿಸುವವರಿರುವಂತೆ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಉದ್ದೇಶ ಮಾತ್ರ ಒಂದೇ ಆಗಿತ್ತು.

ಗಾಂಧೀಜಿಯು ಮೂಲ ಶಿಕ್ಷಣದಲ್ಲಿ ಆಸಕ್ತಿಯುಳ್ಳವರಾಗಿದ್ದರು. ಭಾರತದಂತ





Downloaded From:www.kpscvaani.com

ದೇಶದ ಜನರೆಲ್ಲರಿಗೂ ಉದ್ಯೋಗ ದೊರೆಯಬೇಕಾದರೆ ಶರೀರ ಶ್ರಮವನ್ನು ಕಡಿಮೆ ಮಾಡುವ, ಸಾವಿರಾರು ಜನರ ಕೆಲಸವನ್ನು ಕಸಿದುಕೊಳ್ಳುವ ಯಂತ್ರವನ್ನು ತಿರಸ್ಕರಿಸುತ್ತೇನೆ ಹೊರತು ನಾನು ಯಂತ್ರವಿರೋಧಿಯಲ್ಲವೆಂದು ತಿಳಿಸಿದರು.

ಹಾಗೇ ನೋಡಿದರೆ ನಮ್ಮ ದೇಹವೇ ಒಂದು ಯಂತ್ರ. ಹಲ್ಲಿನ ಸಂದಿನೊಳಗೆ ಸೇರಿದ ಕಸ ತೆಗೆವ ಹುಲ್ಲುಕಡ್ಡಿಯೂ ಒಂದು ಯಂತ್ರ. ಹತ್ತು ಜನಕ್ಕೆ ದುಡಿತ ಕಡಿಮೆ ಮಾಡುವ ಉದ್ದೇಶವಲ್ಲ ನನ್ನದು. ಇಡೀ ಮಾನವ ಕೋಟಿಗೆ ದುಡಿಮೆ ಬಯಸುತ್ತೇನೆ. ಹತ್ತು ಜನರ ಕೈಯಲ್ಲಿ ಧನ ಸಂಗ್ರಹವಾಗಲೆಂದಲ್ಲ, ಎಲ್ಲರ ಕೈಯಲ್ಲೂ ಹಣ ಸೇರಲಿ ಎಂದು ನನ್ನ ಬಯಕೆ ಎಂದು ಸ್ಪಷ್ಟವಾಗಿ ತಿಳಿಸಿದರು. ಒಂದು ರೀತಿಯಲ್ಲಿ ನಮ್ಮ ದೇಶದಲ್ಲಿನ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸಹಕಾರಿಯಾಗುತ್ತಿತ್ತು ಎನಿಸುತ್ತದೆ. ಒಂದು ಯಂತ್ರ ನೂರು ಜನರ ಉದ್ಯೋಗವನ್ನು ಕಸಿದುಕೊಳ್ಳುವುದರಿಂದಲೇ ಎಲ್ಲರಿಗೂ ಕೆಲಸ ನೀಡುವುದು ಕಷ್ಟಸಾಧ್ಯವಾಗಿದೆ. ಅವಶ್ಯವಿರುವಲ್ಲಿ ಯಂತ್ರಗಳನ್ನು ಬಳಸಿಕೊಂಡು, ಮಾನವರಿಂದ ಸಾಧ್ಯವಾಗುವ ಕೆಲಸಗಳನ್ನು ದುಡಿಯುವ ಕೈಗಳಿಗೆ ನೀಡುವಂತಾಗಬೇಕು. ಅಂದಾಗ ಮಾತ್ರ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಬಹುದು.

ಗಾಂಧೀಜಿ ತಮ್ಮ ಜೀವನದಲ್ಲಿ ಅನೇಕ ಅವಮಾನ ಅಪಮಾನಗಳನ್ನು, ಸಂದಿಗ್ಧ ಸ್ಥಿತಿಗಳನ್ನು ಅನುಭವಿಸಿ ಎದುರಿಸಿದ ಹಲವಾರು ಘಟನೆಗಳು ಅನೇಕರಿಗೆ ಸ್ಫೂರ್ತಿಯಾಗಿವೆ. ದಕ್ಷಿಣ ಆಫ್ರಿಕಾದ ಪೀಟರ್ ಮಾರಿಟ್ಜ್‌ಬರ್ಗ್ ರೈಲು ನಿಲ್ದಾಣದಲ್ಲಿ ವರ್ಣಭೇದ ನೀತಿಯಿಂದಾಗಿ ಪ್ರಥಮ ದರ್ಜೆ ಟಿಕೆಟ್ ಇದ್ದರೂ ಮೂರನೇ ದರ್ಜೆಗೆ ಸ್ಥಳಾಂತರಕ್ಕೆ ನಿರಾಕರಿಸಿದ್ದರಿಂದ ಬಲವಂತವಾಗಿ ರೈಲಿನಿಂದ ಇಳಿಸಲಾಯಿತು. ಇದಲ್ಲದೆ 1897 ರಲ್ಲಿ ಗಾಂಧಿಯವರು ಡರ್ಬನ್ಗೆ ಆಗಮಿಸಿದಾಗ ಅಲ್ಲಿನ ಬಿಳಿ ಮೂಲನಿವಾಸಿಗಳ ಗುಂಪೊಂದು ಇವರ ಮೇಲೆ ಹಲ್ಲೆ ನಡೆಸಿತು. ಅಮಾನವೀಯ ವರ್ಣಭೇದ ನೀತಿಯ ವಿರುದ್ಧ ಹೋರಾಟಕ್ಕಿಳಿದು ಕಪ್ಪುನಾಡಿನ ಜನರನ್ನು ಬೆಳಕಿನೆಡೆಗೆ ಕೊಂಡೊಯ್ಯುವ ಪ್ರಯತ್ನ ಮಾಡಿದರು.

ಒಂದು ಕ್ಷೌರಿಕನ ಅಂಗಡಿಗೆ ಹೋದಾಗ ಕಪ್ಪುವರ್ಣೀಯ ಎನ್ನುವ ಕಾರಣದಿಂದ ಕ್ಷೌರ ಮಾಡಲು ನಿರಾಕರಿಸಿದಾಗ, ಸ್ವತಃ ಗಾಂಧಿ ಕನ್ನಡಿ ಮುಂದೆ ನಿಂತು ಕತ್ತರಿಯಿಂದ ತಮ್ಮ ಕೂದಲನ್ನು ಕತ್ತರಿಸಿಕೊಳ್ಳುತ್ತಾರೆ. ಮರುದಿನ ಕೋರ್ಟ್‌ಗೆ ಹೋದಾಗ ಅಲ್ಲಿದ್ದರೆಲ್ಲರೂ ಇವರನ್ನು ನೋಡಿ ಗೊಳ್ಳೆಂದು ನಕ್ಕರು. ವಿಚಲಿತರಾಗದ ಗಾಂಧಿ ಅವರುಗಳಿಗೆ ಸಮರ್ಥವಾದ ಉತ್ತರವನ್ನು ನೀಡಿದರು. ಇದರ ಮೂಲಕ ಸ್ವಾವಲಂಬಿ ಜೀವನಕ್ಕೆ ಮಾದರಿಯಾದರು. ಗಾಂಧಿಯ ಈ ತತ್ವದಿಂದ ಆಫ್ರಿಕಾದ ಕಪ್ಪು ಜನರು ಹಾಗೂ ಭಾರತದ ಜಾತಿವ್ಯವಸ್ಥೆಯ ಕೆಳಸ್ತರದವರಿಗೆ ಸ್ಫೂರ್ತಿಯಾಗಿ ತಮ್ಮ ಕ್ಷೌರವನ್ನು ತಾವೇ ಮಾಡಿಕೊಂಡು ಸ್ವಾವಲಂಬಿಯಾಗಲು ಅಣಿಯಾದರು.

ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಜನವರಿ 9, 1915 ರಂದು ಭಾರತಕ್ಕೆ ಮರಳಿದರು. ನಂತರ ತಮ್ಮ ರಾಜಕೀಯ ಗುರುಗಳಾದ ಗೋಪಾಲಕೃಷ್ಣ ಗೋಖಲೆಯವರ ಸಲಹೆಯಂತೆ ದೇಶ ಪರ್ಯಟನೆ ಮಾಡಿದರು. ಈ ಅವಧಿಯಲ್ಲಿ ಭಾರತದಾದ್ಯಂತ ಸಂಚರಿಸಿ ಜನರ ನಡುವೆ ಬೆರೆತು, ತಮ್ಮ ಜೀವನ ಶೈಲಿಯ ಮೂಲಕ ಪ್ರೇರಣೆ ನೀಡುತ್ತಾ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮುಂತಾದ ಸಮಸ್ಯೆಗಳನ್ನು ಅರಿತುಕೊಂಡು ಅವುಗಳಿಗೆ ಪರಿಹಾರವನ್ನು ಕಾಣಬಯಸಿದರು. ಭಾರತೀಯರಿಗೆ ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯಲ್ಲಿ ಸಂಯಮ ಮತ್ತು ಸಹಾನುಭೂತಿ ಇರಬೇಕೆಂದು ಒತ್ತಾಯಿಸಿದರು. ತಾವೇ ರೂಢಿಯಲ್ಲಿ ತರುವುದರ ಮೂಲಕ ನಿದರ್ಶನವಾದರು. ತಮ್ಮ ಬಟ್ಟೆಗಳನ್ನು ತಾವೇ ತೊಳೆದುಕೊಳ್ಳುವುದು, ತಮ್ಮ ವಸ್ತ್ರಗಳನ್ನು ಸ್ವತಃ ನೇಯ್ಗೆಯಿಂದ ತಯಾರಿಸಿಕೊಳ್ಳುವುದು, ಮನೆಯ ಸುತ್ತಮುತ್ತಲಿನ ವಾತಾವರಣವನ್ನು ಶುದ್ಧವಾಗಿಡುವುದು, ತಮ್ಮ ಶೌಚಾಲಯವನ್ನು ಶುಚಿಗೊಳಿಸುವುದು, ಅಧಿಕ ನೀರು ವ್ಯರ್ಥವಾಗಿ ವ್ಯಯವಾಗದಂತೆ ಕಾಪಾಡುವುದು ಇನ್ನೂ ಮುಂತಾದ ಸಾಮಾಜಿಕ ಕಾರ್ಯಗಳ ಮುಖಾಂತರ ಜಾಗೃತಿಯನ್ನು ಮೂಡಿಸುವುದರೊಂದಿಗೆ ಅನೇಕ ಭಾರತೀಯರಿಗೆ ಪ್ರೇರೇಪಣೆಯಾಗಿದ್ದರು.

2014ರ ಅಕ್ಟೋಬರ್ 2 ರಿಂದ ಆರಂಭವಾದ 'ಸ್ವಚ್ಛ ಭಾರತ ಅಭಿಯಾನ'ವು ಇವರ ತತ್ವದ ಪ್ರೇರಣೆಯಾಗಿದೆ. 'ಭಾರತದ ಆತ್ಮ ಹಳ್ಳಿಗಳಲ್ಲಿ ನೆಲೆಸಿದೆ' ಗಾಂಧಿಯ ಹೇಳಿಕೆಯಂತೆ ಹಳ್ಳಿಗಳು ಅಭಿವೃದ್ಧಿಯಾದರೆ ದೇಶವೇ ವೃದ್ಧಿಯಾಗುವುದು. ಸ್ವಚ್ಛತೆಯ ಪರಿಕಲ್ಪನೆ ಹಿಂದಿನಿಂದಲೇ ಬಂದಿದೆಯಾದರೂ ಜನಜಾಗೃತಿಯ ಕೊರತೆಯಿಂದ ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಂಡಿದ್ದಿಲ್ಲ. 2014 ರಿಂದ ಬದಲಾವಣೆಯ ಪರ್ವದ ಪರಿಣಾಮದಿಂದ ಲಕ್ಷಾಂತರ ಜನರ ಕೈಜೋಡಣೆಯಿಂದ ಸಂಚಲನಾತ್ಮಕ ಆಂದೋಲನವಾಗಿ ರೂಪಗೊಂಡಿರುವುದು ಶ್ಲಾಘನೀಯ ಸಂಗತಿಯಾಗಿದೆ. 2017-18 ರ ಸಮೀಕ್ಷೆಯ ಪ್ರಕಾರ 130 ಕೋಟಿ ಭಾರತೀಯರಲ್ಲಿ 8.5 ಕೋಟಿ





Downloaded From:www.kpscvaani.com

ಕುಟುಂಬಗಳು ಪ್ರಥಮ ಬಾರಿಗೆ ಶೌಚಾಲಯದ ಬಳಕೆ ಮಾಡಿದ್ದರೆ, 40 ಕೋಟಿಗೂ ಹೆಚ್ಚು ಜನರು ಬಯಲಿನಲ್ಲಿ ಶೌಚವನ್ನು ತಿರಸ್ಕರಿಸಿದ್ದಾರೆ. ಕಡಿಮೆ ಅವಧಿಯಲ್ಲಿಯೇ ನೈರ್ಮಲ್ಯದ ವ್ಯಾಪ್ತಿ ಶೇ 39 ರಿಂದ ಶೇ 95 ಕ್ಕೆ ಹೆಚ್ಚಳವಾಗಿದೆ. 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಮತ್ತು 4.5 ಲಕ್ಷ ಗ್ರಾಮಗಳು ಬಯಲು ಶೌಚ ಮುಕ್ತವಾಗಿರುವುದು ಶ್ಲಾಘನೀಯ ಸಂಗತಿಯಾಗಿದೆ.

ಗಾಂಧೀಜಿಯವರು ಜೀವಮಾನ ಪೂರ್ತಿ ಬಡತನ ನಿವಾರಣೆ, ಅಸ್ಪೃಶ್ಯತೆಯ ನಿವಾರಣೆ, ಗ್ರಾಮೀಣಾಭಿವೃದ್ಧಿ, ಕೃಷಿ ಸಬಲೀಕರಣ, ಮಹಿಳಾ ಹಕ್ಕುಗಳನ್ನು ವೃದ್ಧಿಸುವ, ಆರ್ಥಿಕ ಸ್ವಾವಲಂಬನೆಯನ್ನು ಹೆಚ್ಚಿಸಲು ಹಮ್ಮಿಕೊಳ್ಳುವ ರಾಷ್ಟ್ರವ್ಯಾಪಿ ಹೋರಾಟಗಳ ನೇತೃತ್ವ ವಹಿಸಿಕೊಂಡಿದ್ದರು. ಇವರು ಸತ್ಯ, ಶಾಂತಿ, ಅಹಿಂಸೆ, ಸತ್ಯಾಗ್ರಹ ಮತ್ತು ಹೋರಾಟದ ಮೂಲಕವೇ ಜಗತ್ತನ್ನೇ ಗೆದ್ದವರು. "ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುತ್ತಲೇ ಹೋದರೆ ಇಡೀ ಪ್ರಪಂಚವೇ ನಾಶವಾಗುವುದು" ಎಂಬ ಸಂದೇಶದ ಮೂಲಕ ಶಾಂತಿಯ ಮಂತ್ರ ಪಠಿಸುತ್ತಿದ್ದರು. ಇವರ ಶಾಂತಿಯುತ ಹೋರಾಟವು ದಕ್ಷಿಣ ಆಫ್ರಿಕಾ ಮೊದಲಾದ ರಾಷ್ಟ್ರಗಳು ಸ್ಫೂರ್ತಿ ಪಡೆದು ಸ್ವಾತಂತ್ರ್ಯ ಪಡೆದವು. 4 ಖಂಡಗಳ 12 ದೇಶಗಳು ಶಾಂತಿಯುತ ಹೋರಾಟದ ಮುಖಾಂತರ ನ್ಯಾಯ ಪಡೆಯಲೆತ್ನಿಸಿದವು. ಇಂದಿಗೂ ಈ ದೇಶಗಳು ಗಾಂಧಿಯನ್ನು ಸ್ಮರಿಸುತ್ತವೆ.

ತಮ್ಮ ಕಾಲ್ನಡಿಗೆ ಮೂಲಕವೇ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವುದರೊಂದಿಗೆ ಸಾವಿರಾರು ಜನರಿಗೆ ಸ್ಫೂರ್ತಿಯ ಸೆಲೆಯಾಗಿದ್ದರು. ದಿನದಲ್ಲಿ ಸರಾಸರಿ 18 ಕಿಲೋ ಮೀಟರ್ ನಡೆಯುತ್ತಿದ್ದರಂತೆ. ಈ ಮಹಾತ್ಮನ ಜೀವಿತಾವಧಿಯ ಒಟ್ಟು ನಡಿಗೆಯು 2 ಬಾರಿ ವಿಶ್ವಪರ್ಯಟನೆಗೆ ಸಮವಾಗುತ್ತದೆಂದು ಹೇಳಲಾಗಿದೆ. ಇವರ ಹೆಸರಿನಲ್ಲಿ ಭಾರತದ 53 ಮಹಾನಗರಗಳಲ್ಲಿನ ಮುಖ್ಯರಸ್ತೆಗಳಿಗೆ ನಾಮಕರಣ ಮಾಡಲಾಗಿದೆ. ದೇಶದ ಲಕ್ಷಾಂತರ ಹಳ್ಳಿ-ಪಟ್ಟಣಗಳಲ್ಲಿನ ರಸ್ತೆಗಳಿಗೂ ಹೆಸರನ್ನಿಟ್ಟು ಸ್ಮರಿಸಲಾಗುತ್ತಿದೆ.

ಗಾಂಧಿ ಫುಟ್ಬಾಲ್ ಆಟದಲ್ಲಿ ಕುತೂಹಲವನ್ನು ಹೊಂದಿದ್ದರು. ದಕ್ಷಿಣ ಆಫ್ರಿಕಾದಲ್ಲಿ ಫುಟ್ಬಾಲ್ ಆಡುವ ಮೂಲಕ ವರ್ಣಭೇದ ನೀತಿಯ ವಿರುದ್ಧ ಹೋರಾಡಲು ಪ್ರಚಾರಕ್ಕೆ ಚಾಲನೆ ನೀಡಿದ್ದರು. ಹೀಗೆ ಅಹಿಂಸೆಯ ಹೋರಾಟದ ಮೂಲಕವೇ ಜಗತ್ಪ್ರಸಿದ್ಧರಾದ ಗಾಂಧೀಜಿ ವಿಶ್ವದ ಪ್ರಸಿದ್ಧ ವ್ಯಕ್ತಿಗಳಾದ ಲಿಯೋ ಟಾಲ್ಸ್ಟಾಯ್, ಅಲ್ಬರ್ಟ್ ಐನ್ಸ್ಟೈನ್, ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ಜೊತೆಗೆ ಪತ್ರವ್ಯವಹಾರವನ್ನು ಮಾಡಿ ನಿರಂತರ ಸಂಪರ್ಕದಲ್ಲಿದ್ದರು.

ವಿಶ್ವಗುರು ಬಸವಣ್ಣನವರ ಸಪ್ತಶೀಲ ತತ್ವಗಳಂತೆ ಗಾಂಧೀಜಿಯು ಕೂಡ "ತತ್ವ ರಹಿತ ರಾಜಕಾರಣ, ದುಡಿಮೆ ಇಲ್ಲದ ಸಂಪತ್ತು, ಆತ್ಮಸಾಕ್ಷಿ ಇಲ್ಲದ ಸಂತೋಷ, ಚಾರಿತ್ರ್ಯವಿಲ್ಲದ ಶಿಕ್ಷಣ, ನೀತಿ ಇಲ್ಲದ ವ್ಯಾಪಾರ, ಮಾನವೀಯತೆ ಇಲ್ಲದ ಜ್ಞಾನ ಹಾಗೂ ತ್ಯಾಗವಿಲ್ಲದ ಪೂಜೆ" ಎಂಬ ಸಪ್ತಪಾತಕಗಳಿಂದ ದೂರವಿರಬೇಕೆಂದು ಕರೆ ನೀಡಿದ್ದರು.

ಗಾಂಧೀಜಿಯು ಒಬ್ಬ ಸಮರ್ಥ ಬರಹಗಾರರಾಗಿದ್ದರೆನ್ನುವುದಕ್ಕೆ ಹಲವಾರು ಪತ್ರಿಕೆಗಳ ಸಂಪಾದಕರಾಗಿ ಜಾಗೃತಿ ಮೂಡಿಸಿದರು. ಅಂಥ ಪ್ರಮುಖ ಪತ್ರಿಕೆಗಳಾದ ದಕ್ಷಿಣ ಆಫ್ರಿಕಾದಲ್ಲಿದ್ದಾಗಲೇ 'ಇಂಡಿಯನ್ ಓಪೀನಿಯನ್' ಪತ್ರಿಕೆಯ ಸಂಪಾದಕರಾಗಿದ್ದರು. ಭಾರತಕ್ಕೆ ವಾಪಸಾದ ತರುವಾಯ ಗುಜರಾತಿ, ಹಿಂದಿ ಹಾಗೂ ಆಂಗ್ಲ ಭಾಷೆಯಲ್ಲಿ "ಹರಿಜನ, ಯಂಗ್ ಇಂಡಿಯಾ ಮತ್ತು ನವಜೀವನ್" ಪತ್ರಿಕೆಗಳ ಸಂಪಾದಕರಾಗಿದ್ದರು.

ಹೀಗೆ ತಮ್ಮ ಸರಳ ವ್ಯಕ್ತಿತ್ವದ ಮೂಲಕ ಪ್ರೇರಕ ಶಕ್ತಿಯಂತಿದ್ದ ಗಾಂಧೀಜಿಯವರು ತಮ್ಮ 78 ನೇ ವಯಸ್ಸಿನಲ್ಲಿ 1948 ರ ಜನವರಿ 30 ರಂದು ನಾಥೂರಾಮ್ ಗೋಡ್ಸೆಯಿಂದ ಹತ್ಯೆಗೊಳಗಾದರು. ಸುದ್ದಿ ದೇಶಾದ್ಯಂತ ಕಾಳ್ಗಿಚ್ಚಿನಂತೆ ಹರಡಿಕೊಂಡು ದೇಶದ ಮೂಲೆ ಮೂಲೆಯಿಂದ ಬಂದ ಜನಸಾಗರವು ದೆಹಲಿಯ ರಾಜಘಾಟ್‌ನಲ್ಲಿ ಸಂಗಮಗೊಂಡು, ಅಗಲಿದ ನಾಯಕನಿಗೆ ಅಂತಿಮ ವಿದಾಯ ಸಲ್ಲಿಸಿದರು. ಸುಮಾರು 8 ಕಿಲೋ ಮೀಟರ್ ವರೆಗೆ ಜನಸ್ತೋಮವಿತ್ತೆಂಬುದನ್ನು ಗಮನಿಸಿದರೆ ಅವರ ಮೇರು ವ್ಯಕ್ತಿತ್ವವನ್ನು ಕಾಣಬಹುದು.

ರವೀಂದ್ರನಾಥ ಠಾಗೋರ್ ಅವರು ಗಾಂಧೀಜಿಯನ್ನು 'ಮಹಾತ್ಮ'ನೆಂದು ಕರೆದರು. ಆದರೆ ಗಾಂಧೀಜಿಯು ಮಹಾತ್ಮ ಎನ್ನುವ ಪಟ್ಟವು ನನ್ನನ್ನು ದುಃಖಕ್ಕೀಡು ಮಾಡಿತೆಂದು ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ. ಸುಭಾಸಚಂದ್ರ ಬೋಸರು 'ರಾಷ್ಟ್ರಪಿತ' ಎಂದು ಕರೆದರು. ಇಂಥ ಮಹಾನ್ ಚೇತನದ ಕುರಿತು ವಿಜ್ಞಾನಿ ಆಲ್ಬರ್ಟ್ ಐನ್ಸ್ಟೈನರು" ರಕ್ತಮಾಂಸಗಳಿಂದ ತುಂಬಿದ ಇಂಥ ವ್ಯಕ್ತಿಯೊಬ್ಬ ಎಂದಾದರೂ ಈ ಭೂಮಿಯ ಮೇಲೆ ನಡೆದಾಡಿದ್ದ ಎನ್ನುವುದನ್ನು ಮುಂದಿನ ಪೀಳಿಗೆಗಳು ನಂಬುವುದು ಕಷ್ಟವಾಗುತ್ತದೆಂದು" ಉದ್ಗಾರದಿಂದ ಹೇಳಿದ್ದಾರೆ.

ಗಾಂಧೀಜಿಯ ಬಗ್ಗೆ ಅರಿಯಬೇಕಾದರೆ ಕೆಲವಾರು ಪ್ರಮುಖ ಕೃತಿಗಳನ್ನು ಓದಬೇಕಾಗುತ್ತದೆ. ಅವುಗಳಲ್ಲಿ ಆತ್ಮಕತೆಯಾದ "ಮೈ ಎಕ್ಸ್‌ಪೆರಿಮೆಂಟ್ಸ್ ವಿಥ್ ಟ್ರುಥ್", ಕೃಷಿ, ಶಿಕ್ಷಣ, ಹೈನುಗಾರಿಕೆ, ಗ್ರಾಮೋದ್ಧಾರದ 'ವಿಲೇಜ್ ಸ್ವರಾಜ್', ಸ್ವತಂತ್ರ ಭಾರತದ ಗಾಂಧಿಯ ಕನಸುಗಳಿರುವ 'ಇಂಡಿಯಾ ಆಫ್ ಮೈ ಡ್ರೀಮ್ಸ್' ಜನರ ಮೂಢನಂಬಿಕೆಗಳನ್ನು ತಿದ್ದುವ 'ಹಿಂದ್ ಸ್ವರಾಜ್', ಭಗವದ್ಗೀತಾದ ಒಳನೋಟಗಳನ್ನು ಒಳಗೊಂಡ "ಭಗವದ್ಗೀತಾ ಅಕಾರ್ಡಿಂಗ್ ಟು ಗಾಂಧಿ', ರೋಗವನ್ನು ಹೋಗಲಾಡಿಸಲು ಸ್ವಸ್ಥ ಸಮಾಜದ ಏಳ್ಗೆಗಾಗಿ ರೂಪಿಸಿದ ಮಾರ್ಗೋಪಾಯಗಳ ವಿಷಯ ಒಳಗೊಂಡ 'ಹೆಲ್ದಿ ಲಿವಿಂಗ್, ಸಂಸಾರ, ಶಿಕ್ಷಣ, ಸಮಾಜದ ಕುರಿತಾದ ಸ್ಫೂರ್ತಿದಾಯಕ ಮಾತುಗಳನ್ನೊಳಗೊಂಡ ' ದ ವಿಟ್ ಆಂಡ್ ವಿಸ್ಡಮ್ ಆಫ್ ಗಾಂಧಿ', ಗಾಂಧಿಯವರ ನಂಬಿಕೆ, ಚಿಂತನೆಗಳು, ಅಣುಬಾಂಬ್ ಬಗೆಗಿನ ಅಭಿಪ್ರಾಯಗಳನ್ನು ಹೊಂದಿದ 'ದ ವರ್ಡ್ಸ್ ಆಫ್ ಗಾಂಧಿ', ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಯನ್ನು ಎದುರಿಸಿ ಪ್ರಾರಂಭಿಸಿದ ಸತ್ಯಾಗ್ರಹದ ಮಾಹಿತಿ ಹೊಂದಿದ 'ಸತ್ಯಾಗ್ರಹ ಇನ್ ಸೌತ್ ಆಫ್ರಿಕಾ' ಇನ್ನು ಮುಂತಾದ ಗ್ರಂಥಗಳಲ್ಲಿ ಗಾಂಧೀಜಿಯ ತತ್ವ ಚಿಂತನೆಗಳನ್ನು ಅರಿತುಕೊಳ್ಳಲು ಸಹಕಾರಿಯಾಗಿವೆ ಎಂದು ಹೇಳಬಹುದು.

ಸರಳ ಸತ್ಯಗಳು ಸಾಮ್ರಾಜ್ಯಗಳಿಗಿಂತ ಹೆಚ್ಚು ಶಕ್ತಿಶಾಲಿಯಾಗಿರುತ್ತವೆ ಎಂದು ಹೇಳಿದ ಗಾಂಧಿಯ ಕುರಿತು ಎಷ್ಟು ಹೇಳಿದರೂ ಪೂರ್ಣತೆಯನ್ನು ಕಾಣುವುದಿಲ್ಲ. ಗಾಂಧೀಜಿಯವರ ಜೀವನ ಸಾಧನೆಗಳ ಬಗ್ಗೆ ಸಾಗರದಲ್ಲಿನ ಒಂದು ಹನಿಯನ್ನಷ್ಟೇ ತೆಗೆದುಕೊಂಡಿದೆ ಅಷ್ಟೇ. ಇಂಥ ಒಂದು ಮಹಾನ್ ಚೇತನ ನಮ್ಮ ನಾಡಿನಲ್ಲಿ ಜನಿಸಿರುವುದು ಪುಣ್ಯವೆಂದೇ ಭಾವಿಸಬೇಕು. ■


Downloaded From:www.kpscvaani.com

# ಪಟಾಕಿ ಹಚ್ಚುವ ವೇಳೆ ಇರಲಿ ಕಣ್ಣಿನ ಬಗ್ಗೆ ಎಚ್ಚರ

ಉಮೇಶ್ ಕೊಲಿಗೆರೆ



ದೀಪದಿಂದ ದೀಪ ಹಚ್ಚುವ ಮೂಲಕ ಬೆಳಕಿನ ಹಬ್ಬ ದೀಪಾವಳಿಯನ್ನು ಸಂಭ್ರಮಿಸುವುದು ಹೆಚ್ಚು ಸೂಕ್ತ ಎನ್ನುವುದು ಹಲವು ವರ್ಷಗಳಿಂದ ಕೇಳಿ ಬರುತ್ತಲೇ ಇವೆ. ಆದರೆ ಅದಕ್ಕೆ ಯಾರು ಹೆಚ್ಚು ಕಿವಿಗೊಡುತ್ತಿಲ್ಲ. ವಾಯು ಮತ್ತು ಶಬ್ದ ಮಾಲಿನ್ಯದ ಮೂಲಕ ಪರಿಸರವನ್ನು ಹಾಳುಮಾಡುವ, ಪ್ರಾಣಿ ಪಕ್ಷಿಗಳಿಗೆ ಹಾನಿ ಮಾಡುವ, ಹಿರಿಯರು ಮತ್ತು ಮಕ್ಕಳನ್ನು ಅಪಾಯಕ್ಕೆ ಸಿಲುಕಿಸುವಂತಹ ಅಪಾಯಕಾರಿ ಪಟಾಕಿ ಸಿಡಿಸುವ ಪರಿಪಾಠ ಮುಂದುವರೆಯುತ್ತಲೇ ಇದೆ.

ಪ್ರತಿ ದೀಪಾವಳಿ ಸಂದರ್ಭದಲ್ಲಿಯೂ ಪಟಾಕಿ ಸಿಡಿಸುವ ವೇಳೆ ಬಹಳಷ್ಟು ಮಕ್ಕಳು ಕಣ್ಣಿಗೆ ಹಾನಿ ಮಾಡಿಕೊಳ್ಳುತ್ತಾರೆ. ಹಾಗಾಗಿ ದೀಪಾವಳಿಯಲ್ಲಿ ಪಟಾಕಿ ಸಿಡಿಸುವ ವೇಳೆ ಅನುಸರಿಸಬೇಕಾದ ಮುನ್ನೆಚ್ಚರಿಕೆಗಳು, ಒಂದು ವೇಳೆ ಅಪಘಾತಗಳು ಸಂಭವಿಸಿದಾಗ ಪಾಲಿಸಬೇಕಾದ ಎಚ್ಚರಿಕೆ ಕ್ರಮಗಳ ಬಗ್ಗೆ ಅರಿವು ಮೂಡಿಸಲು ಮಿಂಟೋ ಕಣ್ಣಾಸ್ಪತ್ರೆಯ ನಿರ್ದೇಶಕರಾದ ಡಾ.ಬಿ.ಎಲ್.ಸುಜಾತ ರಾಥೋಡ್ ಅವರೊಂದಿಗೆ ವಾರ್ತಾ ಜನಪದವು ಮಾತು-ಮಂಥನ ನಡೆಸಿದೆ.

**ದೀಪಾವಳಿಗೆ ಮಿಂಟೋ ಆಸ್ಪತ್ರೆಯ ತಯಾರಿ ಹೇಗಿದೆ ?**

ಪ್ರತಿ ವರ್ಷ ದೀಪಾವಳಿಯಲ್ಲೂ ಮಿಂಟೋ ಆಸ್ಪತ್ರೆ ತನ್ನ ಸಾಮಾಜಿಕ ಹೊಣೆಗಾರಿಕೆಯನ್ನು ನಿಭಾಯಿಸುತ್ತದೆ. ಕಳೆದ 10 ವರ್ಷದಿಂದ ದೀಪಾವಳಿ ಆಚರಣೆಯಲ್ಲಿ ಏನು ಮಾಡಬೇಕು, ಏನು ಮಾಡಬಾರದು ಎಂದು ಜಾಗೃತಿ ಮೂಡಿಸಲಾಗುತ್ತದೆ. ತುರ್ತು ಸಂದರ್ಭದಲ್ಲಿ ಕೆಲಸ ಮಾಡಲು ಆಸ್ಪತ್ರೆಯಲ್ಲಿ ದಿನದ 24 ಗಂಟೆಯಲ್ಲೂ ಸಿಬ್ಬಂದಿಗಳು, ವೈದ್ಯರು ಲಭ್ಯರಿರುತ್ತಾರೆ. ಎಲ್ಲಾ ಘಟಕಗಳು ಕೆಲಸ ನಿರ್ವಹಿಸುತ್ತವೆ. ರೋಗಿಗಳಿಗೆ ಉನ್ನತ ಗುಣಮಟ್ಟದ ಚಿಕಿತ್ಸೆ ನೀಡಲು ನಾವು ಸದಾ ಸಜ್ಜಾಗಿರುತ್ತೇವೆ. ದೀಪಾವಳಿಯ ಸಂದರ್ಭದಲ್ಲಂತೂ ರಜೆ ಪಡೆಯದೆ ಬದ್ಧತೆಯಿಂದ ಕೆಲಸ ಮಾಡುತ್ತೇವೆ.

**ದೀಪಾವಳಿಯಲ್ಲಿ ಪಟಾಕಿ ಅನಿವಾರ್ಯವೇ ?**

ದೀಪಾವಳಿ ಆಚರಣೆಗೆ ಐತಿಹಾಸಿಕ, ಧಾರ್ಮಿಕ ನಂಬಿಕೆಗಳಿವೆ. ಈ ಹಿಂದೆ ಜನ ಕಾಡಿನಲ್ಲಿ ವಾಸಿಸುವಾಗ ಕತ್ತಲಿನಲ್ಲಿ ಬರುವ  ಕೀಟಗಳನ್ನು ದೂರ ಸರಿಸಲು ದೀಪ ಹಚ್ಚುತ್ತಿದ್ದರು. ರಾಮಾಯಣದಲ್ಲಿ ಶ್ರೀರಾಮ ರಾವಣನ ಮೇಲೆ ಯುದ್ಧ ಜಯಿಸಿ ನಾಡಿಗೆ ಮರಳುವಾಗ ಅದ್ದೂರಿ ಸ್ವಾಗತಕ್ಕಾಗಿ, ವಿಜಯದ ಸಂಭ್ರಮಕ್ಕಾಗಿ ಮತ್ತು ದಾರಿಯಲ್ಲಿನ ಕತ್ತಲನ್ನು ತೊಲಗಿಸಲು ಉದ್ದಕ್ಕೂ ದೀಪ ಹಚ್ಚಲಾಗಿತ್ತು ಎಂದು ಓದಿದ್ದೇವೆ. ಈಗಿನ





Downloaded From:www.kpscvaani.com



ಕಾಲಘಟ್ಟದಲ್ಲಿ ದೀಪ ಹಚ್ಚುವ ಬದಲು ಪಟಾಕಿ ಸಿಡಿಸುವ ಆಚರಣೆ ಬೇಕಾ ಎಂಬ ಪ್ರಶ್ನೆ ಕಾಡುತ್ತಲೇ ಇದೆ. ನಾವು ವೈದ್ಯರಾಗಿ ಹೇಳುವುದಾದರೆ ಪಟಾಕಿಗಳನ್ನು ಬಳಸಲೇಬಾರದು. ಅದರಲ್ಲಿ ರಾಸಾಯನಿಕಗಳು ಹೆಚ್ಚಿರುತ್ತವೆ. ಪಟಾಕಿ ಸಿಡಿತದಿಂದ ಸಣ್ಣ ಪುಟ್ಟ ಗಾಯಗಳ ಜೊತೆಗೆ  ದೊಡ್ಡ ಮಟ್ಟದ ಗಾಯಗಳಾಗಬಹುದು. ಕೆಲವೊಮ್ಮೆ ಸಿಡಿಮದ್ದು ಸಿಡಿತದ ರಬಸಕ್ಕೆ ಕಣ್ಣುಗುಡ್ಡೆಯೇ ಹೊರಗೆ ಬಂದು ದೃಷ್ಟಿ ಕಳೆದುಕೊಂಡಿರುವ ಉದಾಹರಣೆಗಳು ಉಂಟು.

**ಯಾವ ಮಾದರಿಯ ಮುಂಜಾಗ್ರತೆ ಅಗತ್ಯ ?**

ನೇತ್ರ ವೈದ್ಯರಾಗಿ ನಮ್ಮ ಉದ್ದೇಶವೇ ತಮ ಸೋಮಾ ಜೋತಿರ್ಗಮಯ. ಮೊದಲಿಗೆ ಪಟಾಕಿ ಬಳಸಬೇಡಿ ಎಂಬುದು ನಮ್ಮ ಸಲಹೆ. ಪಟಾಕಿ ಹಚ್ಚದೆ ಇದ್ದರೆ ಅನಾವುತಗಳೇ ಇರುವುದಿಲ್ಲ. ಆದರೂ ಪಟಾಕಿ ಹಚ್ಚಲೇಬೇಕು ಎಂದಾದರೆ ಅಗತ್ಯ ರಕ್ಷಣಾತ್ಮಕ ಕ್ರಮಗಳನ್ನು ಅನುಸರಿಸಬೇಕಿದೆ. ಮಕ್ಕಳು ಹಿರಿಯರ ಉಪಸ್ಥಿತಿಯಲ್ಲಿ ಪಟಾಕಿ ಹಚ್ಚಬೇಕು, ದೊಡ್ಡವರು ತಮ್ಮ ಪಾಡಿಗೆ ತಾವು ಕೆಲಸ ಮಾಡುತ್ತಾ, ಮಕ್ಕಳ ಕೈಗೆ ಪಟಾಕಿಕೊಟ್ಟು ಕಳುಹಿಸಬಾರದು. ಅದರಲ್ಲೂ ಉತ್ತಮ ಗುಣಮಟ್ಟದ ಪಟಾಕಿಗಳನ್ನೇ ಬಳಕೆ ಮಾಡಬೇಕು, ಅದರಿಂದ ಅಪಾಯಗಳು ಕಡಿಮೆಯಾಗಬಹುದು. ತಯಾರಿಕಾ ಕಂಪನಿಗಳು ಸೂಚಿಸಿದ ಸುರಕ್ಷಿತ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು. ರಾಕೆಟ್ ನಂತಹ ಅಪಾಯಕಾರಿ ಸಿಡಿಮದ್ದುಗಳನ್ನು ಮನೆ ಮುಂದೆ ಹಚ್ಚಬಾರದು. ಹಾಗೆ ಮಾಡಿದರೆ ನೆರೆ ಮನೆಗೆ ಬಿದ್ದು ಸಮಸ್ಯೆ ಉಂಟು ಮಾಡಬಹುದು. ರಾಕೆಟ್‌ಗಳನ್ನು ಸರಿಯಾಗಿ ಮೇಲ್ಮುಖವಾಗಿಯೇ ಹಚ್ಚಬೇಕು, ಫ್ಲವರ್ ಪಾಟ್‌ಗಳನ್ನು ಅದಷ್ಟು ದೂರದಿಂದ ಅಂಟಿಸಬೇಕು, ಪಟಾಕಿ ಸಿಡಿಸಲು ಉದ್ದದ ಊದಬತ್ತಿ ಬಳಕೆ ಮಾಡಬೇಕು. ಕಂಪನಿಗಳು ತಿಳಿಸಿದ ಮಾದರಿಯಲ್ಲೇ ಮುನ್ನೆಚ್ಚರಿಕೆ ವಹಿಸಬೇಕು. ಮನೆ ಬಾಗಿಲಿನಲ್ಲಿ ಪಟಾಕಿ ಹಚ್ಚಬಾರದು. ಮನೆಯಲ್ಲಿರುವ ಹಿರಿಯರಿಗೆ ತೊಂದರೆಯಾಗುತ್ತದೆ. ವಿಶಾಲ ಹೊರ ಆವರಣದಲ್ಲಿ ಪಟಾಕಿ ಹಚ್ಚಬೇಕು. ಪಟಾಕಿಗಳಿಂದ ದೊಡ್ಡವರಿಗಿಂತ ಚಿಕ್ಕ ಮಕ್ಕಳಿಗೆ ಹೆಚ್ಚು ಅಪಾಯವಾಗುತ್ತಿದೆ. ಇನ್ನು ಟುಸ್ ಪಟಾಕಿಗಳನ್ನು ಗುಡ್ಡೆ ಹಾಕಿ ಬೆಂಕಿ ಹಚ್ಚಿದಾಗಲೂ ಅವು ಸಿಡಿದು ಗಾಯಗಳಾಗಿವೆ.

**ಪಟಾಕಿ ಸಮಸ್ಯೆಗೆ ಪರಿಹಾರವೇನು ?**

ವಿಶ್ವದ ಎಲ್ಲಾ ದೇಶಗಳಲ್ಲೂ ಸಂಭ್ರಮಾಚರಣೆಗೆ ಪಟಾಕಿ ಹಚ್ಚಬೇಕಾದರೆ ದೊಡ್ಡ ಮೈದಾನ ಗುರುತಿಸಿ ಅಲ್ಲಿ ಸಿಡಿಸುವ ಪದ್ಧತಿ ಜಾರಿಯಲ್ಲಿದೆ. ಬಯಲು ಮೈದಾನದಲ್ಲಿ ಯಾವುದೇ ಅಡಚಣೆಗಳು ಮತ್ತು ಸಮೀಪದಲ್ಲಿ ಜನ ಇರಬಾರದು ಎಂಬ ನಿಯಮ ಪಾಲನೆ ಮಾಡುತ್ತಾರೆ. ಅದೇ ರೀತಿ ಇಲ್ಲಿಯೂ ಮೈದಾನ ಗುರುತಿಸಬೇಕು. ಪಟಾಕಿ ಸಿಡಿಸಲು ಸೂಕ್ತ ಸಮಯ ನಿಗದಿ ಮಾಡಬೇಕು. ಆ ಜಾಗದಲ್ಲಿ ಎಲ್ಲರೂ ಸೇರಿ ಪಟಾಕಿ ಸಿಡಿಸಬೇಕು. ಪಟಾಕಿಗಳನ್ನು ಮೈದಾನಲ್ಲಿ ಮಾರಾಟ ಮಾಡುವುದಷ್ಟೆ ಅಲ್ಲ, ಅವುಗಳನ್ನು ಸಿಡಿಸಲು ಮೈದಾನವೇ ಸುರಕ್ಷಿತ. ಬಯಲಿನಲ್ಲಿ ಪಟಾಕಿ ಸಿಡಿಸಿದರೆ ಗಾಳಿ ಬೀಸಿ ಹೊಗೆ ಬೇಗ ಕರಗಲಿದ್ದು, ವಾಯು ಮಾಲಿನ್ಯತೆ ತಗ್ಗುವ ಜೊತೆಗೆ ಜನವಸತಿ ಪ್ರದೇಶಗಳಿಗೆ  ಶಬ್ದ ಮಾಲಿನ್ಯವಾಗುವುದಿಲ್ಲ. ಹಾಗೂ ಇದರಿಂದ ಮನೆಗಳ ಸಮೀಪ ಸಂಭವಿಸುವ ಅಪಾಯಗಳು ಕಡಿಮೆಯಾಗಲಿವೆ.

**ಪಟಾಕಿ ಸಿಡಿಸುವ ವೇಳೆ ಕಣ್ಣಿಗೆ ಹಾನಿಯಾದರೆ ಮೊದಲಿಗೆ ಏನು ಮಾಡಬೇಕು?**

ಪಟಾಕಿಯಿಂದ ಅಪಾಯವಾದಾಗ ಅತ್ಯಂತ ಎಚ್ಚರಿಕೆ ವಹಿಸಬೇಕು. ಕಣ್ಣಿನ ಭಾಗದಲ್ಲಾದ ಗಾಯವನ್ನು ಉಜ್ಜುವುದು ಅಥವಾ ನೀರು ಹಾಕುವುದನ್ನು ಮಾಡಬಾರದು. ಸ್ವಚ್ಛವಾದ ಹತ್ತಿಯ ಬಟ್ಟೆಯನ್ನು ಕಣ್ಣಿಗೆ ಅಡ್ಡವಾಗಿ ಹಿಡಿದು ಮರೆ ಮಾಡಬೇಕು. ಕಣ್ಣು ಉಜ್ಜುವುದರಿಂದ ಪಟಾಕಿಯಿಂದ ಸಿಡಿದ ರಾಸಾಯನಿಕದ ಅವಶೇಷಗಳು ಕಣ್ಣಿನ ಸೂಕ್ಷ್ಮ ಭಾಗಕ್ಕೆ ಧಕ್ಕೆಯುಂಟು ಮಾಡಿ, ಶಾಶ್ವತ ಅಂಧತ್ವ ಮಾಡುವ ಸಾಧ್ಯತೆಗಳಿರುತ್ತವೆ. ಅದಕ್ಕಾಗಿ ತಕ್ಷಣವೇ ಹತ್ತಿರದ ಕಣ್ಣಿನ ಆಸ್ಪತ್ರೆಯನ್ನು ಸಂಪರ್ಕಿಸುವುದು ಉತ್ತಮ.

ವರ್ಷದಿಂದ ವರ್ಷಕ್ಕೂ ಪಟಾಕಿ ಅನಾಹುತಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಪ್ರತಿವರ್ಷ ಮಿಂಟೋ ಆಸ್ಪತ್ರೆಗೆ ಕನಿಷ್ಠ 45 ಮಕ್ಕಳು ಗಾಯಗೊಂಡು ಬರುತ್ತಾರೆ. ಅವರಲ್ಲಿ ನಾಲ್ಕನೆ ಒಂದು ಭಾಗದಷ್ಟು ಮಕ್ಕಳಿಗೆ ದೃಷ್ಟಿ ಸಂಪೂರ್ಣ ಹೋಗುತ್ತದೆ. ಮಿಂಟೋ ಹೊರತು ಪಡಿಸಿ ಇತರ ಆಸ್ಪತ್ರೆಗಳಲ್ಲೂ ಸಾಕಷ್ಟು ಪ್ರಕರಣಗಳು ದಾಖಲಾಗುತ್ತವೆ. ದೀಪಾವಳಿ ಮತ್ತು ತುಳಸಿ ಹಬ್ಬದಲ್ಲಿ ಈ ಸಮಸ್ಯೆ ಸಾಮಾನ್ಯವಾಗಿದೆ. ಪ್ರತಿವರ್ಷ ನಾಲ್ಕೈದು ಮಂದಿ ದೃಷ್ಟಿ ಕಳೆದುಕೊಂಡು ಬಾಳನ್ನು ಕತ್ತಲು ಮಾಡಿಕೊಳ್ಳುವುದನ್ನು ಕಾಣುತ್ತಿದ್ದೇವೆ. ಕೋವಿಡ್ ಸಂದರ್ಭದಲ್ಲಿ ದುರಂತಗಳ ಪ್ರಮಾಣ ಒಂದಿಷ್ಟು ತಗ್ಗಿತ್ತಾದರೂ ಪೂರ್ಣ ತಗ್ಗಿರಲಿಲ್ಲ.





Downloaded From:www.kpscvaani.com



**ಮಿಂಟೋ ಆಸ್ಪತ್ರೆಯಲ್ಲಿ ಏನೆಲ್ಲಾ ಸೌಲಭ್ಯಗಳಿವೆ ?**

ಮಿಂಟೋ ಆಸ್ಪತ್ರೆ 125 ವರ್ಷ ಸೇವಾ ಪರಿಣಿತಿ ಪಡೆದಿದೆ. ಕೆಂಪು ಕಣ್ಣಿನ ಚಿಕಿತ್ಸೆಗಾಗಿ ಆರಂಭದಲ್ಲಿ ಶುರುವಾದ ಚಿಕ್ಕ ಆಸ್ಪತ್ರೆ ಇಂದು ಎಲ್ಲಾ ರೀತಿಯ ದುಬಾರಿ ಮತ್ತು ಅತ್ಯಾಧುನಿಕ ಚಿಕಿತ್ಸೆ ನೀಡುವ ವ್ಯವಸ್ಥೆಯನ್ನು ಹೊಂದಿದೆ. ಆಧುನಿಕ ಸಲಕರಣಗಳಿವೆ. ಕಣ್ಣಿನ ಸಮಸ್ಯೆಗಳಿಗೆ ಅಗತ್ಯ ಎನಿಸುವ ಯಾವ ಚಿಕಿತ್ಸೆಯೂ ಇಲ್ಲಿ ಇಲ್ಲ ಎನ್ನುವಂತಿಲ್ಲ. ಆ ರೀತಿ ಆಸ್ಪತ್ರೆ ಸಸಜ್ಜಿತವಾಗಿದೆ. ಲೋ ವಿಷನ್ ಡಿವೈಸಸ್, ರಿಯಾಬಿಲೇಟೇಷನ್ ಸಿಸ್ಟಮ್ಸ್, ಹೈಯರ್ ಎಂಡ್ ಲಾಸಿಕ್ ಸರ್ಜರಿ ಸೇರಿ ಎಲ್ಲ ರೀತಿಯ ಸೌಲಭ್ಯಗಳು ಇಲ್ಲಿ ರಿಯಾಯಿತಿ ದರದಲ್ಲಿ ರೋಗಿಗಳಿಗೆ ದೊರೆಯುತ್ತವೆ. ದೀಪಾವಳಿ ಸಂದರ್ಭದಲ್ಲಿ ವೈದ್ಯರಿಂದ ಡಿ ಗ್ರೂಪ್ ವರೆಗೂ ಎಲ್ಲರೂ ರಜೆ ಪಡೆಯದೆ ಸೇವೆಗೆ ನಿಯೋಜನೆ ಗೊಂಡಿರುತ್ತಾರೆ. ರೆಟಿನಾ ಸ್ಕ್ಯಾನಿಂಗ್ ತಪಾಸಣಾ ಕೇಂದ್ರಗಳು ತೆರೆದಿರುತ್ತವೆ. ಶಸ್ತ್ರ ಚಿಕಿತ್ಸೆಗೆ ವೈದ್ಯರು, ದಾದಿಯರು ಸಜ್ಜಾಗಿರುತ್ತಾರೆ. ಮಿಂಟೋ ಕಣ್ಣಿನ ಆಸ್ಪತ್ರೆ ದೀಪಾವಳಿ ವಾರದಲ್ಲಿ ದಿನ ಪೂರ್ತಿ ಕೆಲಸ ಮಾಡುತ್ತದೆ.

**ಹಸಿರು ಪಟಾಕಿಗಳು ಸುರಕ್ಷಿತವೇ?**

ಪಟಾಕಿಯಿಂದಾಗಿ ಗಾಯಗೊಂಡವರಿಗೆ ನಮ್ಮ ಪರಿಣಿತಿಯಲ್ಲಿ ಚಿಕಿತ್ಸೆ ಕೊಡುವುದು ಒಂದು ಭಾಗವಾದರೆ, ಸಾಮಾಜಿಕ ಹೊಣೆಗಾರಿಕೆಯಿಂದ ಜಾಗೃತಿಗೆ ಆದ್ಯತೆ ನೀಡುವುದು ಮತ್ತೊಂದು ಕರ್ತವ್ಯವಾಗಿದೆ. ಪಟಾಕಿಯಿಂದ ತೊಂದರೆಯಾಗಬಾರದು ಎಂದು ಪ್ರತಿವರ್ಷವೂ ಸಾಧ್ಯವಾದ ಮಟ್ಟಿಗೆ ಜಾಗೃತಿ ಮೂಡಿಸುತ್ತಲೇ ಇದ್ದೇವೆ. ಆದರೂ ದುರಂತಗಳ ಪ್ರಮಾಣ ಕಡಿಮೆಯಾಗಿಲ್ಲ. ಈಗ ಲಭ್ಯ ಇರುವ ಹಸಿರು ಪಟಾಕಿಗಳು ಪೂರ್ಣವಾಗಿ ರಾಸಾಯನಿಕ ಮುಕ್ತವಲ್ಲ. ಬೆಳಕು ಬರಲು ರಾಸಾಯನಿಕ ಬಳಸಿಯೇ ಪಟಾಕಿ ತಯಾರಿಸಲಾಗುತ್ತದೆ. ಹಾಗಾಗಿ ಶೇ.100ರಷ್ಟು ಯಾವ ಪಟಾಕಿಯೂ ಸುರಕ್ಷಿತವಲ್ಲ. ಕೆಮಿಕಲ್ ರಿಯಾಕ್ಷನ್ ಆಗಿಯೇ ಬೆಳಕು ಬರಬೇಕು. ಅದರಿಂದ ಹೊಗೆ ಸೃಷ್ಟಿಯಾಗುವುದು ಸಾಮಾನ್ಯ. ಆದರೆ ಅಪಾಯಕಾರಿ ರಾಸಾಯನಿಕ ಸಾಮಾನ್ಯ ಪಟಾಕಿಗಳಿಂತ ಹಸಿರು ಪಟಾಕಿಗಳಲ್ಲಿ ಶೇ.50ರಷ್ಟು ಕಡಿಮೆ ಇರಲಿದೆ.

**ಪಟಾಕಿ ನಿಷೇಧದ ಕುರಿತು ನಿಮ್ಮ ಅಭಿಪ್ರಾಯವೇನು?**

ಸಾಮಾಜಿಕ ಜಾಗೃತಿ ಜೊತೆಗೆ ಪಟಾಕಿ ನಿಷೇಧಿಸುವ ಸಮರ್ಪಕ ಕಾನೂನು ಅಗತ್ಯವಿದೆ. ದೆಹಲಿಯಲ್ಲಿ ಈಗಾಗಲೇ ಪಟಾಕಿ ನಿಷೇಧಿಸಲಾಗಿದೆ. ದೀಪದಿಂದ ದೀಪ ನಾಂದಿಯಾಗಬೇಕೆ ಹೊರತು,

ಪಟಾಕಿ ಸಿಡಿಸಲು ಹೋಗಿ ಬಾಳು ಕತ್ತಲು ಮಾಡಿಕೊಳ್ಳಬಾರದು. ಚಿಕಿತ್ಸೆಗಿಂತ ಜಾಗೃತಿ ಉತ್ತಮ ಎಂಬ ಆಶಯದೊಂದಿಗೆ ಸಂಪೂರ್ಣವಾಗಿ ಪಟಾಕಿ ನಿಷೇಧಿಸಬೇಕು ಎಂಬ ಆಶಯ ನಮ್ಮದು. ಪಟಾಕಿಯಿಂದ ಯಾವ ಉಪಯೋಗವಂತೂ ಇಲ್ಲ. ಈ ನಿರ್ಧಾರ ಜಾರಿಯಾದರೆ ಅದೆಷ್ಟೋ ಮಕ್ಕಳ ಬಾಳಿನಲ್ಲಿ ಬೆಳಕು ಉಳಿಯಲಿದೆ. ಪಟಾಕಿಗಳಿಂದ ಮನುಷ್ಯರಿಗಷ್ಟೆ ಅಲ್ಲ, ಪ್ರಾಣಿ ಪಕ್ಷಿಗಳಿಗೂ ತೊಂದರೆಯಾಗುತ್ತದೆ. ನಾಯಿ, ಬೆಕ್ಕು ಸೇರಿದಂತೆ ಸಾಕು ಪ್ರಾಣಿಗಳು ಬೆದರುತ್ತವೆ. ಪಟಾಕಿ ಶಬ್ದಕ್ಕೆ ಪಕ್ಷಿಗಳು ಅದುರಿ ಹೋಗುತ್ತವೆ.

ಶಬ್ದ ಮಾಲಿನ್ಯ ರಕ್ತದೊತ್ತಡದ ಮೇಲೆ ಪರಣಾಮ ಬೀರಲಿದೆ, ಹಾಸಿಗೆ ಹಿಡಿದ ಹಿರಿಯರಿಗೆ ಇದು ಗಂಭೀರ ಸಮಸ್ಯೆ ಉಂಟು ಮಾಡಬಹುದು. ವಾಯು ಮಾಲಿನ್ಯ ಅಸ್ತಮ ರೋಗಿಗಳಿಗೆ ಪ್ರಾಣ ಸಂಕಟ ತಂದಿಡಲಿದೆ. ತಂತ್ರಜ್ಞಾನ ಅಭಿವೃದ್ಧಿಯಾದಂತೆ ದೊಡ್ಡದೊಡ್ಡ ಪಟಾಕಿಗಳು, ಬಾಂಬ್‌ಗಳು ತಯಾರಾಗುತ್ತಿವೆಯೇ ಹೊರತು, ಅಪಾಯಕಾರಿಯಲ್ಲದ ಪಟಾಕಿಗಳು ತಯಾರಾಗುತ್ತಿಲ್ಲ.

**ಅಪಾಯಕಾರಿ ಎನಿಸಿದರೂ ಜನ ಎಚ್ಚೆತ್ತು ಕೊಳ್ಳದಿರುವುದು ಏಕೆ ?**

ಸಮಾಜದಲ್ಲಿ ಮತ್ತಷ್ಟು ಜಾಗೃತಿಯ ಅಗತ್ಯವಿದೆ. ಮಿಂಟೋ ಆಸ್ಪತ್ರೆ ವೈದ್ಯರು ಮತ್ತು ಸಿಬ್ಬಂದಿಗಳು ಸುತ್ತಮುತ್ತ ಶಾಲೆಗಳಿಗೆ ಭೇಟಿ ನೀಡಿ ಪಟಾಕಿ ಬಳಕೆ ಮಾಡದಂತೆ ಜಾಗೃತಿ ಮೂಡಿಸುತ್ತಾರೆ. ಪಟಾಕಿಯನ್ನು ತಯಾರಿಸಲು ಮಕ್ಕಳನ್ನು ಬಳಸುವ ವರದಿಗಳಿವೆ. ಹಾಗಾಗಿ ಪಟಾಕಿ ಖರೀದಿ ನಿಲ್ಲಿಸಿದರೆ, ಮಕ್ಕಳನ್ನು ಬಾಲ ಕಾರ್ಮಿಕ ಪದ್ಧತಿಯಿಂದ ಹೊರ ತರಬಹುದು. ಶಿಕ್ಷಣ ಇಲಾಖೆ ಪ್ರತ್ಯೇಕವಾದ ಪಠ್ಯವನ್ನು ಸಿದ್ಧಪಡಿಸಿ ಪ್ರತಿ ಶಾಲೆಯಲ್ಲೂ ಶಿಕ್ಷಕರ ಮೂಲಕ ಮಕ್ಕಳಲ್ಲಿ ಜಾಗೃತಿ ಮೂಡಿಸಿ, ಪಟಾಕಿ ಬೇಡ ಎಂಬ ವಾತಾವರಣ ಸೃಷ್ಟಿಸಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟವರು ಗಮನ ಹರಿಸಲಿದ್ದಾರೆ. ಪಟಾಕಿ ನಿಷೇಧದಂತಹ ಕಾನೂನಿನ ಬಲ ದೊರೆತರೆ ಮತ್ತಷ್ಟು ಅನುಕೂಲವಾಗಲಿದೆ.

ದೇಹದಲ್ಲಿ ಕಣ್ಣು ಅತ್ಯಂತ ಸೂಕ್ಷ್ಮ ಹಾಗೂ ಮಹತ್ವದ ಅಂಗ. ದೃಷ್ಟಿ ನಷ್ಟವಾದರೆ ಬದುಕು ಸುಲಭವಾಗಿರಲು ಸಾಧ್ಯವಿಲ್ಲ. ಅದಕ್ಕಾಗಿ ಮಿಂಟೋ ಆಸ್ಪತ್ರೆ ನೇತ್ರದಾನದ ಬಗ್ಗೆ ಹೆಚ್ಚು ಜಾಗೃತಿ ಮೂಡಿಸುತ್ತದೆ. ಕೋವಿಡ್ ಸಮಯದಲ್ಲಿ ನೇತ್ರದಾನ ಮಾಡಿದವರ ಕಣ್ಣುಗಳನ್ನು ಸಂಗ್ರಹ ಮಾಡಲು ಕಷ್ಟವಾಯಿತು. ಕೋವಿಡ್‌ನ ಮೊದಲ ಹಾಗೂ ಎರಡನೇ ಹಂತದಲ್ಲಿ ಕಣ್ಣಿನಿಂದಲೂ ಸೋಂಕು ಹರಡುವುದು ಸಾಬೀತಾಗಿತ್ತು. ಎರಡನೇ ಹಂತದಲ್ಲಿ ಚಿಕಿತ್ಸೆಗೆ ಒಳಗಾದ ರೋಗಿಗಳಿಗೆ ಮ್ಯೂಕ್ರೋಮೈಸಿಸ್ ಸೋಂಕು ಕಾಣಿಸಿಕೊಂಡಿದ್ದರಿಂದ ಬ್ಲಾಕ್ ಫಂಗಸ್ ಕಣ್ಣಿನ ಭಾಗಕ್ಕೆ ಹರಡುತ್ತಿದ್ದಂತೆ ಮಿದುಳಿಗೆ ತಲುಪುವ ಮೊದಲು ಕಣ್ಣನ್ನೇ ಸಂಪೂರ್ಣ ತೆಗೆಯುವುದು ಅನಿವಾರ್ಯವಾಗಿತ್ತು. ಆದರೆ ಪಟಾಕಿ ಸ್ವಯಂಕೃತ ಅಪರಾಧ. ಪಟಾಕಿ ಇಲ್ಲದೆ ದೀಪಾವಳಿ ಆಚರಣೆ ಮಾಡುವ ಮೂಲಕ ಅಮೂಲ್ಯ ಕಣ್ಣುಗಳಿಗೆ ಹಾನಿಯಾಗದಂತೆ ನೋಡಿಕೊಳ್ಳುವುದೇ ಕ್ಷೇಮ ಎಂಬುದು ವೈದ್ಯರ ಸಲಹೆ. ■



Downloaded From:www.kpscvaani.com




## ರಾಯಚೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಮೈಳೈಸಿದ

# ಸಿರಿಧಾನ್ಯ ಮೇಳ

● ರಮೇಶ್ ಜಾಲಹಳ್ಳಿ

**ಸಿರಿಧಾನ್ಯದ ಕೃಷಿಗೆ ಉತ್ತೇಜನ ನೀಡುವುದರ ಜೊತೆಗೆ ಜನರಿಗೆ ಆಹಾರದಲ್ಲಿ ಸಿರಿಧಾನ್ಯ ಬಳಸುವುದರಿಂದ ಆಗುವ ಪ್ರಯೋಜನವನ್ನು ಮನದಟ್ಟು ಮಾಡುವಲ್ಲಿ ಯಶಸ್ವಿಯಾದ ಸಿರಿಧಾನ್ಯ ಮೇಳ.**

ಸಿರಿಧಾನ್ಯದ ಮಹತ್ವ ಮತ್ತು ಈ ಧಾನ್ಯಗಳ ಆಹಾರದಲ್ಲಿರುವ ಪೌಷ್ಟಿಕಾಂಶಗಳ ಬಗ್ಗೆ ಜನರಿಗೆ ಅರಿವು ಮೂಡಿಸಲು ಹಾಗೂ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಸಿರಿಧಾನ್ಯ ಕೃಷಿಗೆ ಪುನರುಜ್ಜೀವನ ಕೈಗೊಳ್ಳಲು ರಾಯಚೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯ ಹಾಗೂ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್) ಅವರ ಸಂಯುಕ್ತಾಶ್ರಯದಲ್ಲಿ ಸಿರಿಧಾನ್ಯ ಸಮಾವೇಶ ಹಾಗೂ ಅಂತಾರಾಷ್ಟ್ರೀಯ ಸಿರಿಧಾನ್ಯ ಮೇಳವನ್ನು ಆಯೋಜಿಸಲಾಗಿತ್ತು.

ಸಿರಿಧಾನ್ಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ದೃಷ್ಟಿಯಿಂದ ಮೇಳವನ್ನು ಆಯೋಜಿಸಲಾಗಿದ್ದು, ಮೇಳದಲ್ಲಿ ಏಕದಳ ಧಾನ್ಯಗಳಾದ ನವಣೆ, ಹಾರಕ, ಊದಲು, ಸಾಮೆ, ಕೊರಲೆ, ಬರಗು, ರಾಗಿ, ಸಜ್ಜೆ, ಜೋಳ ಮೊದಲಾದ ಸಿರಿಧಾನ್ಯಗಳನ್ನು ಮತ್ತು ಅದರಿಂದ ಮಾಡಿದ ಆಹಾರ ಪ್ರದರ್ಶನ, ಪ್ರಾತ್ಯಕ್ಷಿಕೆ ಜೊತೆಗೆ ಸಿರಿಧಾನ್ಯ ಖಾದ್ಯ ಸವಿಯಲು ಕೂಡ ವ್ಯವಸ್ಥೆ ಮಾಡಲಾಗಿತ್ತು.

ಭಾರತದ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ರಾಯಚೂರಿನಲ್ಲಿ ಅಂತಾರಾಷ್ಟ್ರೀಯ ಸಿರಿಧಾನ್ಯ ಮೇಳವನ್ನು ಹಮ್ಮಿಕೊಳ್ಳಲಾಗಿದ್ದು, ಮೇಳದಲ್ಲಿ ಸುಮಾರು 70ಕ್ಕೂ ಹೆಚ್ಚು ಸಂಸ್ಥೆಗಳ ಮೂಲಕ 56 ಸ್ಟಾಲ್‌ಗಳಲ್ಲಿ ವಿವಿಧ ಬಗೆಯ ದವಸ, ಧಾನ್ಯಗಳು ಮತ್ತು ಉತ್ಪಾದನಾ ವಸ್ತುಗಳನ್ನು ಪ್ರದರ್ಶನ ಮಾಡಲಾಯಿತು.

**ಸಿರಿಧಾನ್ಯಗಳಿಂದ ಪೋಷಕಾಂಶ ಅಧಿಕ:** ಹೌದು, ಸಿರಿಧಾನ್ಯಗಳಲ್ಲಿ ಬಹಳಷ್ಟು ಹೆಚ್ಚಿನ ಪ್ರಮಾಣದ ಪೌಷ್ಟಿಕ ಸತ್ವಗಳಾದ ಮೆಗ್ನೀಷಿಯಂ, ತಾಮ್ರ, ಪಾಸ್ಪರಸ್ ಮತ್ತು



Downloaded From:www.kpscvaani.com

ಮ್ಯಾಂಗನೀಸ್ ಅಂಶಗಳು ಸೇರಿವೆ. ಆದರೆ ಸಿರಿಧಾನ್ಯಗಳಲ್ಲಿ ಯಾವುದೇ ಬಗೆಯ ಗ್ಲುಟೆನ್ ಅಂಶ ಮತ್ತು ಆಮ್ಲದ ಅಂಶ ಇರುವುದಿಲ್ಲ. ಒಬ್ಬ ಮನುಷ್ಯ ಆರೋಗ್ಯವಾಗಿ ಜೀವನ ಮಾಡುವುದಕ್ಕೆ ಇದಕ್ಕಿಂತ ಬೇರೆ ವಿಷಯ ಬೇಕೇ? ಆಹಾರದ ಈ ಅಂಶಗಳು ಮನುಷ್ಯನ ಆರೋಗ್ಯವನ್ನು ಸಮತೋಲನ ರೀತಿಯಲ್ಲಿ ಕಾಪಾಡುವುದರಿಂದ ಹೃದಯದ ಸಮಸ್ಯೆಗಳಾಗಲೀ ಅಥವಾ ಬೇರೆ ಇನ್ನಾವುದೇ ಮಾರಣಾಂತಿಕ ಕಾಯಿಲೆಗಳಾಗಲೀ ಕಾಡುವುದಿಲ್ಲ. ನಾವು ಪ್ರತಿ ದಿನ ಸೇವಿಸುವ ಆಹಾರ ಪದಾರ್ಥಗಳಿಗೆ ಹೋಲಿಸಿದರೆ ಸಿರಿಧಾನ್ಯಗಳಲ್ಲಿ ಸಿಗುವ ಪೌಷ್ಟಿಕಾಂಶಗಳ ಲಾಭವೇ ಹೆಚ್ಚು.

**ಸಿರಿಧಾನ್ಯಗಳಿಂದ ರೋಗ ನಿರೋಧಕ ಶಕ್ತಿ ಹೆಚ್ಚಳ:** ಮನುಷ್ಯನಿಗೆ ರೋಗ ನಿರೋಧಕ ಶಕ್ತಿ ಕಡಿಮೆಯಾದಷ್ಟು ಆತನ ಆರೋಗ್ಯ ಹದಗೆಡುತ್ತದೆ. ಆಗಾಗ ಅನೇಕ ಸಣ್ಣ ಪುಟ್ಟ ಮತ್ತು ಮಾರಕ ಕಾಯಿಲೆಗಳು ಆವರಿಸಿ ಮತ್ತೆ ಮತ್ತೆ ಆಸ್ಪತ್ರೆಗೆ ಹೋಗುವಂತೆ ಮಾಡುತ್ತವೆ. ಇದಕ್ಕೆ ಮುಖ್ಯ ಕಾರಣ ಮನುಷ್ಯನ ದೇಹದಲ್ಲಿ ಪ್ರೊಟೀನ್ ಅಂಶದ ಕೊರತೆ. ಆದರೆ ಸಿರಿಧಾನ್ಯಗಳ ನಿಯಮಿತ ಸೇವನೆಯಿಂದ ದೇಹಕ್ಕೆ ಬೇಕಾದ ಎಲ್ಲಾ ಬಗೆಯ ಅತ್ಯಗತ್ಯ ಪ್ರೊಟೀನ್ ಅಂಶಗಳು ದೊರಕುವುದರಿಂದ ಎಂತಹ ಕೆಟ್ಟ ಕಾಯಿಲೆಯ ವಿರುದ್ಧ ಬೇಕಾದರೂ ಹೋರಾಡುವಂತಹ ಶಕ್ತಿ ದೊರಕುತ್ತದೆ.

**ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಆಗುವ ಸಂಶೋಧನೆಗಳಿಗೆ ನಿಮ್ಮನ್ನು ಸೀಮಿತಗೊಳಿಸಬೇಡಿ. ರೈತರ ಹೊಲಗಳು ನಿಮ್ಮ ಸಂಶೋಧನಾ ಕೇಂದ್ರಗಳಾಗಬೇಕು. ನೈಜ ಪರಿಸ್ಥಿತಿಯಲ್ಲಿ ಬೆಳವಣಿಗೆಯಾಗಬೇಕು, ಮನಸ್ಥಿತಿ ಬದಲಾಗಬೇಕು. ಜನಸಂಖ್ಯೆ ದೊಡ್ಡದಿದೆ, ಅವಶ್ಯಕತೆಗಳು ದೊಡ್ಡದಿದೆ. ಭಾರತ ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನ ಪಾತ್ರ ನಿರ್ವಹಿಸುತ್ತಿದೆ. ಈ ಹಿನ್ನೆಲೆಯಲ್ಲಿ ಸಂಶೋಧನೆಗಳು ಆಗಬೇಕು. ಅದಕ್ಕೆ ಆರ್ ಅಂಡ್ ಡಿ ನೀತಿ ತರಲಾಗಿದೆ. ನಿಮ್ಮ ಪ್ರಯೋಗಾಲಯಕ್ಕೆ 15 ಕೋಟಿ ರೂ.ಗಳ ವಿಶೇಷ ಅನುದಾನ ಮಂಜೂರು ಮಾಡಲಾಗಿದೆ. ರೈತರಿಗೆ ಉಪಯೋಗವಾಗುವ ಸಂಶೋಧನೆ ಮಾಡಬೇಕು. ಸಿರಿಧಾನ್ಯ ವರ್ಷ ಸಿರಿಧಾನ್ಯ ಮಿಲೇನಿಯಂ ಆಗಬೇಕು. ಜನ ಬದಲಾಗುತ್ತಿದ್ದಾರೆ, ರೈತರು ಇವುಗಳನ್ನು ಉತ್ಪಾದಿಸಿ ಲಾಭ ಪಡೆಯುವಂತಾಗಬೇಕು.**

**ಬಸವರಾಜ ಎಸ್ ಬೊಮ್ಮಾಯಿ**
ಮುಖ್ಯಮಂತ್ರಿಗಳು





**ಸಿರಿಧಾನ್ಯಗಳ ಮೌಲ್ಯವರ್ಧನೆ:** ಸಿರಿಧಾನ್ಯಗಳಿಂದ ಮೌಲ್ಯವರ್ಧಿತ ಆಹಾರಗಳನ್ನು ತಯಾರಿಸಬಹುದು. ರಾಗಿಯಿಂದ ರಾಗಿ ಇಡ್ಲಿ, ರಾಗಿ ದೋಸಾ, ರಾಗಿ ಮಾಲ್ಟ್, ರಾಗಿ ಬಿಸ್ಕೆಟ್ ಹೀಗೆ ತರಾವರಿ ಖಾದ್ಯಗಳನ್ನು ತಯಾರಿಸಲಾಗುತ್ತದೆಯೋ ಅದೇ ರೀತಿ ಬೇರೆ ಸಿರಿಧಾನ್ಯಗಳಿಂದ ಅಂದರೆ ನವಣೆ, ಸಾವೆ, ಬರಗು ಇತ್ಯಾದಿಗಳಿಂದ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಬಹುದು. ಸಾಂಪ್ರದಾಯಿಕ ಆಹಾರಗಳಾದ ಹೋಳಿಗೆ, ಅನ್ನ, ಉಪ್ಪಿಟ್ಟು, ಬಿಸಿಬೇಳೆಬಾತ್, ದೋಸೆ, ಇಡ್ಲಿಯನ್ನು ತಯಾರಿಸಬಹುದು. ಅಲ್ಲದೆ ರೊಟ್ಟಿ, ಚಪಾತಿ, ಚಕ್ಕುಲಿ, ಉಂಡೆ ತಯಾರಿಕೆಯಲ್ಲೂ ಇವುಗಳನ್ನು ಬೆರೆಸಬಹುದು. ಅದೇ ರೀತಿ ಹಲವಾರು ಸಂಸ್ಕರಣಾ ವಿಧಾನಗಳಿಂದ ಅಂದರೆ ಪಾಲಿಶ್ ಮಾಡುವುದು, ಹಿಟ್ಟು ಮಾಡುವುದು, ಮೊಳಕೆ ಕಟ್ಟುವುದು, ಅರಳು ಹುರಿಯುವುದರಿಂದ ಉತ್ತಮ ಆಹಾರ ಪಡೆಯಬಹುದು. ಸಾಮೆ ಮತ್ತು ನವಣೆಯಲ್ಲಿ ಶೇ.8ರಷ್ಟು ನಾರಿನಂಶ ಇದೆ. ಹೀಗಾಗಿ ಹೆಚ್ಚು ತೂಕ ಇರುವವರಿಗೆ ಹಾಗೂ ಸಕ್ಕರೆ ರೋಗಿಗಳಿಗೆ ಇದರಿಂದ ತಯಾರಿಸಿದ ಆಹಾರವು ಹೆಚ್ಚು ಸೂಕ್ತವಾಗುತ್ತದೆ.

**ಸಿರಿಧಾನ್ಯ ಸಂಸ್ಕರಣೆ ಘಟಕಗಳಿಗೆ 10ಲಕ್ಷ ರೂ.ಗಳ ಪ್ರೋತ್ಸಾಹ ಧನ:** ಭಾರತ ದೇಶವು ಸಿರಿಧಾನ್ಯಗಳ ಮೂಲಕ ಇಡೀ ವಿಶ್ವದ ಗಮನ ಸೆಳೆಯುವ ಕಾರ್ಯ ಮಾಡಲು ಆರಂಭಿಸಿದೆ. ದೇಶದಲ್ಲಿ ಕರ್ನಾಟಕ ರಾಜ್ಯವು ಅತಿ ಹೆಚ್ಚು ಸಿರಿಧಾನ್ಯ ಬೆಳೆಯುವಲ್ಲಿ ಮುಂಚೂಣಿಯಲ್ಲಿದೆ. ರಾಜ್ಯದಲ್ಲಿ ಸಿರಿಧಾನ್ಯ ಬೆಳೆಯುವ ರೈತರಿಗೆ ಪ್ರತಿ ಹೆಕ್ಟೇರ್‌ಗೆ 10 ಸಾವಿರ ರೂ. ಸಹಾಯಧನ ಹಾಗೂ ಸಿರಿಧಾನ್ಯ ಸಂಸ್ಕರಣೆ ಘಟಕಗಳಿಗೆ ಗರಿಷ್ಠ 10 ಲಕ್ಷ ರೂ.ಗಳ ಪ್ರೋತ್ಸಾಹಧನ ನೀಡುವ ಮೂಲಕ ಸಿರಿಧಾನ್ಯ ಅಭಿಯಾನಕ್ಕೆ ಪ್ರಮುಖ ಕೊಡುಗೆ ನೀಡುತ್ತಿದೆ. ■



Downloaded From:www.kpscvaani.com



# ಅನ್ನದಾತರ ಆರ್ಥಿಕತೆಗೆ ಬಲ ನೀಡುತ್ತಿರುವ ಎರೆಹುಳು ತೊಟ್ಟಿ

**ಎರೆಹುಳು ಗೊಬ್ಬರ ಉತ್ಪಾದನೆಯಲ್ಲಿ ಇಡೀ ರಾಜ್ಯದಲ್ಲಿಯೇ ಉತ್ತಮ ಸಾಧನೆಗೈದಿರುವ ಬಿಸಿಲು ನಾಡು ಕೊಪ್ಪಳ ಜಿಲ್ಲೆ ರಾಜ್ಯದಲ್ಲಿಯೇ ಮೊದಲ ಸ್ಥಾನ ಪಡೆಯುವ ಮೂಲಕ ಗಮನ ಸೆಳೆದಿದೆ.**

ಶ್ರೀನಿವಾಸ ಚಿತ್ರಗಾರ್

ಅತಿಯಾದ ರಸಗೊಬ್ಬರ ಬಳಕೆಯಿಂದ ಇಳುವರಿ ಕಡಿಮೆಯಾಗುವುದಲ್ಲದೇ ಭೂಮಿ ಕೂಡ ತನ್ನ ಸಾರವನ್ನು ಕಳೆದುಕೊಂಡು ದಿನದಿಂದ ದಿನಕ್ಕೆ ಬರಡಾಗುತ್ತದೆ.

ಸಕಾಲಕ್ಕೆ ಮಳೆ ಬಂದರೂ, ಉತ್ತಮ ಬೀಜ ಬಳಸಿದರೂ ಇಳುವರಿಯೇ ದೊರೆಯುತ್ತಿಲ್ಲ ಎಂದು ಅನ್ನದಾತ ತಲೆ ಮೇಲೆ ಕೈ ಹೊತ್ತು ಕುಳಿತುಕೊಳ್ಳುವಂತಹ ಪರಿಸ್ಥಿತಿ ಇದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರಕ್ಕೆ ಪಣ ತೊಟ್ಟಿರುವ ಕೊಪ್ಪಳ ಜಿಲ್ಲಾ ಪಂಚಾಯಿತಿಯು ರೈತರಿಗೆ ಎರೆಹುಳು ತೊಟ್ಟಿ ನಿರ್ಮಾಣಕ್ಕೆ ಉತ್ತೇಜನ ನೀಡುತ್ತಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ರೈತ ಬಂಧು ಅಭಿಯಾನದಡಿ ಕೃಷಿ ಇಲಾಖೆಯ ಸಹಯೋಗದಲ್ಲಿ ಎರೆಹುಳು ತೊಟ್ಟಿ ನಿರ್ಮಿಸಿ ಕೊಡುವ ಮೂಲಕ ಅನ್ನದಾತನ ಕೈಗೆ ಬಲ ತುಂಬುವ ಕೆಲಸ ಮಾಡಲಾಗುತ್ತಿದೆ. ಎರೆಹುಳು ಗೊಬ್ಬರದಿಂದ ಕೃಷಿಯಲ್ಲಿ ಆಗುವ ಅನುಕೂಲಗಳ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸಲಾಗುತ್ತಿದ್ದು, ಪ್ರಸ್ತುತ ಎರೆಹುಳು ತೊಟ್ಟಿಯಲ್ಲಿ ಉತ್ಪಾದನೆಯಾಗುವ ಸಾವಯವ ಗೊಬ್ಬರವನ್ನು ಕೃಷಿಯಲ್ಲಿ ಬಳಸಿ, ರೈತರು ಮುನ್ನಲೆಗೆ ಬರುತ್ತಿದ್ದಾರೆ. ಈ ಸಾವಯವ ಗೊಬ್ಬರದಿಂದಾಗಿ ಬೆಳೆಗಳು


Downloaded From:www.kpscvaani.com



ನಳನಳಿಸುತ್ತಿದ್ದು, ಅನ್ನದಾತನ ಮೊಗದಲ್ಲಿ ನಗು ಅರಳಿದೆ.

ರಾಜ್ಯದಲ್ಲಿ 2021-22 ನೇ ಸಾಲಿನಲ್ಲಿ ಜಾರಿಗೊಂಡ ರೈತ ಬಂಧು ಅಭಿಯಾನದಲ್ಲಿ ನಿರ್ಮಾಣಗೊಂಡಿರುವ ಎರೆಹುಳು ತೊಟ್ಟಿ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲೆಯಲ್ಲಿ ಅತಿ ಹೆಚ್ಚು 4921 ಎರೆಹುಳು ತೊಟ್ಟಿಗಳ ನಿರ್ಮಾಣಗೊಂಡಿದ್ದು, ರಾಜ್ಯದಲ್ಲಿಯೇ ಕೊಪ್ಪಳ ಜಿಲ್ಲೆ ಮೊದಲ ಸ್ಥಾನದಲ್ಲಿದೆ. ಉಳಿದಂತೆ ಲಭ್ಯವಿರುವ ಅಂದಾಜು ಮಾಹಿತಿಯಂತೆ ರಾಯಚೂರು ಜಿಲ್ಲೆ-4300, ಬಾಗಲಕೋಟೆ-3200, ಬಳ್ಳಾರಿ-2400, ವಿಜಯನಗರ-2200, ಗದಗ-2200, ಧಾರವಾಡ-2300, ಕಲಬುರಗಿ-2200, ಯಾದಗಿರಿ-2100, ಬೀದರ್-2200 ಎರೆಹುಳು ತೊಟ್ಟಿ ನಿರ್ಮಾಣಗೊಂಡಿವೆ.

ಕೊಪ್ಪಳ ಜಿಲ್ಲೆಯ 7 ತಾಲ್ಲೂಕುಗಳಿಂದ ಒಟ್ಟು 4921 ಎರೆಹುಳು ತೊಟ್ಟಿ ನಿರ್ಮಾಣ ಮಾಡಲಾಗಿದೆ. ಜಿಲ್ಲೆಯಲ್ಲಿ ಗಂಗಾವತಿ ಮತ್ತು ಕಾರಟಗಿ ಬಹಳಷ್ಟು ನೀರಾವರಿ ಪ್ರದೇಶ ಹೊಂದಿದ್ದರೆ, ಕೊಪ್ಪಳ ತಾಲ್ಲೂಕು ಭಾಗಶಃ ನೀರಾವರಿ ಹಾಗೂ ಖುಷ್ಕಿ ಪ್ರದೇಶ ಹೊಂದಿದೆ. ಉಳಿದಂತೆ ಯಲಬುರ್ಗಾ, ಕುಕನೂರು, ಕುಷ್ಟಗಿ, ಕನಕಗಿರಿ ಒಣ ಬೇಸಾಯ ಪ್ರದೇಶವಾಗಿದೆ. ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಅಧಿಕಾರಿಗಳಲ್ಲದೆ ಗ್ರಾಮ ಮಟ್ಟದ ಅಧಿಕಾರಿಗಳು ರೈತರಿಗೆ ಸಕಾಲಕ್ಕೆ ಮಾಹಿತಿ ನೀಡಿ, ಎರೆಹುಳು ತೊಟ್ಟಿ ನಿರ್ಮಾಣ ಮಾಡಿಸಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಪ್ರಸ್ತುತ ಎರೆ ಹುಳು ತೊಟ್ಟಿ ನಿರ್ಮಾಣದಲ್ಲಿ ಜಿಲ್ಲೆಯ ಕುಷ್ಟಗಿ ತಾಲ್ಲೂಕು ಮುಂದಿದೆ. ಖುಷ್ಕಿ ಜಮೀನು ಪ್ರದೇಶವೇ ಹೆಚ್ಚಾಗಿರುವ ಕುಷ್ಟಗಿ ತಾಲ್ಲೂಕಿನಲ್ಲಿ 1904 ಎರೆಹುಳು ತೊಟ್ಟಿ ನಿರ್ಮಾಣ ಮಾಡಿಕೊಳ್ಳುವ ಮೂಲಕ ಗಮನ ಸೆಳೆದಿದೆ. ಉಳಿದಂತೆ ಗಂಗಾವತಿ- 532, ಕನಕಗಿರಿ- 384, ಕಾರಟಗಿ- 546, ಕೊಪ್ಪಳ- 850, ಕುಕನೂರು- 197, ಯಲಬುರ್ಗಾ ತಾಲ್ಲೂಕಿನ ರೈತರು 508 ಎರೆಹುಳು ತೊಟ್ಟಿ ನಿರ್ಮಾಣ ಮಾಡಿಕೊಂಡಿದ್ದಾರೆ.

ಗಂಗಾವತಿ ತಾಲ್ಲೂಕಿನ ಚಿಕ್ಕಜಂತಕಲ್ ಗ್ರಾಮದ ಮಹಾದೇವಿ ಎಂಬ ರೈತ ಮಹಿಳೆಯೊಬ್ಬರು ಓದಿದ್ದು ಹತ್ತನೇ ತರಗತಿಯಾದರೂ, ಸಾವಯವ ಕೃಷಿ ಬಗ್ಗೆ ಅಪಾರ ಒಲವು ಹೊಂದಿರುವ ಕಾರಣ ಸಾವಯವ ಕೃಷಿ ಬಗ್ಗೆ ಗ್ರಾಮದ ರೈತರಲ್ಲಿ ಜಾಗೃತಿ ಮೂಡಿಸುವ ಕಾಯಕದಲ್ಲಿ ತೊಡಗಿದ್ದಾರೆ. ಎರೆಹುಳು ತೊಟ್ಟಿ ನಿರ್ಮಿಸಿಕೊಂಡು ಕೈತುಂಬಾ ಆದಾಯಗಳಿಸುತ್ತಿದ್ದಾರೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ರೈತ ಬಂಧು ಅಭಿಯಾನದಡಿ ಎರೆಹುಳು ತೊಟ್ಟಿ ನಿರ್ಮಿಸಿಕೊಂಡಿರುವ ಮಹಾದೇವಿಯವರು, ಈಗಾಗಲೇ ಐದು ಕ್ವಿಂಟಾಲ್ ಗೊಬ್ಬರವನ್ನು ಹಾಗೂ 10 ಕೆಜಿ ಎರೆಹುಳುಗಳನ್ನು ಮಾರಾಟ ಮಾಡುವ ಮೂಲಕ 10 ಸಾವಿರಕ್ಕೂ ಹೆಚ್ಚು ಆದಾಯವನ್ನು ಪಡೆದಿದ್ದಾರೆ.

ಜೊತೆಗೆ ತಮ್ಮ ಐದು ಎಕರೆ ಜಮೀನಿನಲ್ಲಿ ಒಂದೂವರೆ ಎಕರೆಯಲ್ಲಿ ಎರೆಹುಳು ಗೊಬ್ಬರ ಬಳಸಿ ಭತ್ತ ಬೆಳೆದಿದ್ದು, ಅಧಿಕ ಇಳುವರಿ ಪಡೆದಿದ್ದಾರೆ. ತಮ್ಮ ಗ್ರಾಮದಲ್ಲಿಯೇ 10 ಮಹಿಳೆಯರು ಸೇರಿಕೊಂಡು ಸ್ವಸಹಾಯ ಸಂಘವನ್ನು ಕಟ್ಟಿಕೊಂಡಿದ್ದಾರೆ. ಕಳೆದ ಎರಡು ವರ್ಷಗಳಿಂದ ಸಾಮುದಾಯಿಕ ಎರೆಹುಳು ಘಟಕವನ್ನು ಮಾಡಿಕೊಂಡು ಏಳು ಕ್ವಿಂಟಾಲ್‌ಗೂ ಅಧಿಕ ಗೊಬ್ಬರ ಮಾರಾಟ ಮಾಡುವ ಮೂಲಕ ಉತ್ತಮ ಆದಾಯ ಗಳಿಸಿದ್ದಾರೆ. ಇದೀಗ ರೈತ ಬಂಧು ಅಭಿಯಾನದಡಿ ವೈಯಕ್ತಿಕವಾಗಿ ಎರೆಹುಳು ತೊಟ್ಟಿಗಳನ್ನು ನಿರ್ಮಿಸಿಕೊಂಡು ತಮ್ಮ ಆದಾಯ ದ್ವಿಗುಣಗೊಳಿಸಿಕೊಂಡಿದ್ದಾರೆ. ಎರೆ ಹುಳು ತೊಟ್ಟಿಯಿಂದ ಸಾಕಷ್ಟು ಅನುಕೂಲವಾಗಿದೆ. ರೈತರಲ್ಲಿಯೂ ಸಾವಯವ ಗೊಬ್ಬರದ ಪರಿಕಲ್ಪನೆ ಮೂಡುತ್ತಿರುವುರುದು ಒಳ್ಳೆಯ ಬೆಳವಣಿಗೆಯಾಗಿದೆ. ಬೆಳೆಗೆ ರಾಸಾಯನಿಕ ಗೊಬ್ಬರ ಬಳಸುತ್ತಿರುವವರೆಲ್ಲರೂ ಕೂಡ ಸಾವಯವ ಗೊಬ್ಬರ ಬಳಸಲು ಮುಂದಾದರೆ ಕೃಷಿ ಭೂಮಿಯ ಪ್ರದೇಶ ಹೆಚ್ಚಳವಾಗಲಿದ್ದು, ಭೂಮಿಯ ಫಲವತ್ತತೆ ಕಾಯ್ದುಕೊಳ್ಳುವ ಜೊತೆಗೆ, ರೈತರು ಉತ್ತಮ ಇಳುವರಿ ಪಡೆಯಲು ಸಾಧ್ಯವಾಗಲಿದೆ ಎನ್ನುತ್ತಾರೆ ರೈತ ಮಹಿಳೆ ಮಹಾದೇವಿ.

ಇನ್ನು ಸ್ವಸಹಾಯ ಸಂಘದ ಮೂಲಕ ದೇಶಿ ಭತ್ತದ ತಳಿಯನ್ನು ಪರಿಚಯಿಸುವ ಹಿನ್ನಲೆಯಲ್ಲಿ ಅವರು ಬೀಜಗಳ ಬ್ಯಾಂಕ್‌ವೊಂದನ್ನು ರಚಿಸಿ, 80 ಕ್ಕೂ ಹೆಚ್ಚು ತಳಿಯ ಬೀಜಗಳನ್ನು ಸಂಗ್ರಹಿಸಿದ್ದಾರೆ. ಹಾಗೆಯೇ ಇವರ ಮಾರ್ಗದರ್ಶನದಲ್ಲಿ ಹಲವು ರೈತರು ಎರೆ ಹುಳು ತೊಟ್ಟಿ ಮೂಲಕ ಬಾಳು ಬೆಳಗಿಸಿಕೊಂಡಿದ್ದಾರೆ.

ಜಿಲ್ಲೆಯ ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ಈಗಾಗಲೇ ಕೃಷಿ ಇಲಾಖೆಯಡಿ ರೈತರಿಗೆ ಎರೆಹುಳು ತೊಟ್ಟಿಗಳನ್ನು ನಿರ್ಮಿಸಿ ಕೊಡಲಾಗಿದ್ದು, ಇದರಿಂದ ಮಣ್ಣಿನ ಸತ್ವ ಹೆಚ್ಚಾಗಲಿದೆ. ರೈತರು ರಾಸಾಯನಿಕ ಗೊಬ್ಬರ ಬದಲಿಗೆ ಎರೆಹುಳು ಗೊಬ್ಬರ ಬಳಸುತ್ತಿದ್ದಾರೆ. ಎರೆಹುಳು ಗೊಬ್ಬರದಿಂದ ಮಣ್ಣಿನ ಫಲವತ್ತತೆ ಕಾಪಾಡಲು ಇದು ಪರಿಣಾಮಕಾರಿಯಾಗಲಿದೆ. ಹಾಗಾಗಿ ಕೊಪ್ಪಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಫೌಜಿಯಾ ತರನ್ನುಮ್ ಅವರು ಜಿಲ್ಲೆಯ ಪ್ರತಿಯೊಬ್ಬ ರೈತರು ಈ ರೀತಿ ಎರೆಹುಳು ತೊಟ್ಟಿಗಳನ್ನು ನಿರ್ಮಿಸಿಕೊಳ್ಳಬೇಕು ಎಂದು ಅಭಿಪ್ರಾಯ ಪಡುತ್ತಾರೆ. ■



Downloaded From:www.kpscvaani.com



# ಯುವ ಪೀಳಿಗೆಯ ಯಶಸ್ಸಿನ ಮೆಟ್ಟಿಲು ಜಿಟಿಟಿಸಿ

**ಯುವ ಜನರಿಗೆ ಉದ್ಯೋಗದ ಭರವಸೆ ನೀಡುತ್ತಿರುವ ಕೊಪ್ಪಳ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ**

ನಾಗೇಶ

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆ ಎಂದರೆ ತಕ್ಷಣ ನೆನಪಾಗುವುದು ಕೊಪ್ಪಳ ಜಿಲ್ಲೆ. ಆದರೆ ಈ ಜಿಲ್ಲೆಯಲ್ಲೊಂದು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು ಸದ್ದಿಲ್ಲದೆ ಯುವ ಜನರಿಗೆ ಉದ್ಯೋಗದ ಭರವಸೆ ನೀಡುವಂತಹ ಶಿಕ್ಷಣ ನೀಡುತ್ತಿದೆ. ಇದು ಬಡ ಮತ್ತು ಮಧ್ಯಮ ವರ್ಗದ ಎಸ್ಎಸ್ಎಲ್‌ಸಿ ಪೂರೈಸಿದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ಬಾಳಿಗೆ ಆಶಾಕಿರಣವಾಗಿದೆ. ಉನ್ನತ ಮಟ್ಟದ ತಾಂತ್ರಿಕ ತರಬೇತಿ ನೀಡಿ ಉದ್ಯೋಗ ಕಲ್ಪಸುವ ಉದ್ದೇಶ ಹೊಂದಿರುವ ಈ ಕೇಂದ್ರವು ಕೊಪ್ಪಳ ನಗರದಿಂದ ಕೇವಲ 2–3 ಕಿ.ಮೀ ಸಮೀಪದಲ್ಲಿರುವ ದದೇಗಲ್ ಗ್ರಾಮದಲ್ಲಿ ಸುಮಾರು 10 ಎಕರೆ ವಿಶಾಲ ಪ್ರದೇಶದಲ್ಲಿ ನಿರ್ಮಾಣಗೊಂಡಿದೆ.

ಈ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಅನುಭವಿ ಮತ್ತು ನುರಿತ 9 ಜನ ಬೋಧನಾ ಸಿಬ್ಬಂದಿಗಳು ಇರುವುದಲ್ಲದೆ, ಆಡಳಿತ ಮತ್ತು ತರಬೇತಿ ವಿಭಾಗ, ಕಾರ್ಯಗಾರ ವಿಭಾಗ, ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಸತಿ ಮತ್ತು ಕ್ಯಾಂಟಿನ್ ವ್ಯವಸ್ಥೆ, ಉನ್ನತ ದರ್ಜೆಯ ಯಂತ್ರೋಪಕರಣಗಳು ಮತ್ತು ಪ್ರಯೋಗಾಲಯದ ಸೌಲಭ್ಯಗಳಿವೆ.

ಕರ್ನಾಟಕ ಸರ್ಕಾರದ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು (ಕೆಎಸ್‌ಡಿಸಿ) ಅತ್ಯಾಧುನಿಕ ಸಂವಹನ ಕೌಶಲ್ಯ ಲ್ಯಾಬ್‌ನ್ನು ಕೊಪ್ಪಳದ ಈ ಜಿಟಿಟಿಸಿಯಲ್ಲಿ ತೆರೆದಿದ್ದು, ಈ ಭಾಗದ ಯುವಕ ಯುವತಿಯರಿಗೆ ಆಂಗ್ಲ ಭಾಷಾ ಸಂವಹನ ಕೌಶಲ್ಯ ತರಬೇತಿಯನ್ನು ನೀಡಲಾಗುತ್ತದೆ.

ಕೊಪ್ಪಳ ಜಿಟಿಟಿಸಿಯಲ್ಲಿ ಮೂರು ಮತ್ತು ಒಂದು ವರ್ಷದ ಅವಧಿಯ ಡಿಪ್ಲೋಮಾ ಇನ್ ಮೆಕ್ಯಾನಿಕ್, ಡಿಪ್ಲೋಮಾ ಇನ್ ಟೂಲ್



Downloaded From:www.kpscvaani.com





& ಡೈ ಮೇಕಿಂಗ್ ಕೋರ್ಸ್‌ಗಳು ಲಭ್ಯವಿದ್ದು, ಸದ್ಯ ಈ ಎರಡೂ ಕೋರ್ಸ್‌ನಲ್ಲಿ 120 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಕೇವಲ 20ನೇ ವಯಸ್ಸಿನಲ್ಲಿಯೇ ಉದ್ಯೋಗ ಪಡೆದು ಆರ್ಥಿಕವಾಗಿ ಸಬಲರಾಗಿ ತಮ್ಮ ಕುಟುಂಬ ನಿರ್ವಹಿಸಲು ಈ ಜಿಟಿಟಿಸಿ ಕೋರ್ಸ್‌ಗಳು ಸಹಕಾರಿಯಾಗಲಿವೆ.

ಇಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ಇಸ್ರೋ, ಡಿಆರ್‌ಡಿಓ, ಎಚ್‌ಎಎಲ್, ಎಚ್‌ಎಂಟಿ, ಬಿಎಚ್‌ಇಎಲ್, ಬಿಇಎಲ್ ಬಾಷ್, ಟೊಯೊಟಾ, ಏಕಸ್ ಇಂತಹ ದೊಡ್ಡ ದೊಡ್ಡ ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಜಿಟಿಟಿಸಿಗೆ ಹೆಮ್ಮೆಯ ಸಂಗತಿ. ಈ ಕೇಂದ್ರದಲ್ಲಿ ದೀರ್ಘಾವಧಿ ಕೋರ್ಸ್‌ಗಳು ಮಾತ್ರವಲ್ಲದೇ ಎಸ್‌ಎಸ್‌ಎಲ್‌ಸಿ, ಐಟಿಐ, ಡಿಪ್ಲೋಮಾ, ಇಂಜಿನಿಯರಿಂಗ್ ಉತ್ತೀರ್ಣರಾದ ಯುವಕ ಯುವತಿಯರು ಅಲ್ಪಾವಧಿ ಕೋರ್ಸ್‌ಗಳ ಮೂಲಕ ತರಬೇತಿ ಪಡೆದುಕೊಳ್ಳುವ ಮೂಲಕ ತಮ್ಮ ಉದ್ಯೋಗವನ್ನು ಉತ್ತಮ ಪಡಿಸಿಕೊಳ್ಳಬಹುದಾಗಿದೆ.




ಕರ್ನಾಟಕ ಸರ್ಕಾರ ಮತ್ತು ಡೆನ್ಮಾರ್ಕ್ ಸಹಯೋಗದೊಂದಿಗೆ 1972ರಲ್ಲಿ ಆರಂಭವಾದ ಈ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವು ಕೌಶಲಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತದೆ. ಪ್ರಸ್ತುತ ಕರ್ನಾಟಕ ರಾಜ್ಯದ ವಿವಿಧ ಪ್ರದೇಶಗಳಲ್ಲಿ 28 ಕೇಂದ್ರಗಳನ್ನು ಹೊಂದಿದ್ದು, ಈ ತರಬೇತಿ ಕೇಂದ್ರಗಳು ಕರ್ನಾಟಕದ ಸುಮಾರು ಒಂದು ಲಕ್ಷಕ್ಕೂ ಅಧಿಕ ಯುವಕ ಯುವತಿಯರಿಗೆ ಕೈಗಾರಿಕಾ ಸ್ನೇಹಿ ಕೌಶಲ್ಯಾಧಾರಿತ ತರಬೇತಿ ನೀಡಿ ಅವರನ್ನು ಉದ್ಯೋಗಿಗಳನ್ನಾಗಿ ಮತ್ತು ಉದ್ಯೋಗಧಾತರನ್ನಾಗಿ ಮಾಡಿವೆ.

ಈ ಜಿಟಿಟಿಸಿ ಕೇಂದ್ರವು ಇಸ್ರೋ, ಡಿಆರ್‌ಡಿಓ, ಎಚ್‌ಎಎಲ್, ಎಚ್‌ಎಂಟಿ, ಬಿಎಚ್‌ಇಎಲ್, ಬಿಇಎಲ್ ಬಾಷ್, ಟೊಯೊಟಾ ಇನ್ನೂ ಹಲವಾರು ಕೈಗಾರಿಕೆಗಳಿಗೆ ಬಿಡಿಭಾಗಗಳ ಪೂರೈಕೆ ಮತ್ತು ಉಪಗ್ರಹಗಳ ಕೆಲವು ಬಿಡಿ ಭಾಗಗಳನ್ನು ತಯಾರಿಸುತ್ತದೆ. ಯು.ಆರ್.ರಾವ್ ಉಪಗ್ರಹ ಕೇಂದ್ರಕ್ಕೆ ಉಪಗ್ರಹ ಬಿಡಿ ಭಾಗಗಳನ್ನು ತಯಾರಿಸಿ ಪೂರೈಕೆ ಮಾಡುತ್ತದೆ. ಫಿಲಿಪ್ಸ್, ಹಿಂದೂಸ್ಥಾನ ಮೋಟಾರ್ಸ್, ಬಾಷ್, ಬಜಾಜ್ ಕಂಪನಿಗಳಿಗೆ ಡೈ ಕಾಸ್ಟಿಂಗ್ ಬಿಡಿ ಭಾಗಗಳ ಪೂರೈಕೆ. ಎಚ್‌ಎಎಲ್‌ನ ಪ್ರಸಿದ್ಧ ತೇಜಸ್ ಯುದ್ಧ ವಿಮಾನದ ಬಿಡಿಭಾಗಗಳನ್ನು ತಯಾರಿಸುತ್ತದೆ. ಆಕಾಶದಲ್ಲಿ ಎರಡು ವಿಮಾನಗಳ ಮಧ್ಯೆ ಇಂಧನ ವರ್ಗಾಯಿಸುವ ಕಾರ್ಯವನ್ನು ಜಿಟಿಟಿಸಿ ಮಾಡುತ್ತದೆ. ಇಲ್ಲಿಯ ವಿದ್ಯಾರ್ಥಿಗಳು 2021ರ ಸ್ಕಿಲ್ ಇಂಡಿಯಾ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಸುಮಾರು 9 ಚಿನ್ನದ ಪದಕಗಳನ್ನು ಪಡೆದಿದ್ದಾರೆ. ಇದಲ್ಲದೇ ಪ್ರಸ್ತುತ ವರ್ಷ ಚೀನಾದ ಶಾಂಘೈನಲ್ಲಿ ನಡೆಯಲಿರುವ ವರ್ಲ್ಡ್ ಸ್ಕಿಲ್ಸ್‌ನಲ್ಲಿಯೂ ಸಹ ಜಿಟಿಟಿಸಿ ಸಂಸ್ಥೆಯ ವಿದ್ಯಾರ್ಥಿಗಳು ನಮ್ಮ ಭಾರತ ದೇಶವನ್ನು ಪ್ರತಿನಿಧಿಸಲಿದ್ದಾರೆ.

ಈ ಜಿಟಿಟಿಸಿಯ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಯಾದ ಮಹಮ್ಮದ್ ಅಬುರೆಹನ್ "ನಮ್ಮ ಜಿಟಿಟಿಸಿಯು ಎಲ್ಲಾ ತಾಂತ್ರಿಕ ವಿದ್ಯಾಸಂಸ್ಥೆಗಳಿಗಿಂತ ವಿಭಿನ್ನವಾಗಿದೆ. ನಾನು ಕೈಗಾರಿಕೆಗಳಲ್ಲಿ ಕಲಿಯುತ್ತಿರುವಂತೆ ಅನಿಸುತ್ತದೆ. ನಮ್ಮ ಸಂಸ್ಥೆಯ ಎಲ್ಲಾ ಶಿಕ್ಷಕರು ಅತ್ಯುತ್ತಮವಾಗಿ ತರಬೇತಿ ನೀಡುತ್ತಿದ್ದು, ನನಗೆ ಈ ಕಾಲೇಜಿನಲ್ಲಿ ತರಬೇತಿ ಪಡೆಯುತ್ತಿರುವುದಕ್ಕೆ ಬಹಳ ಖುಷಿಯಾಗುತ್ತಿದೆ" ಎಂದು ಹೇಳುತ್ತಾನೆ.

ಇಲ್ಲಿ ಪ್ರವೇಶ ಬಯಸುವ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಜಿಟಿಟಿಸಿ ಕೊಪ್ಪಳ ಸಂಸ್ಥೆಯ ಪ್ರಾಚಾರ್ಯರಾದ ಸುರೇಶ ರಾಥೋಡ್ ಅವರನ್ನು 9902556110 ಮೂಲಕ ಹಾಗೂ ಸಹಾಯಕ ವ್ಯವಸ್ಥಾಪಕರಾದ ವಿನೋದ ಕುಮಾರ ಪಾಟೀಲ್ ಅವರನ್ನು 8087764454 ಮೂಲಕ ಸಂಪರ್ಕಿಸಬಹುದಾಗಿದೆ.


Downloaded From:www.kpscvaani.com




## ಅರಣ್ಯ ಪ್ರದೇಶ ವಾಸಿಗರ ಸಂಚಾರಕ್ಕೆ

# ಜನವನ ಸೇತುವೆ ಸೇವೆ

**ಚಾಮರಾಜನಗರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವ ಜನರ ಸಂಚಾರ ಸಮಸ್ಯೆ ಪರಿಹಾರಕ್ಕೆ ಅರಣ್ಯ ಇಲಾಖೆಯ ವಿಭಿನ್ನ ಪ್ರಯತ್ನ.**

ಚಾರ್ವಿಕಾ ಸಾನ್ವಿ

ಸುತ್ತಲೂ ದಟ್ಟಾರಣ್ಯ, ಎತ್ತ ನೋಡಿದರೂ ಕಾಡೇ ಕಾಡು. ಮಲೆಗಳ ನಡುವೆಯೇ ಇರುವ ಪುಟ್ಟ ಪುಟ್ಟ ಹಳ್ಳಿಗಳು. ಅಲ್ಲಿ ಒಂದಷ್ಟು ಮನೆಗಳು. ಅದೇ ಹಳ್ಳಿಯಲ್ಲಿ ಬದುಕು ನಡೆಸುತ್ತಿರುವ ಜನರು. ಅವರಿಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಬರಬೇಕು ಎಂದರೆ ಸಾರಿಗೆ ಸಂಪರ್ಕವಿಲ್ಲ. ಇರುವ ಸಣ್ಣ ಪುಟ್ಟ ರಸ್ತೆಯಲ್ಲೇ ನಡೆದು ಬರಬೇಕು. ಶಾಲೆ, ಆಸ್ಪತ್ರೆ, ಪಡಿತರ ಪಡೆದುಕೊಳ್ಳಲು ಬರಬೇಕೆಂದರೆ ಅವರಿಗೆ ಕಾಲುನಡಿಗೆಯೇ ಆಸರೆ.

ಇದು ಕರ್ನಾಟಕ–ತಮಿಳುನಾಡು ರಾಜ್ಯಕ್ಕೆ ಹೊಂದಿಕೊಂಡಂತೆ ಇರುವ ಮಲೆ ಮಹದೇಶ್ವರ ಬೆಟ್ಟದ ಸುತ್ತಮುತ್ತಲಿನ ಅರಣ್ಯ ಪ್ರದೇಶ ಹಾಗೂ ಇಲ್ಲಿನ ಜನರ ನಿತ್ಯ ಬದುಕಿನ ಚಿತ್ರಣ. ಹಿಂದೆ ವೀರಪ್ಪನ್ ತನ್ನ ಕಾರ್ಯಕ್ಷೇತ್ರ ಮಾಡಿಕೊಂಡಿದ್ದ ಕರಾಳ ಇತಿಹಾಸವೂ ಈ ಕಾಡಿಗಿದೆ. ಹಲವು ವರ್ಷಗಳಿಂದ ವೀರಪ್ಪನ್ ಗದ್ದಲ ಇಲ್ಲದಿದ್ದರೂ ಅಭಿವೃದ್ಧಿ ಮಾಡಲಾಗದಷ್ಟು ಅರಣ್ಯ ಹಬ್ಬಿದೆ. ಕಾಡು ಬಿಟ್ಟು ನಾಡಿಗೆ ಬನ್ನಿ ಎಂದರೂ ಕೇಳದ ಇಲ್ಲಿನ ಜನ ಕಷ್ಟದ ನಡುವೆಯೇ ಬದುಕು ನಡೆಸಿಕೊಂಡು ಹೋಗುತ್ತಿದ್ದಾರೆ. ಶತಮಾನದಿಂದ ಇದೇ ಕಾಡಿನ ವಾಸಿಗಳಾದ ಇವರಿಗೆ ಊರು–ಕೇರಿ ಬಿಟ್ಟು ಹೋಗಲು ಮನಸಾಗುತ್ತಿಲ್ಲ.

ಕಾವೇರಿ ನದಿಯನ್ನು ಸೀಳಿಕೊಂಡು ಹೋಗುವ ಅರಣ್ಯ ಹಾಗೂ ಆಳವಾದ ಕಣಿವೆಯ ನಡುವೆ ಮಲೆ ಮಹದೇಶ್ವರ ವನ್ಯಜೀವಿ ವಿಭಾಗ ಹಾಗೂ ಕಾವೇರಿ ವನ್ಯಜೀವಿ ವಿಭಾಗ ಹಂಚಿ ಹೋಗಿವೆ. ಇದರಲ್ಲಿ ಮುಖ್ಯವಾಗಿ ಮಹದೇಶ್ವರ ವನ್ಯಜೀವಿ ವಿಭಾಗದ ವ್ಯಾಪ್ತಿಯಲ್ಲಿ ಈಗಲೂ ಅರಣ್ಯದೊಳಗೆ ಜನರ ವಾಸವಿದೆ. ಪುನರ್ವಸತಿ ಅಲ್ಲಲ್ಲಿ ಆಗಿದ್ದರೂ ಪೂರ್ಣಗೊಳಿಸಲು ಆಗಿಲ್ಲ. ಅರಣ್ಯ ಇಲಾಖೆಯು ಅವರನ್ನು ಕಾಡಿನಿಂದ ಹೊರಗೆ ಹಾಕಲು ಸಾಧ್ಯವಿಲ್ಲ. ಜನರೂ ಕಾಡು ಬಿಟ್ಟು ಬರಲೊಲ್ಲರು. ಇದಕ್ಕಾಗಿ ಅನಿವಾರ್ಯವಾಗಿ ಅರಣ್ಯ ಇಲಾಖೆಯು ಜನರ ವಿಶ್ವಾಸ ಗಳಿಸುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ರೂಪಿಸುತ್ತಿದೆ. ಈ ನಿಟ್ಟಿನಲ್ಲಿ ಇಲ್ಲಿನ ಜನರ ಸಂಚಾರಕ್ಕಾಗಿ 24 ಗಂಟೆಯೂ ಸೇವೆ ನೀಡುವಂತಹ ಜನವನ ಸೇತುವೆ ವಾಹನ



Downloaded From:www.kpscvaani.com

ಸೇವೆಯನ್ನು ದೇಶದಲ್ಲೇ ಮೊದಲ ಬಾರಿಗೆ ಆರಂಭಿಸಲಾಗಿದೆ.

ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ವ್ಯಾಪ್ತಿಗೆ ಬರುವ ನಗರ ಸಂಪರ್ಕದಿಂದ ದೂರವಿರುವ ಹತ್ತಕ್ಕೂ ಹೆಚ್ಚು ಹಳ್ಳಿಗಳ ಜನರ ಸೇವೆಗೆ ಅರಣ್ಯ ಇಲಾಖೆ ವಿವಿಧೋದ್ದೇಶ ವಾಹನ ಸೇವೆಯನ್ನು ಮೊದಲ ಬಾರಿಗೆ ಆರಂಭಿಸಿರುವುದು ವಿನೂತನ ಪ್ರಯತ್ನವಾಗಿದೆ. ಒಟ್ಟು ನಾಲ್ಕು ವಾಹನಗಳನ್ನು ಮಕ್ಕಳು ಮತ್ತು ಜನರ ತುರ್ತು ಸೇವೆಗೆ ದಿನದ 24 ಗಂಟೆಯೂ ಬಳಸಲು ಅವಕಾಶ ಕಲ್ಪಿಸಲಾಗುತ್ತಿದೆ. ಜಿಲ್ಲಾ ಖನಿಜ ನಿಧಿಯಡಿ ಸುಮಾರು 55 ಲಕ್ಷ ರೂ.ಗಳನ್ನು ಬಳಸಿ ನಾಲ್ಕು ವಾಹನಗಳನ್ನು ಖರೀದಿ ಮಾಡಲಾಗಿದೆ.

ಇಲ್ಲಿಯ ಜನರಿಗೆ ವಾಹನ ಸೇವೆ ಇಲ್ಲದಿರುವುದೇನೂ ಸಮಸ್ಯೆಯೇ ಅಲ್ಲ. ಆದರೂ ಇದಕ್ಕೆ ಪರಿಹಾರ ನೀಡಿರುವ ಅರಣ್ಯ ಇಲಾಖೆಯ ಪ್ರಯತ್ನ ಮಾತ್ರ ಹೊಸತನದಂತೆ ಕಾಣುತ್ತಿದೆ. ಜನರಿಗೆ ತುರ್ತು ಸೇವೆ ಒದಗಿಸುವ ವಾಹನ ಸೇವೆಯನ್ನು ಅರಣ್ಯ ಇಲಾಖೆ ಒದಗಿಸಿರುವುದು ಜನರ ಸಂತಸಕ್ಕೆ ಕಾರಣವಾಗಿದೆ.

ಗುಡ್ಡಗಾಡು ಪ್ರದೇಶದಲ್ಲಿ ಸರಾಗವಾಗಿ ಸಂಚರಿಸಬಲ್ಲ ಈ ವಾಹನಗಳು ಸಾರ್ವಜನಿಕ ವಾಹನವಾಗಿ ಕೆಲಸ ಮಾಡುತ್ತಿವೆ. ಶಾಲಾ ಬಸ್, ಪಡಿತರ ಸರಬರಾಜು ಮಾಡುವ ಬಸ್, ಅಲ್ಲದೇ ಆಂಬುಲೆನ್ಸ್ ಆಗಿಯೂ ಕಾರ್ಯನಿರ್ವಹಿಸುತ್ತಿವೆ. ಇದಕ್ಕಾಗಿ ನಾಲ್ಕು ಮಾರ್ಗಗಳನ್ನು ಗುರುತಿಸಲಾಗಿದ್ದು, ಆಯಾ ಮಾರ್ಗದಲ್ಲಿಯೇ ಸೇವೆ ಒದಗಿಸುತ್ತಿವೆ. ಜನರಿಗೆ ಕಾಡಾನೆ ಮಾತ್ರವಲ್ಲದೇ ವನ್ಯಜೀವಿಗಳ ಹಾವಳಿ, ಕಳ್ಳಕಾಕರ ತೊಂದರೆ ಜತೆಗೆ ತುರ್ತು ಇದ್ದಾಗ ಬೇಗ ಹೋಗಲು ಇದ್ದ ಅಡಚಣೆ ಈಗ ಕಡಿಮೆಯಾಗಿದೆ.



ಈ ವಾಹನ ಸೇವೆಯ ನಿರ್ವಹಣೆಗಾಗಿ ವಾಟ್ಸ್ ಆ್ಯಪ್ ಗ್ರೂಪ್‌ಗಳನ್ನು ಆರಂಭಿಸಲಾಗಿದೆ. ಆಸ್ಪತ್ರೆ, ಶಾಲೆ, ಪಡಿತರ ತರಲು ವಾಹನ ಬಳಕೆ ಸಂಪೂರ್ಣ ಉಚಿತ. ಇನ್ನು ಸಹಜವಾಗಿ ಹೋಗಬೇಕು ಎಂದರೆ ನಿಗದಿತ ದರ ಪಾವತಿಸಬೇಕು. ಜನರು ಇದಕ್ಕೂ ಒಗ್ಗಿಕೊಂಡು ಬಳಕೆ ಮಾಡಿಕೊಳ್ಳುತ್ತಿದ್ದಾರೆ.

ಚಾಮರಾಜನಗರ ಸುತ್ತಲೂ ಅರಣ್ಯ ಪ್ರದೇಶದಿಂದ ಕೂಡಿರುವ ಜಿಲ್ಲೆ. ಈ ಅರಣ್ಯಗಳ ನಡುವೆಯೂ ಜನರ ಜೀವನ ನಡೆದಿದೆ. ಅರಣ್ಯ ಭಾಗದ ಗ್ರಾಮಗಳಿಗೆ ಅಧಿಕಾರಿಗಳು ಭೇಟಿ ನೀಡಿದ್ದ ವೇಳೆ ವಾಹನ ವ್ಯವಸ್ಥೆ ಇಲ್ಲದಿರುವ ಬಗ್ಗೆ ಜನರು ಅಹವಾಲು ಸಲ್ಲಿಸಿದ್ದರು. ಹೀಗಾಗಿ ಜನರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ವಾಹನ ವ್ಯವಸ್ಥೆ ಕಲ್ಪಿಸಲಾಗಿದೆ. ಜಿಲ್ಲಾ ಖನಿಜ ನಿಧಿಯಿಂದ ನಾಲ್ಕು ವಾಹನಗಳನ್ನು ಕಲ್ಪಿಸಿದ್ದೇವೆ. ಜನರು ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ ಎಂದು ಚಾಮರಾಜನಗರ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಹೇಳುತ್ತಾರೆ.

ಮಲೆ ಮಹದೇಶ್ವರ ವನ್ಯಜೀವಿ ವಿಭಾಗ ವ್ಯಾಪ್ತಿಯ ಕೆಲವು ಹಳ್ಳಿಗಳಿಗೆ ಸಂಪರ್ಕದ ಸಮಸ್ಯೆ ಇತ್ತು. ಅಂತಹ ಹಳ್ಳಿಗಳಿಗೆ ವಾಹನ ಸೇವೆ ಒದಗಿಸಬೇಕು ಎಂಬ ಯೋಚನೆ ಅರಣ್ಯ ಇಲಾಖೆಗೂ ಇತ್ತು. ಜನರೂ ಸಾರ್ವಜನಿಕ ಸಂಪರ್ಕ ಸಭೆಗಳಲ್ಲಿ ದೂರು ನೀಡುತ್ತಲೇ ಇದ್ದರು. ಈ ಕುರಿತು ಚಾಮರಾಜನಗರ ಜಿಲ್ಲಾಧಿಕಾರಿಗಳೂ ಕೂಡ ಹಳ್ಳಿಗಳಿಗೆ ಬಂದು ಅಹವಾಲು ಪಡೆದಿದ್ದರು. ಕೊನೆಗೆ ಜಿಲ್ಲಾಡಳಿತದೊಂದಿಗೆ ಚರ್ಚಿಸಿ ಈ ಜನವನ ಸೇವೆ ಆರಂಭಿಸಲಾಯಿತು. ಇದರಿಂದ ಜನರ ಕಷ್ಟಕ್ಕೆ ಒಂದಿಷ್ಟು ಪರಿಹಾರ ಸಿಕ್ಕಿದೆ. ದೇಶದಲ್ಲೇ ಇಂಥದೊಂದು ಪ್ರಯತ್ನ ಆಗಿರುವುದು ನಮ್ಮಲ್ಲಿ ಎಂಬ ಹೆಮ್ಮೆಯು ಇದೆ ಎಂಬುದು ಮಲೆ ಮಹದೇಶ್ವರ ವನ್ಯಜೀವಿ ವಿಭಾಗ ಉಪ ಅರಣ್ಯ ಸಂರಕ್ಷಣಾಧಿಕಾರಿ ವಿ.ಏಡುಕೊಂಡಲು ಅವರು ಸಂತಸ ವ್ಯಕ್ತಪಡಿಸಿದ್ದಾರೆ.

ಈಗಲೂ ಸಂಚಾರ ಸಂಪರ್ಕಕ್ಕೆ ದೊಡ್ಡಾಣೆ, ಇಂಡಿಗನತ್ತ ಗ್ರಾಮಗಳ ಜನ ಪಡುವ ಕಷ್ಟ ಅಷ್ಟಿಷ್ಟಲ್ಲ. 10 ರಿಂದ 15. ಕಿ.ಮಿವರೆಗೆ ನಡೆದೇ ಹೋಗುವ ಸನ್ನಿವೇಶ. ಈಗ ಈ ವಾಹನ ಸೇವೆಯಿಂದ ತುರ್ತು ಸನ್ನಿವೇಶದಲ್ಲಾದರೂ ವಾಹನ ಸೇವೆ ಸಿಗುತ್ತಿದೆ ಎನ್ನುವ ಸಂತಸವಿದೆ. ವಾಟ್ಸ್ ಆ್ಯಪ್ ಗ್ರೂಪ್ ಬಳಸಿ ಸೇವೆ ಒದಗಿಸುವುದರಿಂದ ದುರುಪಯೋಗದ ಸನ್ನಿವೇಶವೂ ಬಂದಿಲ್ಲ ಎಂದು ಸ್ಥಳೀಯರು ಅಭಿಪ್ರಾಯ ಪಡುತ್ತಾರೆ.

ಕಾಡಿನಲ್ಲಿ ವಾಸಿಸುತ್ತಿರುವ ಜನರ ಸಮಸ್ಯೆಗೆ ಪರಿಹಾರ ಒದಗಿಸಿರುವುದು ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಯು ಜನರಿಗೆ ಹತ್ತಿರವಾಗುವ ಕೆಲಸ ಮಾಡುತ್ತಿರುವುದಕ್ಕೆ ಸಾಕ್ಷಿಯಾಗಿದೆ.






Downloaded From:www.kpscvaani.com







# ರೂಫ್ ಗಾರ್ಡನ್‌ನತ್ತ ಆಕರ್ಷಿತರಾಗುತ್ತಿರುವ ನಗರವಾಸಿಗರು

**ಸ್ಥಳಾವಕಾಶದ ಕೊರತೆಗೆ ಪರ್ಯಾಯವಾಗಿ "ರೂಫ್ ಗಾರ್ಡನ್" ಅಥವಾ "ಟೆರೇಸ್ ಗಾರ್ಡನ್"ಗೆ ನಗರವಾಸಿಗರು ಆಕರ್ಷಿತರಾಗುತ್ತಿದ್ದಾರೆ**

ಎಸ್. ಭುವನೇಶ್ವರಿ

ಒಂದೊಮ್ಮೆ ನೀವು ಅಪಾರ್ಟ್‌ಮೆಂಟ್ ಅಥವಾ ಅಂಗಳವಿಲ್ಲದ ಮನೆಯಲ್ಲಿ ವಾಸಿಸುತ್ತಿದ್ದು, ನಿಮಗೆ ಗಾರ್ಡನಿಂಗ್ ಮಾಡುವ ಹವ್ಯಾಸವಿದ್ದರೆ ಖಂಡಿತವಾಗಿ ನೀವು ರೂಫ್ ಗಾರ್ಡನ್ ಮಾಡಿಕೊಳ್ಳುವ ಮೂಲಕ ನಿಮ್ಮ ಹವ್ಯಾಸವನ್ನು ನಿರಾತಂಕವಾಗಿ ಆರಂಭಿಸಬಹುದು. ತಾರಸಿ ತೋಟಗಾರಿಕೆ ಮಾಡಿಕೊಳ್ಳುವುದು ಅಷ್ಟೊಂದು ಕಷ್ಟಕರವಾದ ಕೆಲಸವೇನಲ್ಲ. ತಾರಸಿ ತೋಟದಲ್ಲಿ ಕೇವಲ ಅರ್ಧಗಂಟೆ ಕಳೆಯುವುದರಿಂದ ಒತ್ತಡ ಮತ್ತು ಆತಂಕ ನಿವಾರಣೆಯಾಗುತ್ತದೆ. ಹಾಗಾಗಿ ಬಹಳಷ್ಟು ಜನರು ತಾರಸಿ ತೋಟವನ್ನು ಹೊಂದಲು ಬಯಸುತ್ತಾರೆ, ಆದರೆ ಅದನ್ನು ಹೇಗೆ ಪ್ರಾರಂಭಿಸಬೇಕು ಎಂದು ತಿಳಿದಿರುವುದಿಲ್ಲ. ಟೆರೇಸ್ ಗಾರ್ಡನ್ ಅನ್ನು ಸುಲಭವಾಗಿ ಮಾಡುವುದು ಹೇಗೆ ಎಂಬುದರ ಕುರಿತು ವಿವರವಾದ ಮಾಹಿತಿ ಇಲ್ಲಿದೆ.

ತರಕಾರಿಗಳು, ಹಣ್ಣುಗಳು ಅಥವಾ ಹೂವುಗಳನ್ನು ಟೆರೇಸ್‌ಗಳು, ಬಾಲ್ಕನಿಗಳು ಅಥವಾ ಕಟ್ಟಡಗಳ ಮೇಲ್ಛಾವಣಿಗಳ ಮೇಲೆ ಬೆಳೆಯುವ ವಿಧಾನವನ್ನು "ರೂಫ್ ಗಾರ್ಡನಿಂಗ್" (ಮೇಲ್ಛಾವಣಿ ತೋಟಗಾರಿಕೆ) ಎಂದು ಕರೆಯುತ್ತಾರೆ. ಸಾಕಷ್ಟು ಸೂರ್ಯನ ಬೆಳಕು ಮತ್ತು ನೀರಿನ ಲಭ್ಯತೆ ಇರುವ ಛಾವಣಿಯ ಮೇಲೆ ಛಾವಣಿಯ ಉದ್ಯಾನವನ್ನು ನಿರ್ಮಿಸುವ ಮೂಲಕ ಹಸಿರನ್ನು ಸೃಷ್ಟಿಸಬಹುದು. ತಾರಸಿ ತೋಟಗಳಲ್ಲಿ ಪ್ರಮುಖವಾಗಿ ತರಕಾರಿ ಮತ್ತು ಹೂವಿನ ಗಿಡಗಳನ್ನು ಬೆಳೆಯ ಬಹುದು.

ಒಂದು ಚದರ ಮೀಟರ್ ಟೆರೇಸ್‌ನಲ್ಲಿ ಪ್ರತಿ ವರ್ಷ 25 ರಿಂದ 50 ಕೆಜಿ ತರಕಾರಿಗಳನ್ನು ಬೆಳೆಯಬಹುದು. ಈ ರೂಫ್ ಗಾರ್ಡನ್‌ಗಳನ್ನು ವಸತಿ ಸಮುಚ್ಚಯಗಳು,



Downloaded From:www.kpscvaani.com

ವೈಯಕ್ತಿಕ ಮನೆಗಳು, ವಾಣಿಜ್ಯ ಕೇಂದ್ರಗಳು, ಗೋಡೌನ್‌ಗಳು ಮತ್ತು ಕಾರ್ಖಾನೆಗಳಂತಹ ಬಹುತೇಕ ಎಲ್ಲ ಕಟ್ಟಡಗಳ ಮೇಲೆ ಯಶಸ್ವಿಯಾಗಿ ಸ್ಥಾಪಿಸಬಹುದು.

ತಾರಸಿ ತೋಟ ಮಾಡುವ ಮೊದಲು ಕೈ ಹಾರೆ, ನೀರು ಸಿಂಪಡಿಸುವ ಬಾಟಲಿ, ಗಿಡಕತ್ತರಿಸುವ ಕತ್ತರಿ, ಕೈ ಗವಸುಗಳು, ಬಿದಿರಿನ ತುಕಡಿಗಳು ಮತ್ತು ಸೆಣಬಿನ ದಾರಗಳು, ಮಡಕೆಗಳು ಮತ್ತು ಕುಂಡಗಳು, ಗುಣಮಟ್ಟದ ಬೀಜಗಳು, ಆರೋಗ್ಯಕರ ಮಣ್ಣು, ಉತ್ತಮ ಸಾವಯವಗೊಬ್ಬರ, ನದಿ ಮರಳು, ಸಾವಯವ ಕೃಷಿ ರಾಸಾಯನಿಕಗಳು (ಪೋಷಕಾಂಶಗಳು, ಕೀಟನಾಶಕಗಳು, ಶಿಲೀಂಧ್ರನಾಶಕಗಳು) ಮತ್ತು ಇತರ ಸಾವಯವ ಪದಾರ್ಥಗಳು (ಬೇವಿನ ಎಣ್ಣೆ, ಬೇವಿನ ಹಿಂಡಿ, ಬೇವಿನ ಕಾಳು ರಸ), ಇತ್ಯಾದಿ ಸಾಮಗ್ರಿಗಳನ್ನು ಹೊಂದಿಸಿಕೊಳ್ಳಬೇಕಾಗುತ್ತದೆ.

ರೂಫ್ ಗಾರ್ಡನ್ ಮಾಡುವುದಕ್ಕೆ ವಿವಿಧ ಹಂತಗಳಿವೆ. ಮೊದಲಿಗೆ ಗಿಡಗಳು ಗಣನೀಯ ತೂಕವನ್ನು ಹೊಂದುವುರಿಂದ ಮೊದಲಿಗೆ ಕಟ್ಟಡವು ಈ ಹೆಚ್ಚುವರಿ ತೂಕವನ್ನು ತಾಳಿಕೊಳ್ಳಬಹುದೇ ಎಂಬುದನ್ನು ಪರೀಕ್ಷಿಸಿಕೊಳ್ಳಬೇಕು. ಹಾಗೆಯೇ ತಾರಸಿಯು ಸೋರುತ್ತಿಲ್ಲವೆಂದು ಖಚಿತಪಡಿಸಿಕೊಳ್ಳಬೇಕು. ಸೋರುವುದನ್ನು ತಪ್ಪಿಸಲು ಜಲ ನಿರೋಧಕವನ್ನು (Water proofing) ಮಾಡಿಸುವು ಉತ್ತಮ. ತಾರಸಿ ಮೇಲೆ ಹುಲ್ಲು ಹಾಸನ್ನು ಮಾಡಬೇಕಾದರೆ ತಾರಸಿಯ ಸಂಪೂರ್ಣ ಮೇಲ್ಮೈಯನ್ನು ಮಣ್ಣಿನಿಂದ ಮುಚ್ಚಬೇಕಾಗುತ್ತದೆ. ಹುಲ್ಲು ಹಾಸು ಬೇಡವಾದಲ್ಲಿ ಮಣ್ಣಿನ ಮತ್ತು ಪ್ಲಾಸ್ಟಿಕ್ ಕುಂಡಗಳಲ್ಲಿ ಅಥವಾ ಪ್ಲಾಸ್ಟಿಕ್ ಚೀಲಗಳಲ್ಲಿ (Grow bags) ಸಸಿಗಳನ್ನು ಬೆಳೆಸಬಹುದು.

ಯಾವುದೇ ಸಸ್ಯಗಳನ್ನು ಬೆಳೆಯಲು ನೀರು ಮತ್ತು ಪೋಷಕಾಂಶಗಳನ್ನು ಆಯಾ ಸಸ್ಯಗಳು ಸರಾಗವಾಗಿ ಹೀರಿಕೊಳ್ಳುವಂತಿರಬೇಕು. ಟೆರೇಸ್ ಗಾರ್ಡನ್‌ನಲ್ಲಿ ಬಳಸುವ ಮಣ್ಣು ಹಗುರ ಹಾಗೂ ಸರಂಧ್ರವಾಗಿದ್ದು, (Porous) ಗಾಳಿಯ ಚಲನೆ ಹಾಗೂ ನೀರಿನ ಸರಾಗ ಹರಿವಿಗೆ ಅವಕಾಶವಿರಬೇಕು. ನೀರು ಸರಾಗವಾಗಿ ಹರಿದು ಹೋಗದೇ, ಕುಂಡಗಳಲ್ಲಿಯೇ ನಿಲ್ಲುವುದರಿಂದ



(Water logging) ಬೇರುಗಳು ಕೊಳೆತು ಹೋಗಿ, ಗಿಡಗಳು ಬೆಳೆಯುವುದಿಲ್ಲ. ಆದ್ದರಿಂದ ಕುಂಡಗಳಲ್ಲಿ ಹೆಚ್ಚಾದ ನೀರು ಸರಾಗವಾಗಿ ಹರಿದು ಹೋಗುವಂತಿರಬೇಕು. ಇದಕ್ಕಾಗಿ ಡ್ರೈನೇಜ ಮ್ಯಾಟ್ ಅನ್ನು ಸಾಮಾನ್ಯವಾಗಿ ಬಳಸಲಾಗುತ್ತದೆ. ಇದರಿಂದ ಹೆಚ್ಚುವರಿ ನೀರಿನೊಂದಿಗೆ ಮಣ್ಣು ಹಾಗೂ ಪೋಷಕಾಂಶಗಳು ಹರಿದು ಹೋಗದಂತೆ ತಡೆಯಬಹುದು. ಆದರೆ ಈ ರೀತಿಯ ಆಧುನಿಕ ವಸ್ತುಗಳ ಅನುಪಸ್ಥಿತಿಯಲ್ಲಿ ಸುಟ್ಟ ಕಲ್ಲಿದ್ದಲು ಮತ್ತು ಮರಳಿನ ಹಾಸಿಗೆಯನ್ನು ರಂಧ್ರಗಳಿರುವ ಪೈಪ್‌ನೊಂದಿಗೆ ಬಳಸುವ ಮೂಲಕವೂ ಹೆಚ್ಚುವರಿ ನೀರನ್ನು ಹರಿದು ಹೋಗುವಂತೆ ಮಾಡಬಹುದು.

ಒಂದೊಮ್ಮೆ ನೀವು ಸಾಮಾನ್ಯ ಕುಂಡಗಳಲ್ಲಿ ಟೆರೇಸ್ ಗಾರ್ಡನ್ ಅನ್ನು ಮಾಡುತ್ತಿದ್ದರೆ ಯಾವುದೇ ಹೆಚ್ಚುವರಿ ಶ್ರಮ ವಹಿಸುವ ಅಗತ್ಯವಿಲ್ಲ. ಕುಂಡಗಳಿಂದ ಹೊರಬರುವ ಹೆಚ್ಚುವರಿ ನೀರು ಹೊರ ಹೋಗಲು ಸೂಕ್ತ ಪೈಪ್ ಅಳವಡಿಸಿದರೆ ಸಾಕು. ಇನ್ನು ನೀರನ್ನು ಮಿತವಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಲು ಅನುಕೂಲವಾಗುವಂತೆ ಹನಿ ನೀರಾವರಿ ಯೋಜನೆಯನ್ನು (Drip irrigation) ತಾರಸಿ ತೋಟದಲ್ಲೂ ಸಹ ಅಳವಡಿಸಬಹುದು.

ಸಾಮಾನ್ಯ ಉದ್ಯಾನಕ್ಕೆ ಹೋಲಿಸಿದರೆ ತಾರಸಿ ತೋಟಗಳು ಜಾಗದ ನಿರ್ಬಂಧವನ್ನು ಹೊಂದಿರುವುದರಿಂದ ಲಭ್ಯವಿರುವ ಜಾಗವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ದಿನದ ಗರಿಷ್ಠ ಸಮಯದವರೆಗೆ ನೆರಳು ಇರುವ ಪ್ರದೇಶಗಳು ಹಾಗೂ ಸೂರ್ಯನ ಬಿಸಿಲನ್ನು ಪಡೆಯುವ ಪ್ರದೇಶಗಳನ್ನು ಪರಿಶೀಲಿಸಬೇಕು.

ಕುಂಡಗಳನ್ನು ತೂಕಕ್ಕೆ ತಕ್ಕಂತೆ ವಿಂಗಡಿಸಬೇಕು. ಹೆಚ್ಚು ಭಾರವಿರುವ ಕುಂಡಗಳನ್ನು ಗೋಡೆಗಳ ಮೇಲೆ ಅಥವಾ ಕಾಂಕ್ರೀಟ್ ಬೀಮ್‌ಗಳ ಮೇಲೆ ಬರುವಂತೆ ಇಡಬೇಕು. ಇದರಿಂದ ಛಾವಣಿಯ ಮಧ್ಯಭಾಗದಲ್ಲಿ ಒಂದೇ ಜಾಗದಲ್ಲಿ ಕುಂಡಗಳ ಭಾರವು ಕೇಂದ್ರೀಕೃತವಾಗದಂತೆ ತಡೆಯಬಹುದು. ಹೆಚ್ಚು ಭಾರವಿಲ್ಲದ ಸಣ್ಣ ಕುಂಡಗಳನ್ನು ಛಾವಣಿಯ ಮಧ್ಯಭಾಗದಲ್ಲಿ ಹೊಂದಿಸಬೇಕು.

ಈ ವಿಧಾನದಿಂದ ಛಾವಣಿಯ ಮೇಲೆ ಹೆಚ್ಚು ಒತ್ತಡ ಉಂಟಾಗಿ, ಛಾವಣಿ ಅಥವಾ ಕಟ್ಟಡಕ್ಕೆ ಧಕ್ಕೆ ಉಂಟಾಗುತ್ತದೆ ಎಂದು ಹಲವರಲ್ಲಿ ಆತಂಕವಿರುತ್ತದೆ. ಆದರೆ ಒಂದು ಮಹಡಿಯ ಮೇಲೆ ಇನ್ನೊಂದು ಮಹಡಿಯನ್ನು ಕಟ್ಟುವಾಗ ಬಳಸುವ ಇಟ್ಟಿಗೆ, ಸಿಮೆಂಟ್, ಮರಳು, ಕಬ್ಬಿಣ ಇತ್ಯಾದಿ ಕಟ್ಟಡ ನಿರ್ಮಾಣದ ಸಾಮಗ್ರಿಗಳನ್ನು ಬಳಸಿ ಮನೆ ನಿರ್ಮಿಸುವಾಗ ಆಗುವ ಭಾರದ ಮುಂದೆ ಕೆಲವೇ ಕೆಲವು ಕುಂಡಗಳ ಭಾರವು ಏನೇನೂ ಅಲ್ಲ ಎನ್ನುವ ವಾಸ್ತವವನ್ನು ತಿಳಿದುಕೊಳ್ಳಬೇಕು. ಅಂದರೆ ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸಿ ವೈಜ್ಞಾನಿಕವಾಗಿ ರೂಫ್ ಗಾರ್ಡನ್ ನಿರ್ಮಾಣ ಮಾಡುವುದರಿಂದ ಕಟ್ಟಡಕ್ಕೆ ಯಾವುದೇ ರೀತಿಯ ಹಾನಿ ಸಂಭವಿಸುವುದಿಲ್ಲ.

ಇನ್ನು ಸಸ್ಯಗಳ ಆಯ್ಕೆಯು ಅತ್ಯಂತ



Downloaded From:www.kpscvaani.com



ಮಹತ್ವದ ಹಂತವಾಗಿದೆ. ಆಳವಾಗಿ ಬೇರು ಬಿಡದಂತಹ ಸಸ್ಯಗಳನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ. ಆಳವಾದ ಬೇರುಗಳುಳ್ಳ ಸಸ್ಯಗಳಿಗೆ ಹೆಚ್ಚು ಮಣ್ಣಿನ ಅಗತ್ಯವಿರುವುದರಿಂದ ಹೆಚ್ಚಿನ ತೂಕ ಹೊಂದುತ್ತವೆ. ಹಾಗೆಯೇ ಸೂರ್ಯನ ಬಿಸಿಲಿಗೆ ಅನುಗುಣವಾಗಿ ಬೆಳಕು ಅಗತ್ಯವಿರುವ ಸಸ್ಯಗಳು ಹಾಗೂ ಕಡಿಮೆ ಬೆಳಕು ಅಗತ್ಯವಿರುವ ಸಸ್ಯಗಳನ್ನು ಪ್ರತ್ಯೇಕವಾಗಿ ಹೊಂದಿಸಿಕೊಳ್ಳಬೇಕು.

ಹಾಗೆಯೇ ಸಸ್ಯಗಳಿಗೆ ಅನುಗುಣವಾಗಿ ಮಣ್ಣನ್ನು ಆಯ್ಕೆ ಮಾಡಬೇಕು. ಮಣ್ಣಿನಿಂದ ನೀರು ಸರಾಗವಾಗಿ ಹರಿದು ಹೋಗುವಂತಿರಬೇಕು. ಒಂದೊಮ್ಮೆ ನೀರು ಸರಾಗವಾಗಿ ಹರಿದು ಹೋಗದಿದ್ದರೆ ಸಸ್ಯಗಳ ಬೇರುಗಳು ಕೊಳೆತು ಸಸ್ಯಗಳು ಹಾಳಾಗುವ ಸಂಭವವಿರುತ್ತದೆ. 30% ತೋಟದ ಸಾಮಾನ್ಯ ಮಣ್ಣು, 30 % ತೆಂಗಿನ ನಾರಿನ ಹುಡಿ (Cocopeat), 30% ಎರೆಹುಳು ಗೊಬ್ಬರ ಅಥವಾ ಕೊಳೆತ ಸಗಣಿಯ ಗೊಬ್ಬರ ಅಥವಾ ಕಿಚನ್ ವೇಸ್ಟ್ ಗೊಬ್ಬರ ಹಾಗೂ 10% ಇಪ್ಸಮ್ ಸಾಲ್ಟ್, ಬೋನ್‌ಮೀಲ್, ಬೇವಿನ ಹಿಂಡಿ ಇತ್ಯಾದಿಗಳನ್ನು ಚೆನ್ನಾಗಿ ಮಿಶ್ರಣ ಮಾಡಿ ಕುಂಡಕ್ಕೆ ಮಣ್ಣನ್ನು ತಯಾರಿಸಿಕೊಳ್ಳಬೇಕು.

ತಾರಸಿ ತೋಟದಲ್ಲಿ ಗಿಡಗಳನ್ನು ನೆಡಲು ವಿವಿಧ ರೀತಿಯ ನಿರುಪಯುಕ್ತ ವಸ್ತುಗಳನ್ನು ಕುಂಡಗಳ ರೂಪದಲ್ಲಿ ಬಳಸಬಹುದು. ವಿವಿಧ ಅಳತೆಯ, ಪ್ಲಾಸ್ಟಿಕ್, ಸಿರಾಮಿಕ್, ಕಬ್ಬಿಣ ಅಥವಾ ಮಣ್ಣಿನ ಕುಂಡಗಳನ್ನು ಬಳಸಬಹುದು. ಅಲ್ಲದೇ ಹಳೆಯ ಮುರಿದ ಬಕೆಟ್‌ಗಳು, ಹಳೆಯ ಪ್ಲಾಸ್ಟಿಕ್ ಬಾಟಲಿಗಳು, ತೆಂಗಿನ ಚಿಪ್ಪುಗಳು, ಹಳೆಯ ಪ್ಲಾಸ್ಟಿಕ್ ಡಬ್ಬಗಳು ಇತ್ಯಾದಿಗಳನ್ನು ಕುಂಡಗಳ ರೂಪದಲ್ಲಿ ಬಳಸಬಹುದು. ಇತ್ತೀಚಿನ ದಿನಗಳಲ್ಲಿ ತೆಳುವಾದ ಪ್ಲಾಸ್ಟಿಕ್‌ನಿಂದ ತಯಾರಿಸಿದ ಚೀಲಗಳನ್ನು (Grow bags) ಟೆರೇಸ್ ಗಾರ್ಡನ್‌ನಲ್ಲಿ ಹೆಚ್ಚಾಗಿ ಬಳಸಲಾಗುತ್ತಿದೆ. ಈ ಗ್ರೋ ಬ್ಯಾಗ್‌ಗಳು ಹಗುರವಾಗಿದ್ದು, ದೀರ್ಘ ಬಾಳಿಕೆ ಬರುತ್ತವೆ. ಈ ಗ್ರೋಬ್ಯಾಗ್‌ಗಳು ತೋಟಗಾರಿಕಾ ಸಾಮಗ್ರಿಗಳು ದೊರೆಯುವ ಅಂಗಡಿಗಳಲ್ಲಿ ಹಾಗೂ ಆನ್‌ಲೈನ್‌ನಲ್ಲೂ ದೊರೆಯುತ್ತವೆ.

ಅಗತ್ಯವಿರುವ ಎಲ್ಲಾ ಸಸ್ಯಗಳು ಮತ್ತು ಕುಂಡಗಳನ್ನು ಖರೀದಿಸಿದ ನಂತರ ಅವುಗಳನ್ನು ಜೋಡಿಸಿ ತೋಟಗಾರಿಕೆಯನ್ನು ಪ್ರಾರಂಭಿಸಬಹುದು. ತಯಾರಾದ ತಾರಸಿ ತೋಟದಲ್ಲಿ ಹಗುರವಾದ ಪೀಠೋಪಕರಣಗಳಿಂದ ಅಲಂಕರಿಸಿ ಹಸಿರು ವಾತಾವರಣವನ್ನು ಆನಂದಿಸಬಹುದು.

ತಾರಸಿ ತೋಟವನ್ನು ಸ್ಥಾಪಿಸಲು ಸಹಾಯ ಮಾಡುವ ಹಲವಾರು ವೃತ್ತಿಪರ ಸೇವೆಗಳು ಲಭ್ಯವಿದ್ದು, ಅವುಗಳನ್ನು ಬಳಸಿಕೊಳ್ಳುವ ಮೂಲಕ ತಾರಸಿ ತೋಟಕ್ಕೆ ಸರಿಯಾದ ನಿರ್ವಹಣೆ ಮತ್ತು ಆರೈಕೆ ಮಾಡಬಹುದಾಗಿದೆ. ನಿಯಮಿತವಾಗಿ ಸಸ್ಯಗಳಿಗೆ ನೀರು ಹಾಕಬೇಕು ಮತ್ತು ಅವುಗಳನ್ನು ಕೀಟಗಳು ಮತ್ತು ಹುಳುಗಳಿಂದ ರಕ್ಷಿಸಲು ಆಗಾಗ್ಗೆ (15 ದಿನಕ್ಕೊಮ್ಮೆ) ಕೀಟನಾಶಕಗಳನ್ನು ಸಿಂಪಡಿಸಬೇಕು.

ತಾರಸಿ ತೋಟದಲ್ಲಿ ತರಕಾರಿ ಬೆಳೆಗಳಾದ ಟೊಮೊಟೋ, ಬದನೆಕಾಯಿ, ಮೆಣಸಿನಕಾಯಿ, ಬೆಂಡೇಕಾಯಿ, ಸೋರೆಕಾಯಿ, ಹೀರೆಕಾಯಿ, ಹಾಗಲಕಾಯಿ, ಮೂಲಂಗಿ, ವೀಳ್ಯದೆಲೆ, ಮುಂತಾದವುಗಳ ಜೊತೆಗೆ ಮಸಾಲೆ ಬೆಳೆಗಳಾದ ಅರಿಶಿಣ, ಕೊತ್ತಂಬರಿ ಮತ್ತು ಮೆಂತ್ಯಗಳನ್ನೂ ಬೆಳೆಯಬಹುದು. ಗುಲಾಬಿ, ದಾಸವಾಳ, ಮಲ್ಲಿಗೆ, ಬ್ರಹ್ಮಕಮಲ, ಮೊದಲಾದ ಹೂವಿನ ಗಿಡಗಳನ್ನು, ನೀರಿನಲ್ಲಿ ಬೆಳೆಯಬಹುದಾದ ಕಮಲ, ವಾಟರ್ ಲಿಲಿ, ವಾಟರ್ ಲೆಟ್ಟುಸ್‌ಗಳನ್ನೂ ಸಹ ತಾರಸಿ ತೋಟದಲ್ಲಿ ಬೆಳೆಸಬಹುದು.


ರೂಫ್ ಗಾರ್ಡನ್ ಮಾಡಲು ಅಂದಾಜು 15–20 ಸಾವಿರ ರೂಪಾಯಿ ಖರ್ಚಾಗುತ್ತದೆ. ಇದರಲ್ಲಿ ಬೀಜಗಳು, ಸಸಿಗಳು, ಕುಂಡಗಳು, ಮಣ್ಣು, ಗೊಬ್ಬರ, ಕೋಕೋಪೀಟ್ (ತೆಂಗಿನ ನಾರಿನಿಂದ ತಯಾರಿಸಿದ ಹಗುರವಾದ ವಸ್ತು) ಇತ್ಯಾದಿ ವೆಚ್ಚಗಳನ್ನು ಒಳಗೊಂಡಿರುತ್ತವೆ. ಒಂದು ವೇಳೆ ಪ್ರತಿ ತಿಂಗಳು ಸಣ್ಣ ಹೂಡಿಕೆಯೊಂದಿಗೆ ಪ್ರಾರಂಭಿಸಿದರೆ ಮತ್ತು ಮರು ಬಳಕೆಯ ಕಂಟೈನರ್‌ಗಳನ್ನು ಬಳಸುವ ಮೂಲಕ ವೆಚ್ಚ ಕಡಿಮೆ ಮಾಡಿಕೊಳ್ಳಬಹುದು.

ತಾರಸಿ ತೋಟ ಹವ್ಯಾಸವನ್ನು ಲಾಭದಾಯಕ ಮಾತ್ರವಲ್ಲದೇ ದೈಹಿಕ ವ್ಯಾಯಾಮ, ಸ್ಥಳದ ಉತ್ತಮ ಬಳಕೆ, ಸಮಯದ ಸದುಪಯೋಗ, ಪರಿಸರ ನೈರ್ಮಲ್ಯ, ಮನೆಯ ತ್ಯಾಜ್ಯವನ್ನು ಮರುಬಳಕೆ ಮಾಡುವುದು ಇತ್ಯಾದಿಯಾಗಿ ಪ್ರಯೋಜನ ಪಡೆಯಬಹುದು. ತಾರಸಿಯ ತಾಪಮಾನವನ್ನು ಕಡಿಮೆ ಮಾಡಲು ಇದು ಪರಿಣಾಮಕಾರಿಯಾಗಿದೆ. ವಾಸ್ತವವಾಗಿ ರೂಫ್ ಗಾರ್ಡನ್ ಪ್ರಾರಂಭಿಸಲು ಕೃಷಿ ಹಿನ್ನೆಲೆಯ ಅಗತ್ಯವಿಲ್ಲ. ಆರೋಗ್ಯಕರ ವಾತಾವರಣದೊಂದಿಗೆ ಉದ್ಯಾನವನ್ನು ನಿರ್ವಹಿಸಲು ದಿನಕ್ಕೆ ಒಂದು ಗಂಟೆ ವಿನಿಯೋಗಿಸಿದರೆ ಸಾಕು. ದಿನ ನಿತ್ಯ ವಾಹನಗಳು ಹಾಗೂ ಕಾರ್ಖಾನೆಗಳಿಂದ ಉಂಟಾಗುವ ವಾಯು ಮಾಲಿನ್ಯದಿಂದ ನಗರಗಳನ್ನು ಮುಕ್ತಗೊಳಿಸಿ, ಉಸಿರಾಡಲು ಪರಿಶುದ್ಧವಾದ ಗಾಳಿ ದೊರಕಲು ಸಹಕಾರಿಯಾಗಲಿದೆ.

ರೂಫ್ ಗಾರ್ಡನ್‌ಗಳು ಇಂಗಾಲದ ಡೈಆಕ್ಸೈಡ್ ಅನ್ನು ಹೀರಿಕೊಂಡು ಮನೆಯ ಸುತ್ತ–ಮುತ್ತಲಿನ ಶಾಖವನ್ನು ಕಡಿಮೆ ಮಾಡುವುದರಿಂದ ನೀವು ಮತ್ತು ನಿಮ್ಮ ಕುಟುಂಬ, ಅದರಲ್ಲೂ ವಿಶೇಷವಾಗಿ ಮಕ್ಕಳು ಬಿಡುವಿನ ವೇಳೆಯಲ್ಲಿ ಸಮಯ ಕಳೆಯಲು ಪ್ರಶಸ್ತವಾದ ಸ್ಥಳವಾಗಲಿದೆ. ■



Downloaded From:www.kpscvaani.com



## ಐತಿಹಾಸಿಕ ಬೀದರ ಕೋಟೆ ಮೇಲೆ

# ಆಕರ್ಷಕ ಏರ್ ಶೋ

**ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಬೀದರ ಕೋಟೆಯ ಮೇಲೆ ಸೂರ್ಯಕಿರಣ ವಿಮಾನಗಳ ಹಾರಾಟ ಪ್ರದರ್ಶನ ಜನಮೆಚ್ಚುಗೆಗೆ ಪಾತ್ರವಾಯಿತು.**

ಜಿ.ಸುರೇಶ

ಬೀದರ ಜಿಲ್ಲೆಯು ಐತಿಹಾಸಿಕ ಸ್ಥಳಗಳಿಗೆ ಪ್ರಸಿದ್ಧವಾಗಿದ್ದು, ಇಲ್ಲಿಗೆ ಪ್ರತಿದಿನ ಹಲವಾರು ಪ್ರವಾಸಿಗರು ಭೇಟಿ ನೀಡುತ್ತಾರೆ. ನರಸಿಂಹ ಝರಣಾ ಮಂದಿರ, ಪಾಪನಾಶ, ಶಿವ ದೇವಾಲಯ, ಮಹ್ಮದ ಗವಾನ ಮದರಸಾ, ಬೀದರಿನ ಐತಿಹಾಸಿಕ ಬಹುಮನಿ ಕೋಟೆ ಸೇರಿದಂತೆ ಹಲವಾರು ಪ್ರವಾಸಿ ತಾಣಗಳು ಬೀದರ ಜಿಲ್ಲೆಯಲ್ಲಿ ಇದ್ದು, ಇದು ಕರ್ನಾಟಕದ ನಕಾಶೆಯಲ್ಲಿ ಅತ್ಯಂತ ಎತ್ತರದಲ್ಲಿದೆ. ಬೀದರ್‌ನಲ್ಲಿ ಸಾಲು ಸಾಲು ಸ್ಮಾರಕಗಳು, ನಗರದ ಹೊರ ಭಾಗದಲ್ಲಿ ಸಾಲು ಸಾಲು ಗುಂಬಜ್‌ಗಳು ಸಿಗುತ್ತವೆ. ಈ ಕಾರಣದಿಂದಾಗಿಯೇ ಬೀದರ್‌ಗೆ ಗುಂಬಜ್‌ಗಳ ನಗರ ಎಂಬ ಪ್ರಸಿದ್ಧಿಯೂ ಇದೆ. ಹಾಗೆಯೇ ಒಳ್ಳೆಯ ವಾತಾವರಣ ಹೊಂದಿರುವ ಜಿಲ್ಲೆಯಾಗಿರುವುದರಿಂದ ಇದನ್ನು ಕರ್ನಾಟಕದ ಕಾಶ್ಮಿರ ಎಂದು ಕರೆಯುತ್ತಾರೆ.

ಈ ಐತಿಹಾಸಿಕ ಕೋಟೆಯ ಮೇಲೆ ಆಜಾದಿ ಕಾ ಅಮೃತ ಮಹೋತ್ಸವ ಅಂಗವಾಗಿ ಭಾರತೀಯ ವಾಯುಪಡೆ ಬೀದರ ಜಿಲ್ಲಾಡಳಿತದ ವತಿಯಿಂದ ಸೆಪ್ಟೆಂಬರ್ 2 ಮತ್ತು 3 ರಂದು ಏರ್ ಶೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಏರ್ ಶೋ ಕಾರ್ಯಕ್ರಮ ಮೊದಲ ದಿನ ಬೀದರ ನಗರದ ವಿವಿಧ ಶಾಲಾ





Downloaded From:www.kpscvaani.com



ಕಾಲೇಜಿನ ವಿದ್ಯಾರ್ಥಿಗಳಿಗೆ ಹಾಗೂ ಎರಡನೇಯ ದಿನ ಬೀದರ ನಗರದ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿತ್ತು. ಈ ಕಾರ್ಯಕ್ರಮದ ನಿರ್ವಹಣೆಯನ್ನು ಬೀದರ ಜಿಲ್ಲಾಡಳಿತ ಅಚ್ಚುಕಟ್ಟಾಗಿ ಆಯೋಜಿಸುವ ಮೂಲಕ ಬೀದರ ನಗರದ ಜನತೆಯ ಮೆಚ್ಚುಗೆಗೆ ಪಾತ್ರವಾಯಿತು.

ಬೀದರ ವಾಯುಪಡೆಯ 9 ಸೂರ್ಯಕಿರಣ ವಿಮಾನಗಳು ಗ್ರೂಪ್ ಕ್ಯಾಪ್ಟನ್ ಜಿ.ಎಸ್.ದಿಲ್ಲೊನ್ ಕಮಾಂಡಿಂಗ್ ಆಫೀಸರ್ ಸೂರ್ಯಕಿರಣ ಏರೋಬ್ಯಾಟಿಕ್ ಟೀಮ್ ನಾಯಕತ್ವದಲ್ಲಿ ಆಕರ್ಷಕ ಏರ್ ಶೋ ಪ್ರದರ್ಶನ ನೀಡಿ ಬೀದರ ನಗರದ ಜನರನ್ನು ಮಂತ್ರಮುಗ್ಧರನ್ನಾಗಿಸಿದರು.

> **ಬೀದರ್‌ನಲ್ಲಿ ಇದು ಸೇರಿದಂತೆ ಎರಡು ಬಾರಿ ಏರ್ ಶೋ ನಡೆಸಲಾಗಿದೆ. ಈ ಬಾರಿಯ ಏರೋ ಶೋ ಜನಮೆಚ್ಚುಗೆಯನ್ನು ಗಳಿಸಿರುವ ಕಾರಣ ಮುಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲು ನಮಗೆ ಹೆಚ್ಚಿನ ಉತ್ತೇಜನ ದೊರಕಿದಂತ್ತಾಗಿದೆ.**
>
> **ಗೋವಿಂದ ರೆಡ್ಡಿ**
> **ಬೀದರ್ ಜಿಲ್ಲಾಧಿಕಾರಿಗಳು**

ಸೂರ್ಯಕಿರಣ ವಿಮಾನಗಳು ಏಕಾಂಗಿಯಾಗಿ, ಜೋಡಿಯಾಗಿ ಹಾಗೂ ತಂಡಗಳಾಗಿ ಆಗಸದಲ್ಲಿ ವಿವಿಧ ರೀತಿಯ ಚಿತ್ರಗಳನ್ನು ಬಿಡಿಸುವ ಮೂಲಕ ಬಣ್ಣದ ಲೋಕವನ್ನು ಸೃಷ್ಟಿಸಿದಾಗ, ನೆರೆದಿದ್ದ ವಿವಿಧ ಶಾಲಾ–ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಕೇಕೆ ಹಾಕಿ ಚಪ್ಪಾಳೆ ಹೊಡೆಯುವ ಮೂಲಕ ಆಕರ್ಷಕ ಏರ್ ಶೋ ಪ್ರದರ್ಶನವನ್ನು ಕಣ್ತುಂಬಿಕೊಂಡರು.

ಏರ್ ಈ ಏರ್ ಶೋನ ವೀಕ್ಷಣೆಗೆ ನಿರೀಕ್ಷೆಗೂ ಮೀರಿ ಬೀದರ ನಗರದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಬೀದರ ಕೋಟೆಯ ಒಳಗಡೆ ಸೇರಿದ್ದರು. ಆಕರ್ಷಕ ರೀತಿಯಲ್ಲಿ ಏರ್ ಶೋ ನಡೆಸಿ ಬೀದರ ಜನರಿಗೆ ಮಂತ್ರಮುಗ್ದರನ್ನಾಗಿಸಿದ ಭಾರತೀಯ ವಾಯುಪಡೆ ಬೀದರನ ವಿವಿಧ ಪೈಲೆಟ್ ಹಾಗೂ ಅಧಿಕಾರಿಗಳಿಗೆ ಬೀದರ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಗೋವಿಂದ ರೆಡ್ಡಿ ಅವರು  ಅಭಿನಂದನೆ ಸಲ್ಲಿಸಿದರು.

ಈ ಏರ್ ಶೋ ಕಾರ್ಯಕ್ರಮದಲ್ಲಿ ನವೀಕರಿಸಬಹುದಾದ ಇಂಧನ ಮೂಲ ಹಾಗೂ ರಾಸಾಯನಿಕ ರಸಗೊಬ್ಬರ ಕೇಂದ್ರ ರಾಜ್ಯ ಖಾತೆ ಸಚಿವರಾದ ಭಗವಂತ ಖೂಬಾ, ಬೀದರ ಉತ್ತರ ಮತಕ್ಷೇತ್ರದ ಶಾಸಕರಾದ ರಹೀಮ್ ಖಾನ್, ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಡಾ.ಶೈಲೇಂದ್ರ ಕೆ.ಬೆಲ್ದಾಳೆ, ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬಾಬುವಾಲಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶಿಲ್ಪಾ ಎಂ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾದ ಡೆಕ್ಕಾ ಕಿಶೋರಬಾಬು, ಬೀದರ ವಾಯುಪಡೆ ಅಧಿಕಾರಿಗಳು, ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು, ಬೀದರ ನಗರದ ವಿವಿಧ ಶಾಲಾ–ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು, ಸಾರ್ವಜನಿಕರು ಸೇರಿದಂತೆ ಅಪಾರ ಮಂದಿ ಈ ಏರ್ ಶೋ ವೀಕ್ಷಣೆ ಮಾಡಿದರು.

ಪ್ರತಿ ಬಾರಿಯೂ ಬೆಂಗಳೂರು ಮಂದಿಗಷ್ಟೇ ಸಿಗುತ್ತಿದ್ದ ಏರ್ ಶೋ ನೋಡುವ ಅವಕಾಶವನ್ನು ಬೀದರ್ ಮಂದಿಗೂ ಸಿಗುವಂತೆ ಮಾಡಿದ ಜಿಲ್ಲಾಡಳಿತವನ್ನು ಸಾರ್ವಜನಿಕರು ಮುಕ್ತ ಕಂಠದಿಂದ ಪ್ರಶಂಸಿದರು. ■





Downloaded From:www.kpscvaani.com




# ಭಾರತ ಸಂವಿಧಾನ
# ಮೂಲಭೂತ ಕರ್ತವ್ಯಗಳು

1. ಪ್ರತಿಯೊಬ್ಬರು ಸಂವಿಧಾನಕ್ಕೆ ನಿಷ್ಠರಾಗಿರಬೇಕು. ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು ಹಾಗೂ ರಾಷ್ಟ್ರ ಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸಬೇಕು. ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆ ಭಾರತ ದೇಶದ ಪ್ರತಿಷ್ಠೆಯ ದ್ಯೋತಕಗಳು. ಇವುಗಳನ್ನು ಯಾವುದೇ ಕಾರಣಕ್ಕೂ ವಾಣಿಜ್ಯ ಉದ್ದೇಶಗಳಿಗೆ ಬಳಕೆ ಮಾಡುವಂತಿಲ್ಲ. ಅಲ್ಲದೆ ರಾಷ್ಟ್ರಧ್ವಜಕ್ಕೆ ಮತ್ತು ರಾಷ್ಟ್ರಗೀತೆಗೆ ಅವಮಾನ ಮಾಡುವುದು ಶಿಕ್ಷಾರ್ಹ ಅಪರಾಧವಾಗುತ್ತದೆ.

2. ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ಕೊಟ್ಟ ಉದಾತ್ತ ಆದರ್ಶಗಳನ್ನು ಮನನಗೊಳಿಸುವುದು ಮತ್ತು ಅದರಂತೆ ನಡೆದುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. (ಉದಾಹರಣೆ: 1857ರ ಸಿಪಾಯಿದಂಗೆ, ಗಾಂಧೀಜಿಯವರ ದಂಡಿ ಸತ್ಯಾಗ್ರಹ, ಜಲಿಯನ್ ವಾಲಾಬಾಗ್ ಮಾರಣ ಹೋಮ, ಸ್ವದೇಶಿ ಚಳುವಳಿ, ಭಾರತ ಬಿಟ್ಟು ತೊಲಗಿ ಚಳುವಳಿ, ಅಸಹಕಾರ ಚಳುವಳಿ ಇತ್ಯಾದಿ)

3. ಎಲ್ಲ ಭಾರತೀಯರು ರಾಷ್ಟ್ರದ ಸಾರ್ವಭೌಮತ್ವ, ಏಕತೆ, ಅಖಂಡತೆ ಮತ್ತು ನಿಷ್ಠೆಯನ್ನು ಎತ್ತಿ ಹಿಡಿಯಬೇಕು.

4. ದೇಶದ ರಕ್ಷಣೆಗೆ ಸಂಬಂಧಿಸಿದಂತೆ ಅವಶ್ಯಕತೆ ಬಿದ್ದಾಗ ರಾಷ್ಟ್ರದ ಸೇವೆಯಲ್ಲಿ ತೊಡಗಿಸಿಕೊಳ್ಳುವುದು.

5. ಭಾರತೀಯರು ಅವರು ಯಾವುದೇ ಧರ್ಮದವರಾಗಿರಲೀ, ಯಾವುದೇ ಭಾಷಿಕರಾಗಿರಲೀ, ಅಥವಾ ಪ್ರದೇಶದವರಾಗಿರಲೀ, ಪ್ರತಿಯೊಬ್ಬರು ಸಾಮರಸ್ಯವನ್ನು ಮತ್ತು ಭ್ರಾತೃತ್ವವನ್ನು ಪ್ರೇರೇಪಿಸಬೇಕು. (ಮಹಿಳೆಯರ ಆತ್ಮಗೌರವಕ್ಕೆ ಚ್ಯುತಿ ಬರುವಂಥ ಎಲ್ಲಾ ಆಚರಣೆಗಳನ್ನು ತ್ಯಜಿಸುವುದು; ಮಹಿಳೆಯರ ಅಪಹರಣ, ವರದಕ್ಷಿಣೆ ಕಿರುಕುಳ, ಸಜೀವ ದಹನ, ಮಹಿಳೆಯರ ಬಗ್ಗೆ ತಿರಸ್ಕಾರ ಭಾವ ಇತ್ಯಾದಿ ಆಚರಣೆಗಳು ನಿಲ್ಲಬೇಕು.)

6. ನಮ್ಮ ಸಮಷ್ಟಿ ಸಂಸ್ಕೃತಿಯ ಚಾರಿತ್ರಿಕ ಮೌಲ್ಯಗಳನ್ನು ಗೌರವಿಸುವುದರ ಜತೆಗೆ ಅವುಗಳನ್ನು ಕಾಪಾಡಿಕೊಂಡು ಬರುವುದು (ನಮ್ಮ ಸಂಸ್ಕೃತಿ, ನಮ್ಮ ಭಾಷೆ, ನಮ್ಮ ಸಂಗೀತ, ನಮ್ಮ ಉಡುಗೆ ತೊಡುಗೆಗಳ ಕುರಿತಾಗಿ ಗೌರವ, ಪಾಶ್ಚಿಮಾತ್ಯ ಸಂಸ್ಕೃತಿಯ ಅಂಧಾನುಕರಣೆಯನ್ನು ತ್ಯಜಿಸಿ, ನಮ್ಮ ಜೀವನ ಕ್ರಮದ ಮೌಲ್ಯಗಳನ್ನು ಎತ್ತಿ ಹಿಡಿಯುವುದು

7. ಅರಣ್ಯಗಳು, ಜಲ ರಾಶಿಗಳು, ಅಂದರೆ ಕೆರೆ, ಕಟ್ಟೆ, ನದಿ, ಸರೋವರಗಳು, ಅರಣ್ಯ ಜೀವಿಗಳು ಇವುಗಳನ್ನೆಲ್ಲ ಒಳಗೊಂಡಂತೆ ಪರಿಸರವನ್ನು ಕಾಪಾಡಿಕೊಳ್ಳುವುದಲ್ಲದೆ, ಅದನ್ನು ಉಳಿಸಿ ಬೆಳೆಸುವುದು (ಉದಾಹರಣೆಗೆ; ದಂತಕ್ಕಾಗಿ ಆನೆಗಳನ್ನು ಬೇಟೆಯಾಡುವುದು, ಚರ್ಮಕ್ಕಾಗಿ ಕಾಡು ಮೃಗಗಳನ್ನು ಕೊಲ್ಲುವುದು, ಪಶು ಪಕ್ಷಿಗಳನ್ನು ಬೇಟೆಯಾಡುವುದು, ಪರಿಸರಕ್ಕೆ ಹಾನಿ ಮಾಡುವುದು ಇತ್ಯಾದಿ)

8. ವೈಜ್ಞಾನಿಕ ಮನೋಧರ್ಮವನ್ನು, ಮಾನವೀಯತೆಯನ್ನು, ಅನ್ವೇಷಿಕ ಪ್ರವೃತ್ತಿ ಮತ್ತು ಸುಧಾರಣೆಯ ಮನೋಭಾವವನ್ನು ಬೆಳೆಸಿಕೊಳ್ಳಬೇಕು.


9. ಸಾರ್ವಜನಿಕ ಆಸ್ತಿಯನ್ನು ಕಾಪಾಡುವುದು ಮತ್ತು ಹಿಂಸಾ ಪ್ರವೃತ್ತಿಯನ್ನು ತ್ಯಜಿಸುವುದು. (ಇತ್ತೀಚಿನ ದಿನಗಳಲ್ಲಿ ಯಾವುದೇ ಚಳವಳಿಯಾಗಲೀ, ಯಾರ ಮೇಲೆ ಸಿಟ್ಟಿರಲಿ, ಬಸ್ಸುಗಳಿಗೆ ಬೆಂಕಿ ಹಚ್ಚುವುದು, ಕಟ್ಟಡಗಳ ಗಾಜುಗಳನ್ನು ಪುಡಿ ಮಾಡುವುದು, ಹಿಂಸಾಚಾರದಲ್ಲಿ ತೊಡಗುವುದು ಕಂಡು ಬರುತ್ತದೆ. ಇಂಥ ಕೃತ್ಯಗಳು ಸಭ್ಯವಲ್ಲ)

10. ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳ ಪರಿಧಿಯಲ್ಲಿ ಉತ್ಕೃಷ್ಟತೆ ಅಥವಾ ಮೇಲ್ಮೆಯನ್ನು ಸಾಧಿಸುವುದಕ್ಕೆ ಶ್ರಮಿಸುವುದು. ಇದರಿಂದ, ರಾಷ್ಟ್ರ ನಿರಂತರವಾಗಿ ಉದ್ಯಮಶೀಲತೆಯ ಮತ್ತು ಸಾಧನೆಯ ಮಟ್ಟಗಳನ್ನು ಎತ್ತರೆತ್ತರಕ್ಕೆ ತೆಗೆದುಕೊಂಡು ಹೋಗಲು ಅನುವಾಗುತ್ತದೆ.

11. ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ನೀಡುವುದು ತಂದೆ– ತಾಯಿಗಳು ಅಥವಾ ಪೋಷಕರಾದವರ ಕರ್ತವ್ಯ. 6 ರಿಂದ 14ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವುದು ಕಡ್ಡಾಯವಾಗಿದೆ.

Downloaded From:www.kpscvaani.com

# ಪದಬಂಧ-36



ವಿದ್ಯಾ ವಿ. ಹಾಲಭಾವಿ

## ಎಡದಿಂದ ಬಲಕ್ಕೆ

1. ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ (3)
2. ಸೇನಾನಾಯಕನಿವನು (4)
4. ವೀರನಾರಾಯಣನ ದೇವಸ್ಥಾನವಿರುವ ಊರು (3)
7. ಸಭೆಯಲ್ಲಿ ಕುಳಿತಿರುವವನು (3)
8. ವಿನಾಯಕನ ಇನ್ನೊಂದು ಹೆಸರು (4)
9. ಜವಾನನ ಸುತ್ತ ನೆರೆದಿರುವ ಮಂದಿ (2)
10. ಉತ್ತರದವರ ಚಿಕ್ಕಪ್ಪ (2)
11. ವಿದಾಯ ಹೇಳಲು ನೆರೆದ ಸಮೂಹ (4)
13. ಇರುಳಿಗೊಂದು ಪರ್ಯಾಯ ಪದ (3)
14. ಕರಿಯೊಳಗಿರುವ ಸುಗಂಧದ್ರವ್ಯ! (3)
16. ಓಟನ್ನು ನೀಡುವವನು (4)
17. ಕಣದೊಳಗೆ ನಡೆದ ಮದುವೆ (3)

## ಮೇಲಿಂದ ಕೆಳಕ್ಕೆ

1. ಸ್ಥಗಿತವಾಗಿದ್ದ ಈ ಸಕ್ಕರೆ ಕಾರ್ಖಾನೆ ಇತ್ತೀಚೆಗಷ್ಟೇ ಪುನರಾರಂಭವಾಯಿತು(4)
2. ನದಿ ಸಮುದ್ರಗಳ ತೀರ(2)
3. ಕಿರೀಟಧಾರಣ ಮಹೋತ್ಸವ(5)
5. ಗಮನವಿಟ್ಟು ನೋಡಿ! ಆಕಾಶ ಇಲ್ಲಿ ಕಾಣುತ್ತಿದೆ!(3)
6. ಈ ಬಾರಿಯ ದಸರಾವನ್ನು ಇವರು ಉದ್ಘಾಟಿಸಿದರು (5)
9. ಮಂದಿಗೆಲ್ಲಾ ತಿಳಿದಿರುವಂಥದ್ದು(5)
10. ಕಾಯ ಬಗ್ಗಿಸಿ ಮಾಡಿದ ಕೆಲಸ(3)
12. ಹರಿಯ ಮುಂದಿರಿಸಿದ ಅಗಲವಾದ ತಟ್ಟೆ(4)
15. ಏಳು ದಿನಗಳ ಅವಧಿ(2)

**ಉತ್ತರ**

**ಮೇಲಿಂದ ಕೆಳಕ್ಕೆ**

1. ಮೈಶುಗರ್ 2. ದಡ 3. ಪಟ್ಟಾಭಿಷೇಕ 5. ಗಗನ 6. ಚಂದ್ರಶೇಖರಕಂಬಾರ
9. ಜನಜನಿತ 10. ಕಾಯಕ 12. ಹರಿವಾಣ 15. ವಾರ

**ಎಡದಿಂದ ಬಲಕ್ಕೆ**

1. ಮೈಸೂರು 2. ದಳಪತಿ 4. ಗದಗ 7. ಸಭಿಕ 8. ಗಣಪತಿ
9. ಜನ 10. ಕಾಕ 11. ಸಮುದಾಯ 13. ರಾತ್ರಿ 14. ಕಸ್ತೂರಿ
16. ಮತದಾರ 17. ಕಲ್ಯಾಣ

**-: ಸೂಚನೆ :-**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com



ಸೆಪ್ಟೆಂಬರ್ 16 ರಂದು ವಿಧಾನಸೌಧದ ಮೆಟ್ಟಿಲುಗಳ ಬಳಿ ಬಹುಮಹಡಿ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಫಾಯಿ ಕರ್ಮಚಾರಿಗಳಿಗೆ ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳನ್ನು ಮುಖ್ಯಮಂತ್ರಿ ಅವರು ವಿತರಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿಗಳಾದ ಸಿ.ಟಿ ರವಿ, ಸಚಿವರಾದ ಗೋವಿಂದ ಕಾರಜೋಳ, ಕೋಟ ಶ್ರೀನಿವಾಸ ಪೂಜಾರಿ, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾದ ಶಿವಣ್ಣ ಅವರು ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.



ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದಲ್ಲಿ ಪ್ರಾರಂಭಿಸಲಾದ ಎಕ್ಸ್‌ಪ್ರೆಸ್ ಕ್ಲಿನಿಕ್ ಅನ್ನು ಮುಖ್ಯಮಂತ್ರಿ ಅವರು ಉದ್ಘಾಟಿಸಿ, ಅಲ್ಲಿಯ ಸೌಲಭ್ಯಗಳನ್ನು ಪರಿಶೀಲನೆ ಮಾಡುತ್ತಿರುವುದು. ಈ ಸಂದರ್ಭದಲ್ಲಿ ಐಟಿ ಬಿಟಿ, ಉನ್ನತ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಬಿಬಿಎಂಪಿ ಮುಖ್ಯ ಆಯುಕ್ತರಾದ ತುಷಾರ್ ಗಿರಿನಾಥ್ ವಿಶೇಷ ಆಯುಕ್ತರಾದ ಡಾ.ತ್ರಿಲೋಕ ಚಂದ್ರ ಮತ್ತಿತರ ಗಣ್ಯರು ಉಪಸ್ಥಿತರಿದ್ದಾರೆ.

Downloaded From:www.kpscvaani.com

"VARTHA JANAPADA" Monthly - October 2022
"ವಾರ್ತಾ ಜನಪದ" ಮಾಸಿಕ – ಅಕ್ಟೋಬರ್ 2022

Page No. -52
RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




Downloaded From:www.kpscvaani.com